ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 5 ಗುರುವಾರ 2023

ಸಂಪುಟ: 43 | ಸಂಚಿಕೆ: 259 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರ ಹಿಡಿಯಲು ಮಠಗಳ ಮೊರೆ!

ಬೆಂಗಳೂರು, ಜ. 4(ಕೆಎಂಶಿ)- ಕರ್ನಾಟಕದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ಬಿಜೆಪಿ ವರಿಷ್ಠರು ರಾಜ್ಯದ ಮಠಗಳ ಓಲೈಕೆಗೆ ಮುಂದಾಗಿದ್ದಾರೆ.

ರಾಜ್ಯ ವಿಧಾನಸಭೆಗೆ ನಡೆಯುವ ಚುನಾವಣೆಗೆ ಪಕ್ಷ ಸಂಘಟನೆ ಒಂದು ಕಡೆಯಾದರೆ, ವಿವಿಧ ಸಮುದಾಯದ ಮಠಗಳನ್ನು ವಿಶ್ವಾಸಕ್ಕೆ ಪಡೆದು, ಮತ ಪಡೆಯಲು ಬಿಜೆಪಿ ಹೊರಟಿದೆ.


ಏಪ್ರಿಲ್-ಮೇ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೆ ಕಳೆದ ಮೂರು ನಾಲ್ಕು ತಿಂಗಳಲ್ಲೇ ದೆಹಲಿ ನಾಯಕರು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಈಗಾಗಲೇ ಮೂರು ಬಾರಿ ರಾಜ್ಯಕ್ಕೆ ಭೇಟಿ ನೀಡಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯಕ್ಕೆ ಎರಡು ಬಾರಿ ಭೇಟಿ ನೀಡಿದ್ದು, ಈ ಸಂದರ್ಭದಲ್ಲಿ ತುಮಕೂರಿನ ಸಿದ್ಧಗಂಗಾ ಮಠ ಹಾಗೂ ಒಕ್ಕಲಿಗ ಸಮುದಾಯಕ್ಕೆ ಸೇರಿದ ಆದಿಚುಂಚನಗಿರಿ ಮಠಗಳಿಗೆ ತೆರಳಿ ಶ್ರೀಗಳ ಆಶೀರ್ವಾದ ಪಡೆದಿದ್ದಾರೆ. ಇದೀಗ ಬಿಜೆಪಿ ▶ 6ನೇ ಪುಟಕ್ಕೆ

ಅನೇಕ ಪೊಲೀಸ್ ಠಾಣೆಗಳಲ್ಲಿ ಕೇಸ್‌ಗಳಿರುವ

ಸ್ಯಾಂಟ್ರೋ ರವಿಗೆ ಹಲವು ಸಚಿವರ ಸಖ್ಯ!?

ಭಾವಚಿತ್ರಗಳ ಪ್ರದರ್ಶಿಸಿದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ

- ಮೈತ್ರಿ ಸರ್ಕಾರ ಪತನಗೊಳಿಸಲು ಮುಂಬೈಗೆ ತೆರಳಿದ್ದವರು ಮೋಜು ಮಾಡಲು 12 ಯುವತಿಯರ ಕಳಿಸಿಕೊಟ್ಟಿದ್ದು ಯಾರು?
- ಆ 12 ಯುವತಿಯರ ಮುಂಬೈಗೆ ಕರೆದೊಯ್ದವರು ಯಾರು?
- ದಮ್ಮು, ತಾಕತ್ತು ಇದ್ದರೆ ಮುಖ್ಯಮಂತ್ರಿಗಳು ಜನರಿಗೆ ತಿಳಿಸಲಿ: ಹೆಚ್‌ಡಿಕೆ ಆಗ್ರಹ
- ಸ್ಯಾಂಟ್ರೋ ರವಿ ಕುಮಾರ ಕೃಪಾದಲ್ಲಿ ಕಳೆದ ತಿಂಗಳವರೆಗೂ ತಂಗಲು ಕೊಠಡಿ ಕೊಟ್ಟವರು ಯಾರು? ಕೊಡುವಂತೆ ಹೇಳಿದವರು ಯಾರು?
- ಪೊಲೀಸ್ ವರ್ಗಾವಣೆಯಲ್ಲಿ ಲಕ್ಷ-ಲಕ್ಷ ವ್ಯವಹಾರದ ಆಡಿಯೋ ಬಿಡುಗಡೆ
- ಪೊಲೀಸ್ ಅಧಿಕಾರಿಗಳಿಗೆ ಸ್ಯಾಂಟ್ರೋ ರವಿ ಧಮ್ಕಿ ಹಾಕುವುದೆಂದರೆ ಏನು?



ಬೆಂಗಳೂರು, ಜ.4-ಹತ್ತಾರು ಕೇಸ್‌ಗಳನ್ನು ಹಾಕಿಸಿಕೊಂಡಿರುವ ಸ್ಯಾಂಟ್ರೋ ರವಿಗೆ ಯಾವ್ಯಾವ ಮಂತ್ರಿ ಜೊತೆ ಸಂಬಂಧವಿದೆ? ನನ್ನ ಸರ್ಕಾರವನ್ನು ಪತನಗೊಳಿಸಲು ಮುಂಬೈಗೆ ತೆರಳಿದ್ದವರು ಮೋಜು ಮಾಡಲು 12 ಯುವತಿಯರನ್ನು ಕಳುಹಿಸಿಕೊಟ್ಟಿದ್ದು ಯಾರು? ಆ ಯುವತಿಯರನ್ನು ಮುಂಬೈಗೆ ಕರೆದೊಯ್ದವರು ಯಾರು ಎಂಬುದನ್ನು ದಮ್ಮು, ತಾಕತ್ತು ಇದ್ದರೆ ಮುಖ್ಯಮಂತ್ರಿಗಳು ಜನತೆಗೆ ತಿಳಿಸಲಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಬೆಂಗಳೂರಿನ ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಪ್ರಭಾವಿ ಶಾಸಕರ ಜೊತೆ ಸ್ಯಾಂಟ್ರೋ ರವಿಗೆ ಇರುವ ಸಂಬಂಧದ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕೆಂದು ತಾವು ಆಗ್ರಹಿಸುವುದಾಗಿ ತಿಳಿಸಿದ ಅವರು, ಆತನೊಂದಿಗೆ ಫೋಟೋದಲ್ಲಿ ಫೋಸ್ ಕೊಟ್ಟಿರುವ ಸಚಿವರ ಕೆಲ ಭಾವಚಿತ್ರಗಳನ್ನು ಮಾಧ್ಯಮಗಳಿಗೆ ಪ್ರದರ್ಶಿಸಿದರು.

ಸ್ಯಾಂಟ್ರೋ ರವಿಯೊಂದಿಗೆ ಬಿಜೆಪಿ ಸರ್ಕಾರದ ಯಾವ ಮಂತ್ರಿ ಸಂಪರ್ಕದಲ್ಲಿ ಇಲ್ಲಾ ಹೇಳಿ? ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಸ್ಯಾಂಟ್ರೋ ರವಿ ಎಂಬ ವ್ಯಕ್ತಿ ಯಾರು? ಈ ಸರ್ಕಾರದಲ್ಲಿ ಯಾರೊಂದಿಗೆ ಈತನ ಸಂಪರ್ಕವಿದೆ. ಇವನ ಬಗ್ಗೆ ಮಾಹಿತಿಯನ್ನು ರಹಸ್ಯವಾಗಿ ಡುವಂತೆ ಯಾರಿಗೆ ಸೂಚನೆ ಕೊಟ್ಟಿದ್ದೀರಿ ಎಂದು ಮುಖ್ಯಮಂತ್ರಿಗಳನ್ನುದ್ದೇಶಿಸಿ ಕುಮಾರಸ್ವಾಮಿ ಪ್ರಶ್ನೆ ಎಸೆದರು.

ಸ್ಯಾಂಟ್ರೋ ರವಿ ವಿರುದ್ಧ 1995ರಿಂದಲೇ ಕೇಸ್‌ಗಳಿವೆ. ಕೇವಲ ಯಾವುದೋ ಒಂದು ಠಾಣೆಯಲ್ಲಿ ಮಾತ್ರ ಕೇಸ್ ಇದೆ ಎಂದು ಹೇಳಲಾಗುವುದಿಲ್ಲ. ಮೈಸೂರಿನ ನಜರ್‌ಬಾದ್, ಕುವೆಂಪುನಗರ, ನರಸಿಂಹರಾಜ, ಮಂಡಿ, ಬೆಂಗಳೂರಿನ ಜಯನಗರ, ಮೈಕೋ ಲೇಔಟ್, ▶ 8ನೇ ಪುಟಕ್ಕೆ

ಪದವೀಧರೆ ಮೇಲೆ ಅತ್ಯಾಚಾರ,ಜಾತಿ ನಿಂದನೆ: ಸ್ಯಾಂಟ್ರೋ ರವಿ ವಿರುದ್ಧ ಕೇಸ್ ದಾಖಲು



ಮೈಸೂರು, ಜ.4-ಪದವೀಧರೆಯನ್ನು ಅತ್ಯಾಚಾರ ಮಾಡಿ, ಬಲವಂತವಾಗಿ ಮದುವೆಯಾದ ನಂತರ ಜಾತಿ ನಿಂದನೆ ಮಾಡಿರುವ ಬಗ್ಗೆ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಸ್ಯಾಂಟ್ರೋ ರವಿ ಮೊದಲಿಗೆ ಫೈನಾನ್ಷಿಯಲ್ ಅಸಿಸ್ಟೆಂಟ್ ಹುದ್ದೆಗೆ ಬೇಕಾಗಿದ್ದಾರೆ ಎಂದು ಪತ್ರಿಕೆಯಲ್ಲಿ 2019ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಜಾಹೀರಾತು ನೀಡಿದ್ದಾನೆ. ಜಾಹೀರಾತಿನಲ್ಲಿದ್ದ ಮೊಬೈಲ್ ಸಂಖ್ಯೆಗೆ ಮೈಸೂರಿನ ವಿಜಯನಗರ ನಿವಾಸಿ 27 ವರ್ಷ ವಯಸ್ಸಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರೆ 2019ರ ಮಾರ್ಚ್ 2ರಂದು ಕರೆ ಮಾಡಿದಾಗ, ಸ್ಯಾಂಟ್ರೊ ರವಿ ಆಫೀಸ್ ಬಾಯ್ ಎನ್ನಲಾದ ಮಧುಸೂದನ್ ಯುವತಿಯ ಮನೆ ಬಳಿಗೇ ತೆರಳಿ ಆಕೆ ಮತ್ತು ಆಕೆಯ ತಂಗಿಯನ್ನು ವಿಜಯನಗರ 4ನೇ ಹಂತದ ಮನೆಯೊಂದಕ್ಕೆ ಕರೆದೊಯ್ದಿದ್ದಾನೆ. ಮನೆಯ ಮುಂಭಾಗ ಯಾವುದೇ ನಾಮಫಲಕ ಇರಲಿಲ್ಲ. ಹಾಲ್‌ನಲ್ಲಿ "ಶ್ರೀ ಕುಕ್ಕೆ ಸುಬ್ರಹ್ಮಣ್ಯ ಎಂಟರ್ ಪ್ರೈಸಸ್" ಎಂಬ ಬೋರ್ಡ್ ಜೊತೆಗೆ "ಕೆ.ಎಸ್. ಮಂಜುನಾಥ್, ಬಿ.ಎ., ಫೈನಾನ್ಷಿಯರ್" ಎಂಬ ಬೋರ್ಡ್ ಕೂಡ ಇದ್ದು, ಆತ ಯುವತಿಯನ್ನು ಸಂದರ್ಶನ ನಡೆಸಿ, ಆಕೆಯ ವಿದ್ಯಾಭ್ಯಾಸ ಹಾಗೂ ಕೌಟುಂಬಿಕ ವಿವರಗಳನ್ನು ತಿಳಿದುಕೊಂಡು ವಾಪಸ್ ಕಳುಹಿಸಿದ್ದಾನೆ. ಕೆಲ ನಿಮಿಷಗಳಲ್ಲೇ ಆಕೆಯ ಮೊಬೈಲ್‌ಗೆ "ಯು ಆರ್ ಸೆಲೆಕ್ಟೆಡ್" ಎಂಬ ಮೆಸೇಜ್ ಕಳುಹಿಸಿದ ನಂತರ ಯುವತಿಗೆ ಆತನೇ ಹೊಸ ಮೊಬೈಲ್ ಮತ್ತು ಸಿಮ್ ಕಾರ್ಡ್ ಅನ್ನು ಆಕೆಯ ಹೆಸರಿನಲ್ಲೇ ಕೊಡಿಸಿದ್ದಾನೆ. ಈ ಯುವತಿ ▶ 8ನೇ ಪುಟಕ್ಕೆ

ಸ್ಯಾಂಟ್ರೋ ರವಿ ಬಂಧಿಸಿ, ಸಮಗ್ರ ತನಿಖೆಗೆ ದಸಂಸ ಆಗ್ರಹ

ಮೈಸೂರು, ಜ.4-ಹಣಕಾಸು ಸಂಸ್ಥೆಯಲ್ಲಿ ಕೆಲಸ ಕೊಡಿಸುವ ನೆಪದಲ್ಲಿ ದಲಿತ ಯುವತಿ ಮೇಲೆ ಅತ್ಯಾಚಾರ ನಡೆಸಿರುವ ಸ್ಯಾಂಟ್ರೋ ರವಿಯನ್ನು ಬಂಧಿಸಿ ಸಮಗ್ರ ತನಿಖೆ ನಡೆಸಬೇಕು. ಆತನ ಅಕ್ರಮ ಚಟುವಟಿಕೆಗಳಿಗೆ ಬೆಂಬಲವಾಗಿ ನಿಂತಿರುವ ಸಚಿವರು ಹಾಗೂ ಹಿರಿಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ದಸಂಸ ಆಗ್ರಹಿಸಿದೆ.

ತನ್ನ ಮೇಲೆ ಅತ್ಯಾಚಾರ ನಡೆಸಿ, ದೌರ್ಜನ್ಯವೆಸಗಲಾಗಿದೆ ಎಂದು ಸ್ಯಾಂಟ್ರೋ ರವಿ ವಿರುದ್ಧ ವಿಜಯನಗರ ಠಾಣೆಗೆ ದೂರು ಸಲ್ಲಿಸಿ, ಒಡನಾಡಿ ಸೇವಾ ಸಂಸ್ಥೆಯಲ್ಲಿ ಆಶ್ರಯ ಪಡೆದಿರುವ ಸಂತ್ರಸ್ತೆಯನ್ನು ಭೇಟಿ ಮಾಡಿದ ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ ಮತ್ತು ಆಲಗೂಡು ಶಿವಕುಮಾರ್ ಅವರುಗಳು ಆಕೆಯಿಂದ ಸಮಗ್ರ ಮಾಹಿತಿ ಪಡೆದ ನಂತರ ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

ಪ್ರಭಾವಿ ಸಚಿವರು ಮತ್ತು ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳ ಸಹಕಾರದೊಂದಿಗೆ ಅಕ್ರಮ ಚಟುವಟಿಕೆಗಳನ್ನು ನಡೆಸುತ್ತಿರುವ ಸ್ಯಾಂಟ್ರೋ ರವಿ ಅಸಹಾಯಕ ದಲಿತ ಯುವತಿಯರನ್ನೇ ಗುರಿಯಾಗಿಸಿಕೊಂಡು, ಕೆಲಸದ ಆಮಿಷವೊಡ್ಡಿ ಅವರ ಮೇಲೆ ದೌರ್ಜನ್ಯವೆಸಗುತ್ತಿರುವುದು ದಾಖಲೆಗಳಿಂದ ಸಾಬೀತಾಗಿದೆ ಎಂದು ಅವರು ತಿಳಿಸಿದರು. ಜ.1ರಂದು ವಿಜಯನಗರ ಠಾಣೆಯಲ್ಲಿ ದೂರು ನೀಡಿರುವ ಸಂತ್ರಸ್ತೆಯನ್ನು ಹಣಕಾಸು ಸಂಸ್ಥೆಯಲ್ಲಿ ಕೆಲಸ ಕೊಡಿಸುವ ನೆಪದಲ್ಲಿ ಸ್ಯಾಂಟ್ರೋ ರವಿ ಕರೆಸಿಕೊಂಡಿದ್ದ. ನಂತರ ಆಕೆ ಮೇಲೆ ಅತ್ಯಾಚಾರವೆಸಗಿ, ದೌರ್ಜನ್ಯವೆಸಗಿದ್ದಾನೆ. ಈ ಹಿನ್ನೆಲೆಯಲ್ಲಿ ಆತನ ವಿರುದ್ಧ ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಕಾಯ್ದೆ, ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಅತ್ಯಾಚಾರ, ವಂಚನೆ ಆರೋಪದ ಮೇಲೆ ಪ್ರಕರಣ ದಾಖಲಾಗಿದ್ದು, ಸಂತ್ರಸ್ತ ಯುವತಿಗೆ ನ್ಯಾಯ ಕೊಡಿಸುವ ಸಲುವಾಗಿ ದಸಂಸ ರಾಜ್ಯಾದ್ಯಂತ ಚಳುವಳಿ ರೂಪಿಸಲು ತೀರ್ಮಾನಿಸಿದೆ ಎಂದು ಅವರು ಹೇಳಿದ್ದಾರೆ. ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಈತನ ವಿರುದ್ಧ ಹಲವಾರು ಕ್ರಿಮಿನಲ್ ಕೇಸ್‌ಗಳು ದಾಖಲಾಗಿದ್ದು, ಈತನನ್ನು ನ್ಯಾಯಾಲಯ ಘೋಷಿತ ಅಪರಾಧಿ ಎಂದಿದೆ. ಇಂತಹ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿಯ ಜೊತೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರೇ ಸಲುಗೆಯಿಂದ ▶ 8ನೇ ಪುಟಕ್ಕೆ

ಸಕ್ರಿಯ ರಾಜಕಾರಣಕ್ಕೆ ಎಸ್.ಎಂ.ಕೃಷ್ಣ ಗುಡ್‌ಬೈ

ಕುಟುಂಬ ಸದಸ್ಯರ ಜೊತೆ ಕಾಲ ಕಳೆಯಲು ನಿರ್ಧಾರ



ಬೆಂಗಳೂರು, ಜ.4(ಕೆಎಂಶಿ)- ಕೇಂದ್ರದ ಮಾಜಿ ವಿದೇಶಾಂಗ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸಕ್ರಿಯ ರಾಜಕಾರಣಕ್ಕೆ ಗುಡ್‌ಬೈ ಹೇಳಿದ್ದಾರೆ. 90ರ ಇಳಿ ವಯಸ್ಸಿನಲ್ಲಿ ನಾನು ಯುವಕನಂತೆ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಎಂದಿರುವ ಕೃಷ್ಣ, ಇತ್ತೀಚಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳಿಂದ ದೂರ ಉಳಿದಿದ್ದೇನೆ. ಆದರೆ ಇಂದು ಅಧಿಕೃತವಾಗಿ ಸಕ್ರಿಯ ರಾಜಕಾರಣಕ್ಕೆ ಪೂರ್ಣ ವಿರಾಮ ಹಾಕಿ, ಕುಟುಂಬದ ಸದಸ್ಯರ ಜೊತೆ ಕಾಲ ಕಳೆಯುತ್ತೇನೆ. ನಗರದ ಚಿತ್ರಕಲಾ ಪರಿಷತ್ತಿಗೆ ಭೇಟಿ ನೀಡಿದ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕೃಷ್ಣಾ ಅವರು ಬಿಜೆಪಿ ವರಿಷ್ಠರು ನನ್ನನ್ನು ಕಡೆಗಾಣಿಸಿದ್ದಾರೆ ಎಂಬ ಮಾತು ಇಲ್ಲಿ ಬರುವುದಿಲ್ಲ. ನಾನಾಗಿಯೇ ನಿವೃತ್ತಿ ಪಡೆದುಕೊಳ್ಳುತ್ತಿದ್ದೇನೆ. ನಾನು ರಾಜಕೀಯವಾಗಿ ನಿವೃತ್ತಿಯಾಗುವುದನ್ನು ▶ 6ನೇ ಪುಟಕ್ಕೆ

ಬೊಮ್ಮಾಯಿ ನರೇಂದ್ರ ಮೋದಿಯವರ ಮುಂದೆ ನಾಯಿಮರಿ ತರ ಕೂರುತ್ತೀರಿ...!

- ಮೋದಿ ಮುಂದೆ ಗಡಗಡ ನಡುಗುತ್ತೀರಿ: ಸಿದ್ದರಾಮಯ್ಯ ವ್ಯಂಗ್ಯ
- ನಾಯಿ ನಿಯತ್ತಿನ ಪ್ರಾಣಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎದಿರೇಟು
- ಸೋನಿಯಾ ಮನೆಯಲ್ಲಿ ಇಲಿ, ಬೆಕ್ಕು, ಜಿರಳೆ!





ಹಗರಿಬೊಮ್ಮನಹಳ್ಳಿ, ಜ.4- ರಾಜಕೀಯದಲ್ಲಿ ನಾಯಕರ ಮಧ್ಯೆ ಆರೋಪ-ಪ್ರತ್ಯಾರೋಪ ಸರ್ವೇ ಸಾಮಾನ್ಯ. ಹಲವು ಬಾರಿ ರಾಜಕೀಯ ನಾಯಕರು ತಮ್ಮ ನಾಲಿಗೆಗೆ ನಿಯಂತ್ರಣ ಹಾಕಿಕೊಳ್ಳದೆ ಬಾಯಿಗೆ ಬಂದಂತೆ ಮಾತನಾಡಿ ವಿವಾದ, ಟೀಕೆಗೆ ಸಿಲುಕಿಹಾಕಿಕೊಳ್ಳುವುದು ಉಂಟು.

ನಿನ್ನೆ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡುವ ವೇಳೆ ವಿಪಕ್ಷ ನಾಯಕ ಸಿದ್ದರಾಮಯ್ಯ, ಬಿಜೆಪಿ ಮತ್ತು ಸಿಎಂ ಬೊಮ್ಮಾಯಿಯವರನ್ನು ಟೀಕಿಸುವ ಭರದಲ್ಲಿ ನಾಯಿಗೆ ಹೋಲಿಕೆ ಮಾಡಿದ್ದಾರೆ.

ಸಿಎಂ ಬಸವರಾಜ ಬೊಮ್ಮಾಯಿಯವರೇ ನಿಮಗೆ ಧಮ್ಮಿದ್ದರೆ, ತಾಕತ್ತಿದ್ದರೆ ರಾಜ್ಯಕ್ಕೆ ಕೇಂದ್ರದಿಂದ ಅನುದಾನ ತರಿಸಿ, ಈ ರಾಜ್ಯದ ಜನತೆಯ ಪರವಾಗಿ ಕೆಲಸ ಮಾಡಿ. ನಿಮಗೆ ಆ ಧೈರ್ಯ, ತಾಕತ್ತು, ಧಮ್ಮು ಎಲ್ಲಿದೆ ನರೇಂದ್ರ ಮೋದಿಯವರ ಮುಂದೆ ನಾಯಿಮರಿಯಂತೆ ಮುದುಡಿಕೊಂಡು ಕೂರುತ್ತೀರಿ ಎಂದು ಟೀಕಿಸಿದ್ದಾರೆ.

ಮಾಲವಿ ಜಲಾಶಯ ಭರ್ತಿಯಾದ ಹಿನ್ನೆಲೆಯಲ್ಲಿ ಹಗರಿಬೊಮ್ಮನಹಳ್ಳಿಯಲ್ಲಿ ನಿನ್ನೆ ಶಾಸಕ ಭೀಮಾ ನಾಯಕ್ ಅವರು ಆಯೋಜಿಸಿದ್ದ ಸಾರ್ಥಕ ನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಸಿದ್ದರಾಮಯ್ಯ ಮಾತನಾಡುತ್ತಿದ್ದರು. ಮಾಜಿ ಸಚಿವರಾದ ಜಮೀರ್ ಅಹಮದ್, ಸಂತೋಷ್ ಲಾಡ್, ತುಕಾರಾಂ, ಅಮರೇಗೌಡ ಬಯ್ಯಾಪುರ, ರುದ್ರಪ್ಪ ಲಮಾಣಿ, ಶಾಸಕರಾದ ರಾಘವೇಂದ್ರ ಹಿಟ್ನಾಳ್, ಬೈರತಿ ಸುರೇಶ್ ಈ ಸಂದರ್ಭದಲ್ಲಿ ಹಾಜರಿದ್ದರು.

ನಾಯಿ ಬಹಳ ನಿಯತ್ತಿನ ಪ್ರಾಣಿ: ಸಿದ್ದರಾಮಯ್ಯನವರ ಮಾತುಗಳು ಅವರ ಅವಿವೇಕತನ, ಅವರ ಸಂಸ್ಕೃತಿ, ನಡವಳಿಕೆ, ವ್ಯಕ್ತಿತ್ವವನ್ನು ▶ 8ನೇ ಪುಟಕ್ಕೆ

ಸಿಎಫ್‌ಟಿಆರ್‌ಐ ಆವರಣದಲ್ಲಿ ಜೋಡಿ ಚಿರತೆ ಪ್ರತ್ಯಕ್ಷ

- ಮುಂಜಾಗ್ರತಾ ಕ್ರಮವಾಗಿ ಸಂಸ್ಥೆಯ ಶಾಲೆಗೆ ರಜೆ ಘೋಷಣೆ
- ಅರಣ್ಯ ಇಲಾಖೆ ಸಿಬ್ಬಂದಿಗಳಿಂದ ಚಿರತೆ ಸೆರೆ ಕಾರ್ಯಾಚರಣೆ



ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಚಿರತೆ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಯಿತು.

ಮೈಸೂರು, ಜ.4(ಎಂಟಿವೈ)- ಮೈಸೂರಿನ ಹೃದಯ ಭಾಗದ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯ (ಸಿಎಫ್‌ಟಿಆರ್‌ಐ) ವಿಶಾಲ ಆವರಣದಲ್ಲಿ ಮುಂಜಾನೆ ಜೋಡಿ ಚಿರತೆ ಪ್ರತ್ಯಕ್ಷವಾಗಿದ್ದು, ಅರಣ್ಯ ಇಲಾಖೆ ಸಿಬ್ಬಂದಿ, ಇವುಗಳ ಸೆರೆಗೆ ಕಾರ್ಯಾಚರಣೆ ಆರಂಭಿಸಿದೆ. ಮುಂಜಾಗ್ರತಾ ಕ್ರಮವಾಗಿ ಸಿಎಫ್‌ಟಿಆರ್‌ಐ ಶಾಲೆಗೆ ರಜೆ ಘೋಷಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಮೈಸೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗಿರುವ ಬೆನ್ನಲ್ಲೇ ಇದೀಗ ಮೈಸೂರಿನ ಹೃದಯ ಭಾಗದಲ್ಲೇ ಜೋಡಿ ಚಿರತೆಗಳು ಪ್ರತ್ಯಕ್ಷವಾಗಿ ಆತಂಕ ಸೃಷ್ಟಿಸಿವೆ.

ಸಿಎಫ್‌ಟಿಆರ್‌ಐ ಆವರಣದಲ್ಲಿ ಜೋಡಿ ಚಿರತೆ ಓಡಾಡುತ್ತಿರುವುದನ್ನು ಭದ್ರತಾ ಸಿಬ್ಬಂದಿ ಗಮನಿಸಿದ್ದು, ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ. ತಿನರಸೀಪುರ ತಾಲೂಕಲ್ಲಿ ಇಬ್ಬರು ಚಿರತೆ ದಾಳಿಗೆ ಬಲಿಯಾದ ಘಟನೆಯಿಂದ ಜನರಲ್ಲಿ ಚಿರತೆ ಎಂದ ತಕ್ಷಣ ಭಯ. ಇಬ್ಬರನ್ನು ಬಲಿ ಪಡೆದ ಚಿರತೆ ಸೇರಿದಂತೆ ಒಂದೇ ವಾರದಲ್ಲಿ ನಾಲ್ಕು ಚಿರತೆಗಳನ್ನು ವಿವಿಧೆಡೆ ಸುರಕ್ಷಿತವಾಗಿ ಸೆರೆ ಹಿಡಿದು ಅರಣ್ಯಕ್ಕೆ ಬಿಡುಗಡೆ ಮಾಡಿದ ಬೆನ್ನಲ್ಲೇ ಇದೀಗ ಮೈಸೂರು ಹೊರವಲಯದ ಆರ್‌ಎಂಪಿ ಬಳಿಕೆರೆ ಸುತ್ತಮುತ್ತ ಚಿರತೆ ಪ್ರತ್ಯಕ್ಷಗೊಂಡು ಆತಂಕ ಸೃಷ್ಟಿಸಿವೆ ಸಿಎಫ್‌ಟಿಆರ್‌ಐ ಸಂಸ್ಥೆಯ ▶ 6ನೇ ಪುಟಕ್ಕೆ

ಸುರಕ್ಷತೆಗೆ ಆದ್ಯತೆ ನೀಡಲಾಗಿದೆ

"ಭದ್ರತಾ ಸಿಬ್ಬಂದಿ ಪ್ರಭಾಕರ್ ಎಂಬುವರು ಮುಂಜಾನೆ ಎರಡು ಚಿರತೆ ನೋಡಿರುವುದಾಗಿ ತಿಳಿಸಿದ್ದಾರೆ. ಇದರಿಂದ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಿಬ್ಬಂದಿಗೂ ಎಚ್ಚರದಿಂದ ಇರುವಂತೆ ಸೂಚನೆ ನೀಡಲಾಗಿದೆ. ಪ್ರತಿಯೊಂದು ಪ್ರಯೋಗಾಲಯದಲ್ಲಿ ಬಾಗಿಲು ಹಾಕೊಂಡು ಕೆಲಸ ಮಾಡಲು ಸೂಚನೆ ನೀಡಲಾಗಿದೆ. ಚಿರತೆ ಭೀತಿ ಇರುವಾಗ ಶಾಲೆ ನಡೆಸುವುದು ಸೂಕ್ತವಲ್ಲ. ಅದಕ್ಕಾಗಿ ರಜೆ ಘೋಷಿಸಲಾಗಿದೆ. ಅರಣ್ಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಶಾಲೆ ಪುನರಾರಂಭಿಸುವ ಬಗ್ಗೆ ನಿರ್ಧಾರ ಪ್ರಕಟಿಸಲಾಗುತ್ತದೆ.

– ಸತೀಶ್, ಪ್ರಭಾರ ನಿರ್ದೇಶಕ, ಸಿಎಫ್‌ಟಿಆರ್‌ಐ

ಮೈಸೂರು ಹೊರ ವಲಯದ ಆರ್‌ಎಂಪಿ ಬಳಿ ಬೋನಿಗೆ ಬಿದ್ದ ಗಂಡು ಚಿರತೆ



ಮೈಸೂರು, ಜ.4(ಎಂಟಿವೈ)- ಮೈಸೂರಿನ ಸುತ್ತಮುತ್ತವೇ ಚಿರತೆ ಹಾವಳಿ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ತೀವ್ರ ಆತಂಕಗೊಂಡಿದ್ದಾರೆ. ಈ ಮಧ್ಯೆ ಅರಣ್ಯ ಇಲಾಖೆ ಹಲವು ಚಿರತೆಗಳನ್ನು ಸೆರೆ ಹಿಡಿದು, ಅರಣ್ಯಗಳಲ್ಲಿ ಬಿಡುತ್ತಾ ಬಂದಿದೆ. ಇಂದು ಮೈಸೂರು ತಾಲೂಕಿನ ಇಲವಾಲದ ಬಳಿ ನಾಲ್ಕೈದು ವರ್ಷದ ಗಂಡು ಚಿರತೆ ಸೆರೆ ಸಿಕ್ಕಿದೆ. ಆರ್‌ಎಂಪಿ ಬಳಿ ಕಳೆದ ಕೆಲವು ದಿನಗಳಿಂದ ಚಿರತೆ ಪ್ರತ್ಯಕ್ಷವಾಗಿ ಜನರಲ್ಲಿ ಆತಂಕವನ್ನುಂಟು ಮಾಡಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದ ಆರ್‌ಎಂಪಿ ಸಿಬ್ಬಂದಿ, ಚಿರತೆ ಸೆರೆ ಹಿಡಿಯುವಂತೆ ಕೋರಿದ್ದರು. ದೂರಿನ ಮೇರೆಗೆ ಕಳೆದ ನಾಲ್ಕು ದಿನದ ಹಿಂದಷ್ಟೇ ಬೋನ್ ಇಡಲಾಗಿತ್ತು. ಬೋನ್‌ನಲ್ಲಿದ್ದ ನಾಯಿಯ ತಿನ್ನಲು ಬಂದು ಚಿರತೆ ಸೆರೆ ಸಿಕ್ಕಿದೆ. 4-5 ವರ್ಷದ ಗಂಡು ಚಿರತೆ ಆರೋಗ್ಯದಿಂದಿದೆ. ಮೇಲಾಧಿಕಾರಿಗಳ ಆದೇಶದ ಮೇರೆಗೆ ಎಸಿಎಫ್ ಲಕ್ಷ್ಮಿಕಾಂತ್ ಹಾಗೂ ಆರ್‌ಎಫ್‌ಓ ಸುರೇಂದ್ರ ಹಾಗೂ ಇನ್ನಿತರರು ಚಿರತೆಯನ್ನು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬಿಡುಗಡೆ ಮಾಡಿದ್ದಾರೆ.

ನಾಳೆ ಶ್ರೀ ಬಾದಾಮಿ ಬನಶಂಕರಿ ಅಮ್ಮನವರ ಪೂಜಾ ಮಹೋತ್ಸವ

ಮೈಸೂರು,ಜ.4(ಪಿಎಂ)– ಆದಿಶಕ್ತ್ಯಾತ್ಮಕ ಶ್ರೀ ಬಾದಾಮಿ ಬನಶಂಕರಿ ಅಮ್ಮನವರ ಸಮಿತಿ ವತಿಯಿಂದ ಜ.6ರಂದು ಶ್ರೀ ಬಾದಾಮಿ ಬನಶಂಕರಿ ಅಮ್ಮನವರ ಪೂಜಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಕಾರ್ಯಕಾರಿ ಸದಸ್ಯ ಎನ್.ಎಸ್.ಜಯಸಿಂಹ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 6ರಿಂದ ಲಕ್ಷ್ಮೀಪುರಂನ ನಾರಾಯಣಶಾಸ್ತ್ರಿ ರಸ್ತೆಯ ಹೊಯ್ಸಳ ಕರ್ನಾಟಕ ಸಂಘದ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಶತಮಾನೋತ್ಸವ ಭವನದಲ್ಲಿ ವೇದ ಶಾಸ್ತ್ರಗಳ ಪ್ರಕಾರ ಪೂಜಾ ಮಹೋತ್ಸವ ನಡೆಯಲಿದೆ. ಗಣಪತಿ ಹೋಮ, ದುರ್ಗಾ ಹೋಮ, ನವಗ್ರಹ ಹೋಮ, ಆಯುಷ್ಯ ಹೋಮದ ಜೊತೆಗೆ ಮುತ್ತೈದೆಯರಿಂದ ಲಕ್ಷ ಕುಂಕುಮಾರ್ಚನೆ ಪೂಜೆ ನಡೆಯಲಿದೆ. ಅಲ್ಲದೆ, ಅನ್ನಸಂತರ್ಪಣೆ ಸಹ ಏರ್ಪಡಿಸಲಾಗಿದೆ ಎಂದರು.

ಬೆಳಗ್ಗೆ 10.30ಕ್ಕೆ ಸಭಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್ ಮೊದಲಾದ ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಸಮಿತಿ ಅಧ್ಯಕ್ಷ ಎಂ.ಮಂಜುನಾಥ್ ಮಂದಗೆರೆ, ಕಾರ್ಯದರ್ಶಿ ಡಾ.ಲಕ್ಷ್ಮಿದೇವಿ, ಉಪಾಧ್ಯಕ್ಷ ಎನ್.ಶಿವಕುಮಾರ್, ಕಾರ್ಯಕಾರಿ ಸದಸ್ಯರಾದ ಎಸ್.ರಂಗನಾಥ್, ಸೋಮಣ್ಣ ಗೋಷ್ಠಿಯಲ್ಲಿದ್ದರು.

ಜ.7, 8ರಂದು ಸ್ವಯಂ ಉದ್ಯೋಗ ಕುರಿತು ಕಾರ್ಯಾಗಾರ



ಮೈಸೂರು,ಜ.4(ಪಿಎಂ)– ಔರ ಗ್ರೂಪ್ ಆಫ್ ಇಂಡಸ್ಟ್ರಿಸ್‌ನ ಔರ ಕ್ಯಾಂಡಲ್ಸ್ ಸಂಸ್ಥೆಯ ವಾರ್ಷಿಕೋತ್ಸವದ ಅಂಗವಾಗಿ ಜ.7 ಮತ್ತು 8ರಂದು ಸ್ವಯಂ ಉದ್ಯೋಗ ಕುರಿತು ತರಬೇತಿ ಕಾರ್ಯಾಗಾರ, ಪುಸ್ತಕ ಬಿಡುಗಡೆ ಹಾಗೂ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಇಂಡಸ್ಟ್ರಿಸ್‌ನ ಸಿಇಓ ಶ್ರೀವಿದ್ಯಾ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೋಗಾದಿ ರಸ್ತೆಯ ಧ್ವನ್ಯಲೋಕದಲ್ಲಿ ಕಾರ್ಯಕ್ರಮಗಳು ನಡೆಯಲಿವೆ. 40ರಿಂದ 50 ವಿಧದ ಉತ್ಪನ್ನಗಳನ್ನು ಮನೆಯಲ್ಲಿ ತಯಾರಿಸಿ ಮಾರಾಟ ಮಾಡುವುದನ್ನು ತಜ್ಞರು ಕಾರ್ಯಾಗಾರದಲ್ಲಿ ತಿಳಿಸಿಕೊಡಲಿದ್ದಾರೆ. ಕಾರ್ಯಾಗಾರದಲ್ಲಿ ಭಾಗವಹಿಸಲು 40 ಮಂದಿ ನೋಂದಾಯಿಸಿದ್ದು, ಇನ್ನು 15 ಮಂದಿಗೆ ಅವಕಾಶವಿದೆ. 3 ಸಾವಿರ ರೂ. ನೋಂದಣಿ ಶುಲ್ಕ ನಿಗದಿ ಮಾಡಿದ್ದು, ವಿವರಗಳಿಗೆ ಮೊ.ಸಂ. 89517 45556 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಜ.8ರಂದು ಸಂಜೆ 4.30ಕ್ಕೆ ವಾರ್ಷಿಕೋತ್ಸವ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಿದ್ದು, ಫ್ರೀಡಂ ಆ್ಯಪ್ ಸಂಸ್ಥೆಯ ಸಂಸ್ಥಾಪಕ ಸಿ.ಎಸ್.ಸುಧೀರ್ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಇದೇ ವೇಳೆ ಮೇಣದಬತ್ತಿ ಬೆಳಕಿನಲ್ಲಿ ಕಾರ್ತಿಕ್ ಹೆಬ್ಬಾರ್ ಅವರ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಲ್ಲದೆ, ಸಾವಿರಕ್ಕೂ ಹೆಚ್ಚು ವಿವಿಧ ಬಗೆಯ ಮೇಣದ ಬತ್ತಿಗಳ ಪ್ರದರ್ಶನ ಇರಲಿದೆ. ಇದೇ ಸಂದರ್ಭದಲ್ಲಿ ಪುನೀತ್‌ರಾಜ್ ಕುಮಾರ್ ಅವರ ಭಾವಚಿತ್ರ ಒಳಗೊಂಡ ವಿಶೇಷ ಕ್ಯಾಂಡಲ್ ಬಿಡುಗಡೆ ಮಾಡಲಾಗುವುದು. ಕರಕುಶಲ, ಐಷಾರಾಮಿ ಆರೋಮ್ಯಾಟಿಕ್ ಮೇಣದ ಬತ್ತಿಗಳ ತಯಾರಿಕೆಯಲ್ಲಿ ನಮ್ಮ ಸಂಸ್ಥೆ ಹೆಸರು ಮಾಡಿದೆ ಎಂದರು.

ರೈತರಿಗೆ ಅನುಕೂಲವಾಗುವಂತೆ ಶೂನ್ಯ ಬಡ್ಡಿ ದರದಲ್ಲಿ ಸಾಲ

ಮೈಸೂರು,ಜ.4–ರೈತರ ಅಭಿವೃದ್ಧಿಯ ಹಿತದೃಷ್ಟಿಯಿಂದ 1 ಎಕರೆಗೆ ತಗಲುವ ವೆಚ್ಚವನ್ನು ಲೆಕ್ಕಾಚಾರ ಮಾಡಿ, ಮೈಸೂರು ಚಾಮರಾಜನಗರ ಜಿಲ್ಲೆಗಳ ರೈತರಿಗೆ 2023–24ನೇ ಸಾಲಿಗೆ ಶೂನ್ಯ ಬಡ್ಡಿ ದರದಲ್ಲಿ ಕಳೆದ ಸಾಲಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಾಲ ನೀಡಿ ಎಂದು ಮೈಸೂರು ಮತ್ತು ಚಾಮರಾಜನಗರದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದರು. ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ 2023–24ನೇ ಸಾಲಿನ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ (ಡಿ.ಎಲ್.ಟಿ.ಸಿ)ಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2023–24ನೇ ಸಾಲಿಗೆ ವಿವಿಧ ಬೆಳೆಗಳಿಗೆ ಕೃಷಿ ವೆಚ್ಚಗಳ ದರಪಟ್ಟಿಯನ್ನು ನಿಗದಿಪಡಿಸಲು ಕೃಷಿ, ರೇಷ್ಮೆ, ತೋಟಗಾರಿಕೆ, ಮೀನುಗಾರಿಕೆ, ಪಶು ಸಂಗೋಪನಾ ಇಲಾಖೆಯವರ ಶಿಫಾರಸಿನ ಮೊತ್ತವನ್ನು ಗಣನೆಗೆ ತೆಗೆದುಕೊಂಡರು. ಕೃಷಿ ತಜ್ಞರು ಹಾಗೂ ಪ್ಯಾಕ್ಸ್‌ಗಳ ಅಧ್ಯಕ್ಷರು ಮತ್ತು ಪ್ರಗತಿಪರ ರೈತರ ಸಲಹೆಗಳನ್ನು ಆಲಿಸಿದರು. ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಿ.ಸಿ. ಜನಾರ್ಧನ್, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಎಂ.ಟಿ. ಶಶಿಧರ್, ಸಾಲದ ವಿಭಾಗದ ಮುಖ್ಯಸ್ಥ ಕೆ.ರವಿ, ಯೋಜನೆ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯಸ್ಥ ಅಜ್ಮತ್ ಪಾಷ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಪಶುಪಾಲನೆ ಮತ್ತು ಮೀನುಗಾರಿಕೆ ಇಲಾಖಾಧಿಕಾರಿಗಳು ಹಾಗೂ ಪ್ರಗತಿಪರ ರೈತ ಸದಸ್ಯರು ಸಭೆಯಲ್ಲಿ ಹಾಜರಿದ್ದರು.





ಮೈಸೂರು ನಗರ ಕನ್ನಡಪರ ಸಂಘಟನೆ, ನಾಗರಿಕ ಹಿತರಕ್ಷಣಾ ವೇದಿಕೆಯ 35ನೇ ವಾರ್ಷಿಕೋತ್ಸವದ ಅಂಗವಾಗಿ ಬೆಂಗಳೂರಿನ ರಮಣಶ್ರೀ ಹೋಟೆಲ್‌ನಲ್ಲಿ ನಾಡೋಜ ಡಾ.ಷಡಕ್ಷರಿ ಅವರಿಗೆ ಸಮಾಜ ಸೇವಾ ರತ್ನ ಬಿರುದು ನೀಡಿ, ಸನ್ಮಾನಿಸಲಾಯಿತು. ಚಿತ್ರದಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ಗೌರವ ಪ್ರಧಾನ ಕಾರ್ಯದರ್ಶಿ ಡಾ.ಕೃಷ್ಣ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್, ಹನುಮಂತೇಗೌಡ, ಮೆಸ್ ಬಾಬು, ಸರ್ದಾರ್ ಮಹೇಶ್, ಮುರುಗೇಶ್ ಇದ್ದಾರೆ.



ಮೆಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾವಿತ್ರಿ ಬಾಯಿ ಫುಲೆ ಜನ್ಮದಿನ ಆಚರಿಸಲಾಯಿತು. ಈ ವೇಳೆ ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ.ಸತೀಶ್ ಜವರೇಗೌಡ, ಶಿಕ್ಷಕರಾದ ಪಿ.ಎಲ್. ಭಾಗ್ಯ, ಕಲ್ಪನಾ, ವೀಣಾ, ಸುಜಾತ, ಸುನೀಲ್, ರಂಗಸ್ವಾಮಿ ಇನ್ನಿತರರಿದ್ದರು.

ಇಪಿಎಸ್ ಪಿಂಚಣಿ: ಪರಿಶೀಲಿಸಿಕೊಳ್ಳಲು ಸೂಚನೆ

ಮೈಸೂರು,ಜ.4(ಪಿಎಂ)–ಉದ್ಯೋಗಿಗಳ ಪಿಂಚಣಿ ಯೋಜನೆ (ಇಪಿಎಸ್) ಸಂಬಂಧ ಪಿಂಚಣಿದಾರರು ಹೆಚ್ಚಿನ ವೇತನ ಪಿಂಚಣಿ ಅರ್ಹತೆ ಸಂಬಂಧ ಸುಪ್ರಿಂಕೋರ್ಟ್ ಆದೇಶದಂತೆ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಓ) ನೀಡಿರುವ ಸ್ಪಷ್ಟೀಕರಣ ಗಮನಿಸುವಂತೆ ಕೋರಿದೆ. ಪಿಂಚಣಿದಾರರು ತಮ್ಮ ಪಿಂಚಣಿ ಸಂಬಂಧ ಕ್ರಮ ವಹಿಸುವ ಮೊದಲು ತಮ್ಮ ಅರ್ಹತೆಯನ್ನು ಪರಿಶೀಲಿಸಿಕೊಳ್ಳಬೇಕು. ಈ ಸಂಬಂಧ ಮಾಹಿತಿಗೆ ಇಪಿಎಫ್‌ಓ ಅಧಿಕೃತ ವೆಬ್‌ಸೈಟ್‌ಗೆ (www. epfindia.gov.in) ಭೇಟಿ ನೀಡಬಹುದು. ಅಲ್ಲದೆ, ಸಂಸ್ಥೆಯ ಪ್ರಾದೇಶಿಕ ಕಚೇರಿಯ ಟ್ವಿಟರ್, ಫೇಸ್‌ಬುಕ್, ಕೂ ಮತ್ತು ಇನ್ಸಟಾಗ್ರಾಂ (@epfo mysore)ನಂತಹ ಸಾಮಾಜಿಕ ಮಾಧ್ಯಮಗಳಿಗೂ ಭೇಟಿ ನೀಡಬಹುದೆಂದು ಸಂಸ್ಥೆಯು ಮೈಸೂರು ಪ್ರಾದೇಶಿಕ ಕಚೇರಿ ಪ್ರಕಟಣೆ ತಿಳಿಸಿದೆ.

ಕರಾರಿನಂತೆ ಆಶ್ರಯ ಮನೆಗಳ ಸ್ವಾಧೀನಕ್ಕೆ ಆಗ್ರಹಿಸಿ ಫಲಾನುಭವಿಗಳ ಪ್ರತಿಭಟನೆ

ಮೈಸೂರು,ಜ.4(ಆರ್‌ಕೆಬಿ)– ಹಿಂದಿನ ಕರಾರು ಪತ್ರದ ಪ್ರಕಾರ ಆಶ್ರಯ ಮನೆಗಳನ್ನು ಸ್ವಾಧೀನಕ್ಕೆ ನೀಡಬೇಕು ಎಂದು ಆಗ್ರಹಿಸಿ ಫಲಾನುಭವಿಗಳು ನಗರದ ಚಾಮುಂಡಿಪುರಂ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.



2005ನೇ ಸಾಲಿನಲ್ಲಿ ರಾಜೀವ್‌ಗಾಂಧಿ ವಸತಿ ಯೋಜನೆಯಡಿ ಕೃಷ್ಣರಾಜ ಕ್ಷೇತ್ರದ ಆಶ್ರಯ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಷರತ್ತು ಪೂರ್ಣಗೊಳಿಸಿ ದಾಖಲೆ ನೀಡಿ ಕಾನೂನುಬದ್ಧವಾಗಿ ಕರಾರು ಪತ್ರವನ್ನು ಪಡೆದುಕೊಂಡಿದ್ದರು. ಇವು ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಸಹ ಆಗಿವೆ. ಆದರೆ, ಈವರೆಗೂ ಅಧಿಕೃತ ಫಲಾನುಭವಿಗಳಿಗೆ ನಿವೇಶನ, ಆಶ್ರಯ ಮನೆ ನೀಡಿಲ್ಲ ಎಂದು ಆರೋಪಿಸಿದರು.

ಕೃಷ್ಣರಾಜ ಕ್ಷೇತ್ರದ ಆಶ್ರಯ ಸಮಿತಿ ಹಿಂದಿನ ಸಭಾ ನಡವಳಿಕೆಗಳಿಗೆ ಮಾನ್ಯತೆ ನೀಡಿಲ್ಲ. ಬದಲಿಗೆ ಪದೇಪದೆ ನಡವಳಿಕೆಯನ್ನು ಬದಲಾಯಿಸಿ, ಫಲಾನುಭವಿಗಳಿಗೆ ಉದ್ದೇಶಪೂರ್ವಕವಾಗಿ ತೊಂದರೆ ನೀಡಲಾಗುತ್ತಿದೆ ಎಂದು ಆರೋಪಿಸಿದರು. ಮನೆ, ನಿವೇಶನಕ್ಕಾಗಿ ಕಾಯುತ್ತಿರುವ ಫಲಾನುಭವಿಗಳಿಗೆ ಇದುವರೆಗೂ ಸೌಲಭ್ಯ ನೀಡದೆ ಅನ್ಯಾಯ ಮಾಡಲಾಗಿದೆ. ಆಶ್ರಯ ಮನೆ ಪಡೆಯಲು ಕಟ್ಟಿರುವ ಹಣಕ್ಕೆ ಬಡ್ಡಿ ಕಟ್ಟುವಂತಾಗಿದೆ. ಜೊತೆಗೆ ನಾವು ವಾಸವಿರುವ ಮನೆಗಳಿಗೆ ಬಾಡಿಗೆ ಕಟ್ಟಬೇಕಾಗಿದೆ. ಇದರಿಂದ ತೀವ್ರ ಆರ್ಥಿಕ ತೊಂದರೆಗೆ ಸಿಲುಕಿದ್ದು, ಕರಾರು ಪತ್ರದ ಪ್ರಕಾರ ಆಶ್ರಯ ಮನೆ ನೀಡುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು. ಬಳಿಕ ಜಿಲ್ಲಾಧಿಕಾರಿ, ನಗರಪಾಲಿಕೆ ಆಯುಕ್ತ, ರಾಜೀವ್‌ಗಾಂಧಿ ವಸತಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರಪಾಲಿಕೆ ಸದಸ್ಯ ಜಿ.ಗೋಪಿ, ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್, ಮಾಜಿ ಸದಸ್ಯರಾದ ವಿ.ಮಂಜುನಾಥ್, ಎಂ.ಸಿ.ಚಿಕ್ಕಣ್ಣ, ಸುನಿಲ್, ಶಾಂತವೀರೇಂದ್ರಸ್ವಾಮಿ, ಮುಖಂಡರಾದ ಮಂಜು ಬಂಡೀಕೇರಿ, ರವಿಕುಮಾರ್, ರಾಘವೇಂದ್ರ, ಅಶ್ವಿನಿ, ಟೈಲರ್ ರಮೇಶ್, ಶ್ರೀಕಂಠು ಇನ್ನಿತರರು ಉಪಸ್ಥಿತರಿದ್ದರು.

ಬೇಡಿಕೆ ಈಡೇರುವವರೆಗೂ ಧರಣಿ: ಅತಿಥಿ ಉಪನ್ಯಾಸಕರ ಪಟ್ಟು

ಮೈಸೂರು, ಜ.4 (ಆರ್‌ಕೆಬಿ)–ವಿವಿಧ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರು ಮಾನಸ ಗಂಗೋತ್ರಿಯ ಮುಖ್ಯ ದ್ವಾರದಲ್ಲಿರುವ ರಾಷ್ಟ್ರಕವಿ ಕುವೆಂಪು ಪ್ರತಿಮೆ ಬಳಿ ಬುಧವಾರ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ.



ಅತಿಥಿ ಉಪನ್ಯಾಸಕರ ಬಳಗದ ಆಶ್ರಯದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ, ಅಧಿಕಾರಿಗಳ ವಿರುದ್ಧ ನಾನಾ ಘೋಷಣೆ ಕೂಗಿದರು. ಶೈಕ್ಷಣಿಕ ವ್ಯವಸ್ಥೆ ವಿರೋಧಿ ಆಡಳಿತಕ್ಕೆ ಧಿಕ್ಕಾರ, ಸುಳ್ಳು ಭರವಸೆ ನೀಡುತ್ತಿರುವ ಕುಲಪತಿಗೆ ಧಿಕ್ಕಾರ, ಹಣಕಾಸು ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾದ ಹಣಕಾಸು ಅಧಿಕಾರಿಗೆ ಧಿಕ್ಕಾರ ಇತ್ಯಾದಿ ಘೋಷಣಾ ಫಲಕಗಳೊಂದಿಗೆ ಪ್ರತಿಭಟನೆ ಆರಂಭಿಸಿದರು, ನ್ಯಾಯಕ್ಕಾಗಿ ಆಗ್ರಹಿಸಿದರು. ಬೇಡಿಕೆ ಈಡೇರುವವರೆಗೂ ಧರಣಿಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಪ್ರತಿಭಟನಾಕಾರರು ತಿಳಿಸಿದರು.

ಅ.1ರಿಂದ ಅನ್ವಯವಾಗುವಂತೆ ಅತಿಥಿ ಉಪನ್ಯಾಸಕರ ಗೌರವಧನವನ್ನು ಪರಿಷ್ಕರಿಸಲು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ನಿರ್ಣಯ ಜಾರಿಗೊಳಿಸಬೇಕು. ಡಿ.9ರಂದು ನಡೆದ ಸಿಂಡಿಕೇಟ್ ಸಭೆಯು ಅತಿಥಿ ಉಪನ್ಯಾಸಕರಿಗೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಡಿ.1ರಿಂದ ಅನ್ವಯವಾಗುವ ಆದೇಶವನ್ನು ನೀಡಲು ತೀರ್ಮಾನಿಸಿದ್ದರೂ ಅದು ಕಾಗದದಲ್ಲಿ ಮಾತ್ರ ಉಳಿದಿದೆ ಎಂದು ದೂರಿದರು.

ವಿದ್ಯಾರ್ಥಿಗಳು ಎದುರಿಸಬೇಕಾಗಬಹುದಾದ ತೊಂದರೆಗಳನ್ನು ಪರಿಗಣಿಸಿ, ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿನ ಅತಿಥಿ ಉಪನ್ಯಾಸಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಮೌಖಿಕ ಆದೇಶದ ಆಧಾರದ ಮೇಲೆ ಪ್ರವೇಶ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ, ಇನ್ನೂ ಲಿಖಿತ ಆದೇಶ ಹೊರಡಿಸದಿರುವುದು ಸರಿಯಲ್ಲ. ಕುಲಪತಿಗಳು, ರಿಜಿಸ್ಟ್ರಾರ್ ಮತ್ತು ಹಣಕಾಸು ಅಧಿಕಾರಿಗಳು ಆಡಳಿತ ವಿರೋಧಿ ವಾತಾವರಣ ಮತ್ತು ಶಿಕ್ಷಣದಲ್ಲಿ ಅವ್ಯವಸ್ಥೆಯನ್ನು ಸೃಷ್ಟಿಸಿದ್ದಾರೆ ಎಂದು ಆರೋಪಿಸಿದರು. ಪರಿಷ್ಕೃತ ಗೌರವಧನವನ್ನು ಪಾವತಿಸುವಂತೆ ನಾವು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕಳೆದ ಒಂದು ತಿಂಗಳಿಂದ ಅಧಿಕಾರಿಗಳು ಕುಂಟುನೆಪ ಹೇಳಿಕೊಂಡೇ ಕಾಲ ಕಳೆಯುತ್ತಿದ್ದಾರೆ ಎಂದು ದೂರಿದರು. ಪ್ರತಿಭಟನಾ ಧರಣಿಯಲ್ಲಿ ಬಳಗದ ಮುಖಂಡರಾದ ಡಾ.ಚಂದ್ರಶೇಖರ್, ಡಾ.ಎಚ್.ವಿ.ಗಿರೀಶ್, ಡಾ.ಶ್ರೀಧರ್, ಡಾ.ಚೈತ್ರಾ, ಡಾ.ಮುರಳಿ, ಡಾ.ಸೌಜನ್ಯ ಇನ್ನಿತರರು ಭಾಗವಹಿಸಿದ್ದರು.

ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಜ.4– ರಾಜ್ಯ ಸರ್ಕಾರವು ಮಹಿಳೆಯರ ಅಭಿವೃದ್ಧಿ ಕ್ಷೇತ್ರದಲ್ಲಿ ಕಳೆದ 5 ವರ್ಷಗಳಿಂದ ಶ್ರಮಿಸುತ್ತಿರುವ ಅರ್ಹ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಗೆ, ಕ್ರೀಡೆ, ಕಲೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮಹಿಳೆಯರು ಹಾಗೂ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಆತ್ಮಸ್ಥೈರ್ಯದಿಂದ ಹೋರಾಡಿ ಜೀವನೋಪಾಯದಿಂದ ಪಾರು ಮಾಡಿದಂತಹ ಅರ್ಹ ಮಹಿಳೆಯರಿಗೆ ವೀರ ಮಹಿಳೆ ಎಂದು ಗುರುತಿಸಿ, ಪ್ರತಿ ವರ್ಷ ಮಾ.8ರಂದು ಆಚರಿಸಲಾಗುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಂದು ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಹಾಗೂ ವೀರ ಮಹಿಳೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ಅರ್ಹ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಹಾಗೂ ವೀರ ಮಹಿಳೆ ಪ್ರಶಸ್ತಿಯನ್ನು ಅರ್ಹ ಮಹಿಳೆಗೆ ನೀಡಿ ಗೌರವಿಸುವ ಸಲುವಾಗಿ 2022–23ನೇ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ಜನವರಿ 10 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ತ್ರೀ ಶಕ್ತಿ ಭವನ, ಕೃಷ್ಣದೇವರಾಯ ಸರ್ಕಲ್, ವಿಜಯನಗರ 2ನೇ ಹಂತ, ಮೈಸೂರು–17 ಸಂಪರ್ಕಿಸಬಹುದಾಗಿದೆ.

ನಾಳೆ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ



ಮೈಸೂರು,ಜ.4–ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜ.6ರಂದು ಸಂಜೆ 6 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–250ರ ಅಂಗವಾಗಿ ವಿದ್ವಾನ್ ಕೃಷ್ಣಮೋಹನ್ ಮತ್ತು ವಿದ್ವಾನ್ ರಾಮಕುಮಾರ್ ಮೋಹನ್ ಅವರಿಂದ ಗಾಯನ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ವಿಶ್ವೇಶ್ ಚಂದ್ರಶೇಖರ್ (ವಯೋಲಿನ್), ವಿದ್ವಾನ್ ತ್ರಿಚೂರ್ ಆರ್.ಮೋಹನ್ (ಮೃದಂಗ) ಮತ್ತು ವಿದ್ವಾನ್ ಜಿ.ಸುರೇಶ್ (ಘಟಂ)ನಲ್ಲಿ ಸಹಕಾರ ನೀಡಲಿದ್ದಾರೆ.

ಕ್ವಾರಿ, ಕ್ರಷರ್ ಮಾಲೀಕರ ನ್ಯಾಯಯುತ ಬೇಡಿಕೆ ಈಡೇರಿಸಿ ಗಣಿಗಾರಿಕೆ ಆರಂಭಿಸಲು ಸರ್ಕಾರ ತಕ್ಷಣ ಕ್ರಮ ವಹಿಸಬೇಕು

ಕಟ್ಟಡ ಸಾಮಗ್ರಿ ಸರಬರಾಜು ಲಾರಿ ಮಾಲೀಕರು, ಚಾಲಕರ ಒತ್ತಾಯ



ಮೈಸೂರು,ಜ.4(ಪಿಎಂ)–ಕ್ವಾರಿ ಮತ್ತು ಕ್ರಷರ್ ಮಾಲೀಕರು ರಾಜ್ಯಾದ್ಯಂತ ಗಣಿಗಾರಿಕೆ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿರುವ ಹಿನ್ನೆಲೆಯಲ್ಲಿ ಕಟ್ಟಡ ಸಾಮಗ್ರಿ ಪೂರೈಕೆ ಮಾಡುವ ಲಾರಿ ಮತ್ತು ಟಿಪ್ಪರ್ ಚಾಲಕರು ಕೆಲಸವಿಲ್ಲದೆ, ಜೀವನ ನಡೆಸುವುದು ಕಷ್ಟಕರವಾಗಿದ್ದು, ಸರ್ಕಾರ ಶೀಘ್ರ ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿ, ಗಣಿಗಾರಿಕೆ ಚಟುವಟಿಕೆಗಳು ನಡೆಯಲು ಅನುವು ಮಾಡಿಕೊಡಬೇಕೆಂದು ಮೈಸೂರು ಜಿಲ್ಲಾ ಲಾರಿ ಮತ್ತು ಟಿಪ್ಪರ್ ಚಾಲಕರ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎನ್.ರಾಜೇಂದ್ರ, ಗಣಿ ಗುತ್ತಿಗೆದಾರರಿಂದ ರಾಜಧನ ಸಂಗ್ರಹ ಕೈಬಿಡಬೇಕು. ಕೆಎಂಎಂಸಿಆರ್–1994ಕ್ಕೆ (ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ) ತಿದ್ದುಪಡಿ ತರಬೇಕು ಎಂಬಿತ್ಯಾದಿ ಬೇಡಿಕೆ ಈಡೇರಿಸಲು ಆಗ್ರಹಿಸಿ ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ಸ್ ಅಸೋಸಿಯೇಷನ್ ನೇತೃತ್ವದಲ್ಲಿ ಗಣಿಗಾರಿಕೆ ಬಂದ್ ಮಾಡಲಾಗಿದೆ. ಇದರಿಂದ ಕಟ್ಟಡ ಸಾಮಗ್ರಿ ಸರಬರಾಜು ಮಾಡುವುದನ್ನೇ ನಂಬಿ ಜೀವನ ಸಾಗಿಸುತ್ತಿರುವ ಟಿಪ್ಪರ್ ಮತ್ತು ಲಾರಿ ಚಾಲಕರು, ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದು ಅಳಲು ತೋಡಿಕೊಂಡರು.

ಡಿ.21ರಿಂದ ಗಣಿಗಾರಿಕೆ ಸ್ಥಗಿತವಾಗಿದ್ದು, ಅಂದಿನಿಂದ ದುಡಿಮೆ ಇಲ್ಲದೆ ಲಾರಿ ಚಾಲಕರು ಮತ್ತು ಕುಟುಂಬದವರು ಬೀದಿಗೆ ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಟ್ಟಡ ಕೂಲಿ ಕಾರ್ಮಿಕರಿಗೂ ಕಳೆದ 15 ದಿನಗಳಿಂದ ಕೆಲಸವಿಲ್ಲ. ನಾವೂ ಮನೆಯಲ್ಲೇ ಕೂತಿದ್ದೇವೆ. ರಾಜ್ಯ ಸರ್ಕಾರ ಶೀಘ್ರ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದರೆ ನಮಗೆ ಸರ್ಕಾರವೇ ಪರ್ಯಾಯ ಉದ್ಯೋಗ ಸೃಷ್ಟಿ ಮಾಡಿಕೊಡಬೇಕು ಎಂದು ಒತ್ತಾಯಿಸಿದರು. ಕ್ವಾರಿ ಮತ್ತು ಕ್ರಷರ್ ಮಾಲೀಕರ ಬೇಡಿಕೆಗಳನ್ನು ಶೀಘ್ರ ಈಡೇರಿಸಲು ಸಾಧ್ಯವಾಗದೇ ಇದ್ದರೆ, ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಮರಳು ಗಣಿಗಾರಿಕೆಗೆ ಸರ್ಕಾರ ಅನುಮತಿ ನೀಡಬೇಕು. ಜಿಲ್ಲೆಯಲ್ಲಿ 2014ರಿಂದ ಮರಳು ಗಣಿಗಾರಿಕೆಗೆ ಅವಕಾಶ ಇಲ್ಲವಾಗಿದೆ. ಜಿಲ್ಲೆಯಲ್ಲಿ ಅತಿ ಹೆಚ್ಚು ಮರಳು ಸಂಗ್ರಹ ಇದ್ದು, ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಿದರೆ ಬೇರೆ ಜಿಲ್ಲೆಗಳನ್ನು ಅವಲಂಬಿಸುವುದೂ ತಪ್ಪಲಿದೆ ಎಂದು ಹೇಳಿದರು. ಸಂಘದ ಗೌರವಾಧ್ಯಕ್ಷ ಕೆ.ಪಿ.ನಾಗರಾಜು, ಕಾರ್ಯದರ್ಶಿ ಕೆ.ಎಂ.ನಾಗಚಂದ್ರ, ಖಜಾಂಚಿ ಶ್ರೀನಿವಾಸ್, ನಿರ್ದೇಶಕರಾದ ಮಹದೇವಸ್ವಾಮಿ, ಪಿ.ಎಸ್. ಮಹದೇವ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ– ಗಾಯನ –ಎಂ.ರಾಘವೇಂದ್ರ, ಪಿ.ಸುರಭಿ, ವ್ಯಾಖ್ಯಾನ– ಡಾ.ಲತಾ ಮೈಸೂರು, 8.30 ಹಾಡು ಹೇಳಿದ ಕಥೆ– ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ಎ.ಎಸ್.ಪದ್ಮ–ವೀಣಾ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವಾಣಿ ಜಯರಾಂ, ಎಂ.ವೆಂಕಟೇಶ್ ಕುಮಾರ್, 1.20 ಭಾವಗೀತೆಗಳು–ರಜನಿ ಅನಿಲ್, 4.00 ಜನಪದ ಸಂಗೀತ–ಸುಮಿತ್ರ ಮತ್ತು ತಂಡ, 6.50 ಕೃಷಿರಂಗ–ಕಿಸಾನ್ ವಾಣಿ, 8.00 ಯುವವಾಣಿ–ಚಿತ್ರ ಚಿತ್ತಾರ–ಚಿತ್ರಗೀತೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ, 10.00 ನಾಟಕ

ಇಂದಿನ ಪಂಚಾಂಗ

5.1.2023 ಗುರುವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಐಯುಸಿಇಇ ಫೌಂಡೇಷನ್ :** ಐಯುಸಿಇಇ ವಿದ್ಯಾರ್ಥಿ ವೇದಿಕೆ–2023 ಉದ್ಘಾಟನಾ ಸಮಾರಂಭದ ಅಂಗವಾಗಿ ಮೈಸೂರು ನಗರವು ಸುಸ್ಥಿರ ಗ್ರಹಕ್ಕಾಗಿ ಓಟ, ಮುಖ್ಯ ಅತಿಥಿಗಳು: ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಪಿ.ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಸಂಪದ ಪಚೌರಿ, ಡಾ.ಬಿ. ಸದಾಶಿವೇಗೌಡ, ಸ್ಥಳ: ಶ್ರೀ ಹೆಚ್.ಕೆಂಪೇಗೌಡ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ವಿವಿಸಿಇ, ಬೆಳಗ್ಗೆ 6.45ಕ್ಕೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಐಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು:** ಕಾನ್ಫರೆನ್ಸ್ ಬ್ರೋಷರ್ ಮತ್ತು ವೆಬ್‌ಸೈಟ್ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು: ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ನಿರ್ದೇಶಕ ಡಾ.ಕೆ.ಆರ್.ದಾಕ್ಷಾಯಿಣಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಅತಿಥಿಗಳು: ಎನ್.ಚಂದ್ರಶೇಖರ್, ಫಾರ್ಮಸಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಉಮೇಶ್‌ಬಾಬು, ಎಸ್.ಮಂಜುನಾಥ್, ಎಂ.ರಾಜು, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಹನುಮಂತಚಾರ್ ಜೋಷಿ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಸಮಾರೋಪ ಭಾಷಣ: ಆಕಾಶವಾಣಿ ಉದ್ಘೋಷಕರಾದ ಪ್ರಭುಸ್ವಾಮಿ ಮಳಿಮಠ, ಮುಖ್ಯ ಅತಿಥಿಗಳು: ಮುಖ್ಯ ಕಾರ್ಯನಿರ್ವಾಹಕ ಪ್ರೊ.ಸಾಂಬಶಿವಯ್ಯ, ಬಹುಮಾನ ವಿತರಣೆ: ಕ್ರೀಡಾಪಟು ಎಂ.ಎನ್. ನೀಲನ್, ಉಪಸ್ಥಿತರು : ಕಾಲೇಜು ಪ್ರಾಂಶುಪಾಲ ಸೋಮಶೇಖರ, ಸ್ಥಳ: ಕಾಲೇಜು ಆವರಣ, ಊಟಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ :** ರಂಗಭೂಮಿ ಮತ್ತು ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಉದ್ಘಾಟನೆ : ಶಾಸಕ ಅಶ್ವಿನ್‌ಕುಮಾರ್, ಅಧ್ಯಕ್ಷತೆ : ಸಂಸ್ಕೃತಿ ಚಿಂತಕ ಹೆಚ್. ಜನಾರ್ಧನ್, ಮುಖ್ಯ ಅತಿಥಿಗಳು : ಹಿರಿಯ ರಂಗ ನಿರ್ದೇಶಕ ಪ್ರಸನ್ನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಜಿಲ್ಲಾ ನೋಡಲ್ ಅಧಿಕಾರಿ ಡಾ.ಎಸ್. ಅನಿತ, ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ಯುವ ರೆಡ್ ಕ್ರಾಸ್ ಘಟಕದ ದೈನಂದಿನ ಕಾರ್ಯಚಟುವಟಿಕೆಯ ಉದ್ಘಾಟನೆ ಹಾಗೂ ಉಚಿತ ರಕ್ತ ಪರೀಕ್ಷೆ ಮತ್ತು ನೇತ್ರ ತಪಸಣಾ ಶಿಬಿರ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಹಿರಿಯ ನೇತ್ರ ತಜ್ಞ ಡಾ. ಎಂ.ಕೆ. ಚೇತನ್‌ಕುಮಾರ್, ಮುಖ್ಯ ಅತಿಥಿಗಳು : ಲಯನ್ಸ್ ಸಂಸ್ಥೆಯ ಡಾ. ನಾಗರಾಜ್ ವಿ. ಬೈರಿ, ಮಹಾವೀರ್ ಚಂದ್ ಬನ್ಸಾಲಿ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ನಗರ ಪತ್ರಿಕಾ ವಿತರಕರ ಸಂಘ :** ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಶಾಸಕ ಎಸ್.ಎ. ರಾಮದಾಸ್, ಕ್ಯಾಲೆಂಡರ್ ಬಿಡುಗಡೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಅಕ್ಕನ ಬಳಗ, ಬೆಳಗ್ಗೆ 11.30ಕ್ಕೆ

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಪದವೀಧರ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಪ್ರೊ. ಹೆಚ್.ಎ. ರಂಗನಾಥ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ, ಗೌರವ ಅತಿಥಿಗಳು : ಕುಲಪತಿ ಡಾ. ಸುರೀಂದರ್ ಸಿಂಗ್, ಕುಲಸಚಿವ ಡಾ. ಬಿ. ಮಂಜುನಾಥ, ಸ್ಥಳ: ಶ್ರೀರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಸಂಜೆ 4ಕ್ಕೆ

■ **ಎಸ್‌ವಿಇಐ :** ವಾರ್ಷಿಕೋತ್ಸವ ಸಮಾರಂಭ, ಬೆಳಗ್ಗೆ10ಕ್ಕೆ, ಅಧ್ಯಕ್ಷತೆ : ಎಸ್‌ವಿಇಐ ಖಜಾಂಚಿ ಟಿ. ಪ್ರಭಾಕರ್ ಶೆಟ್ಟಿ, ಮುಖ್ಯ ಅತಿಥಿಗಳು : ಬಿಇಓ ಶ್ರೀಮತಿ ಎನ್.ಎ.ಮಲ್ಲೇಶ್ವರಿ, ಸಂಜೆ 4.30ಕ್ಕೆ ಅಧ್ಯಕ್ಷತೆ : ಎಸ್‌ವಿಇಐ ಅಧ್ಯಕ್ಷ ಡಾ. ಎಂ.ಕೆ. ಪೋತರಾಜ್, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಪಿ. ವಿಶ್ವನಾಥ್, ಸ್ಥಳ: ಕಲಾಮಂದಿರ, ಸಂಜೆ 4.30ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ ಆವರಣ, ಸಂಜೆ 6 ಗಂಟೆಗೆ.

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪ್ರಾತಃಸ್ಮರಣಂ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲಾ ರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಆಂಡಾಳ್ ಮಂದಿರಂ :** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಆಂಡಾಳ್ ಮಂದಿರಂ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು ಮಹಾ ನಗರಪಾಲಿಕೆ ಬಜೆಟ್ ಪೂರ್ವಭಾವಿ ಸಾರ್ವಜನಿಕ ಅಭಿಪ್ರಾಯ ಸಂಗ್ರಹ ಸಭೆ

ಮೈಸೂರು ನಗರ, ಗ್ರಾಮಾಂತರ ಬಸ್ ನಿಲ್ದಾಣ ಸ್ಥಳಾಂತರಕ್ಕೆ ಒತ್ತಾಯ

ಮೈಸೂರು, ಜ.4 (ಆರ್‌ಕೆಬಿ)– ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸುವ ಬೇಡಿಕೆ ವಿಷಯ ಮತ್ತೆ ಪ್ರಸ್ತಾಪವಾಗಿದೆ. ಮೈಸೂರು ನಗರ ಬಸ್ ನಿಲ್ದಾಣ ಹಾಗೂ ಗ್ರಾಮಾಂತರ ಬಸ್ ನಿಲ್ದಾಣವನ್ನು ಸ್ಥಳಾಂತರಿಸುವ ಕುರಿತು ಬುಧವಾರ ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಗರಪಾಲಿಕೆ 2023–24ನೇ ಸಾಲಿನ ಬಜೆಟ್ ಕರಡು ಸಿದ್ಧಪಡಿಸುವ ಸಂಬಂಧ ಪೂರ್ವಭಾವಿಯಾಗಿ ಕರೆದಿದ್ದ ಎರಡನೇ ಸುತ್ತಿನ ಸಾರ್ವಜನಿಕರೊಂದಿಗೆ ಸಮಾಲೋಚನಾ ಸಭೆಯಲ್ಲಿ ಈ ಒತ್ತಾಯಗಳು ಕೇಳಿ ಬಂದವು.

ಮೈಸೂರು ನಗರ ಬಸ್ ನಿಲ್ದಾಣ ಮತ್ತು ಗ್ರಾಮಾಂತರ ಬಸ್ ನಿಲ್ದಾಣವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಎಸ್.ಕೆ.ದಿನೇಶ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಇನ್ನಿತರರು ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಮೈಸೂರು ನಗರದ ಅಭಿವೃದ್ಧಿ ದೃಷ್ಟಿಯಿಂದ ಬಸ್ ನಿಲ್ದಾಣವನ್ನು ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಬಳಿಯ ರಿಂಗ್ ರಸ್ತೆ ಜಂಕ್ಷನ್‌ಗೆ ಸ್ಥಳಾಂತರಿಸಲು ಸಲಹೆ ನೀಡಿದರು.

ಮೈಸೂರಿನ ಹೃದಯ ಭಾಗದಲ್ಲಿನ ಸಂಚಾರ ದಟ್ಟಣೆಯನ್ನು ತಪ್ಪಿಸಲು ನಗರ ಬಸ್ ನಿಲ್ದಾಣವನ್ನು ಬನ್ನಿಮಂಟಪಕ್ಕೆ, ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣವನ್ನು ಸಹ ಬೇರೆಡೆಗೆ ಸ್ಥಳಾಂತರಿಸುವುದು ಸೂಕ್ತ ಎಂದು ಎಸ್.ಕೆ.ದಿನೇಶ್ ಸಲಹೆ ನೀಡಿದರು. ಇದಕ್ಕೆ ದನಿಗೂಡಿಸಿದ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಬನ್ನಿಮಂಟಪದಲ್ಲಿ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಸಾಕಷ್ಟು ಜಮೀನು ಇದೆ. ಹೀಗಾಗಿ ನಗರದಲ್ಲಿ ಟ್ರಾಫಿಕ್ ಒತ್ತಡವನ್ನು ತಪ್ಪಿಸಲು ಬಸ್ ನಿಲ್ದಾಣವನ್ನು ಸ್ಥಳಾಂತರಿಸುವುದು ಉತ್ತಮ ಎಂದರು.

ಬಸ್ ನಿಲ್ದಾಣ ಸ್ಥಳಾಂತರಿಸುವ ಯೋಜನೆ ಇದೆ: ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್




ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಗರಪಾಲಿಕೆ ಕರೆದಿದ್ದ ಬಜೆಟ್ ಪೂರ್ವಭಾವಿ ಸಾರ್ವಜನಿಕ ಸಭೆಯಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪಾ, ಆಯುಕ್ತ ಜಿ.ಲಕ್ಷ್ಮಿಕಾಂತರೆಡ್ಡಿ, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಇನ್ನಿತರರಿದ್ದರು. ಬಲಚಿತ್ರದಲ್ಲಿ ಮಾಜಿ ಮೇಯರ್ ಮೋದಾಮಣಿ ಮಾತನಾಡುತ್ತಿರುವುದು.

ಇದಕ್ಕೆ ಪ್ರತಿಕ್ರಿಯಿಸಿದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಬಸ್ ನಿಲ್ದಾಣವನ್ನು ಸ್ಥಳಾಂತರಿಸುವ ಯೋಜನೆ ನಮ್ಮ ಮುಂದಿದೆ ಆದರೆ ಯೋಜನೆಯ ವಿವರಗಳನ್ನು ಮಾತ್ರ ಅವರು ನೀಡಲಿಲ್ಲ. ಈ ವೇಳೆ ಪ್ರಾಧಿಕಾರಕ್ಕೆ ಸಂಬಂಧಿಸಿದ ಕುಂದುಕೊರತೆಗಳ ಬಗ್ಗೆ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

100 ಅಡಿ ಎತ್ತರದ ನಾಲ್ವಡಿ ಪ್ರತಿಮೆ: ಮೈಸೂರಿನ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 100 ಅಡಿ ಎತ್ತರದ ಪ್ರತಿಮೆ ನಿರ್ಮಿಸುವಂತೆ ಸಾರ್ವಜನಿಕ ಒತ್ತಾಯಗಳ ಹಿನ್ನೆಲೆಯಲ್ಲಿ ಪ್ರತಿಮೆ ನಿರ್ಮಾಣ ಸಂಬಂಧ ಯೋಜನೆ ರೂಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ತಿಳಿಸಿದರು.

ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮಾತನಾಡಿ, ಕೇಂದ್ರದಿಂದ ನಿಗದಿಪಡಿಸಿದ ರಾಜ್ಯ ಸರ್ಕಾರದ ಜಿಎಸ್ಟಿ ಮೊತ್ತದಲ್ಲಿ ಸ್ಥಳೀಯ ಸಂಸ್ಥೆಗಳು ಪಾಲು ಪಡೆಯಬಹುದಾದ್ದರಿಂದ ನಗರಪಾಲಿಕೆ ಅಧಿಕಾರಿಗಳು ತಮಗೆ ಬರಬೇಕಾದ ಜಿಎಸ್‌ಟಿ ಹಣವನ್ನು ಪಡೆದುಕೊಳ್ಳುವುದರತ್ತ ಹೆಚ್ಚು ಗಮನ ಕೇಂದ್ರೀಕರಿಸಿ, ಪ್ರಯತ್ನಿಸಬೇಕು. ಇದರಿಂದ ಪಾಲಿಕೆಗೆ ಆದಾಯ ದೊರೆಯಲಿದೆ ಎಂದು ಸಲಹೆ ನೀಡಿದರು.

ಮೈಸೂರಿನ ಜೆ.ಪಿ.ನಗರ, ಶಾರದಾದೇವಿನಗರ ಮತ್ತು ಹೆಬ್ಬಾಳದಲ್ಲಿ ಪಾಲಿಕೆಗೆ ಮಂಜೂರಾದ ಮುಡಾ ನಿವೇಶನಗಳು ನಿರ್ಲಕ್ಷ್ಯಕ್ಕೆ ಒಳಗಾಗಿ, ಪಾಳು ಬಿದ್ದಿರುವ ಬಗ್ಗೆ ಭೈರಪ್ಪ ಗಮನ ಸೆಳೆದರು. ರಿಂಗ್‌ರಸ್ತೆಯ ಹೊರ ವಲಯದಲ್ಲಿ ಸ್ಥಳೀಯ ನಿವಾಸಿಗಳಿಂದ ಸಂಗ್ರಹಿಸುವ ನೀರು ಮತ್ತು ಒಳಚರಂಡಿ ತೆರಿಗೆಯ ಪಾಲು ನಗರಪಾಲಿಕೆಗೆ ಸೇರಬೇಕು. ಅಲ್ಲಿನ ನಿವಾಸಿಗಳಿಗೆ ನೀರು ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಪಾಲಿಕೆಯವರು ಈ ಹಣವನ್ನು ಮುಡಾದಿಂದ ಪಡೆಯಬೇಕು ಎಂದು ಆಗ್ರಹಿಸಿದರು.

ರಾಷ್ಟ್ರಕವಿ ಕುವೆಂಪು ಅವರ ಹೆಸರಿನಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಸ್ಥಾಪಿಸಲು ಪಾಲಿಕೆ ಕ್ರಮ ಕೈಗೊಳ್ಳಬೇಕು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದವರಿಗೆ ಪ್ರಶಸ್ತಿ ನೀಡುವ ಕೆಲಸವನ್ನು ಪಾಲಿಕೆ ಮಾಡಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಸಲಹೆ ನೀಡಿದರು. ಪಾಲಿಕೆಯು 2023–24ರ ಬಜೆಟ್ ತಯಾರಿಸುವ ಸಂಬಂಧ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲೆಂದು ಕರೆದಿದ್ದ ಬಜೆಟ್ ಪೂರ್ವಭಾವಿ ಸಭೆಯಲ್ಲಿ, ಸಭೆಯ ಆರಂಭದಲ್ಲಿ ಬಜೆಟ್‌ಗಿಂತ ಹೆಚ್ಚಾಗಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಬೇಡಿಕೆಗಳೇ ಹೆಚ್ಚಾಗಿ ಕೇಳಿ ಬಂದವು.

ಮೇಯರ್ ಶಿವಕುಮಾರ್, ಮೇಯರ್ ಡಾ.ಜಿ.ರೂಪ, ಮಾಜಿ ಮೇಯರ್‌ಗಳಾದ ಸುನಂದಾ ಪಾಲನೇತ್ರ, ಎಚ್.ಎನ್.ಶ್ರೀಕಂತಯ್ಯ, ಮಾಜಿ ಉಪಮೇಯರ್ ಮೋದಾಮಣಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಜಿ.ಲಕ್ಷ್ಮಿಕಾಂತರೆಡ್ಡಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಇನ್ನಿತರರು ಉಪಸ್ಥಿತರಿದ್ದರು.

ಜ.10, ಮುಡಾ ಅದಾಲತ್

ಜ.10ರಂದು ಮುಡಾ ಅದಾಲತ್ ಆಯೋಜಿಸಲಾಗಿದೆ ಎಂದು ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ತಿಳಿಸಿದರು. ನಗರಪಾಲಿಕೆ ಬಜೆಟ್ ಪೂರ್ವಭಾವಿ ಸಾರ್ವಜನಿಕ ಸಭೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಹೆಚ್ಚು ದೂರು, ಒತ್ತಾಯಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಅಧ್ಯಕ್ಷರು ಮುಡಾ ಅದಾಲತ್ ಏರ್ಪಡಿಸಿರುವ ಬಗ್ಗೆ ಪ್ರಕಟಿಸಿದರು. ಮುಡಾ ಅಧಿಕಾರಿಗಳನ್ನು ಒಳಗೊಂಡಂತೆ ನಡೆಯುವ ಈ ಅದಾಲತ್‌ನಲ್ಲಿ ಸಾರ್ವಜನಿಕರು ತಮ್ಮ ಕುಂದುಕೊರತೆ, ದೂರುಗಳನ್ನು ಸಲ್ಲಿಸಲು ಅವಕಾಶವಿದೆ ಎಂದು ಹೇಳಿದರು.

ಪಾಲಿಕೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ನಾನಾ ಕ್ಷೇತ್ರದ ಮುಖಂಡರಿಂದ ಹತ್ತು ಹಲವು ಸಲಹೆ

ಮೈಸೂರು,ಜ.4(ಆರ್‌ಕೆಬಿ)–ರೆವಿನ್ಯೂ ಬಡಾವಣೆಗಳಲ್ಲಿ ತೆರಿಗೆ ಸಂಗ್ರಹ ಮಾಡುವತ್ತ ಗಮನ ನೀಡಿ. ಅಧಿಕಾರಿಗಳ ಸೋಮಾರಿತನ ತಪ್ಪಿಸಬೇಕು. ಅತೀ ಹೆಚ್ಚು ಆದಾಯದ ಮೂಲವಾದ ಮಾರುಕಟ್ಟೆಗಳಲ್ಲಿ ಆಸ್ತಿ ಸಂಗ್ರಹಕ್ಕೆ ಆದ್ಯತೆ ನೀಡಬೇಕು. ಮಲ್ಟಿ ಲೆವೆಲ್ ಪಾರ್ಕಿಂಗ್ ಆಗಬೇಕು. ಶಾಶ್ವತ ಆದಾಯ ಬರುವಂತಹ ಕಟ್ಟಡಗಳ ನಿರ್ಮಾಣಕ್ಕೆ ಪ್ರಾತಿನಿಧ್ಯ ನೀಡಿ. ಟ್ರೇಡರ್‌ಗಳಿಗೆ ಹಾಕುತ್ತಿರುವ ಹೆಚ್ಚಿನ ದಂಡ ತಪ್ಪಿಸಿ. ವಿಶ್ವಕರ್ಮರ, ಅಮರಶಿಲ್ಪಿ ಜಕಣಾಚಾರಿ ಪ್ರತಿಮೆ ಸ್ಥಾಪನೆಗೆ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿ.

2023–24ರ ಮೈಸೂರು ನಗರಪಾಲಿಕೆ ಬಜೆಟ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಭಿಪ್ರಾಯ, ಸಲಹೆ ಸೂಚನೆ ಪಡೆಯಲೆಂದು ಮೇಯರ್ ಶಿವಕುಮಾರ್, ಬುಧವಾರ ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಾರ್ವಜನಿಕರೊಂದಿಗೆ ಸಮಾಲೋಚನಾ ಸಭೆಯಲ್ಲಿ ಇಂತಹ ಹತ್ತಾರು ಬೇಡಿಕೆ, ಸಲಹೆಗಳು ಕೇಳಿ ಬಂದವು.

ಆದಾಯ ಸಂಪನ್ಮೂಲ ಕ್ರೋಡೀಕರಿಸುವತ್ತ ಗಮನ ನೀಡಿ: ಮಾಜಿ ಮೇಯರ್ ಶ್ರೀಕಂತಯ್ಯ ಅವರು ಬಜೆಟ್‌ನಲ್ಲಿ ಅಳವಡಿಸಬೇಕಾದ ಆದಾಯ, ಖರ್ಚು, ವೆಚ್ಚಗಳ ಬಗ್ಗೆ ಗಮನ ಸೆಳೆದರು. ಆದಾಯ ಸಂಪನ್ಮೂಲ ಕ್ರೋಡೀಕರಿಸಿಕೊಳ್ಳುವತ್ತ ಪಾಲಿಕೆ ಗಮನ ಹರಿಸಬೇಕು. ಆಸ್ತಿ ತೆರಿಗೆ, ನಿರೀಕ್ಷಿಸಿದಷ್ಟು ಬರುತ್ತಿಲ್ಲ. 28 ರೆವಿನ್ಯೂ ಬಡಾವಣೆಗಳಲ್ಲಿ ತೆರಿಗೆ ಸಂಗ್ರಹ ಮಾಡುತ್ತಿಲ್ಲ. ಅಧಿಕಾರಿಗಳು ವ್ಯವಸ್ಥಿತವಾಗಿ ವಿಳಂಬ ಮಾಡುತ್ತಿದ್ದಾರೆ. ಅಧಿಕಾರಿಗಳ ಸೋಮಾರಿತನದಿಂದಾಗಿ ತೆರಿಗೆ ಸಂಗ್ರಹ ಆಗುತ್ತಿಲ್ಲ. ನಾನಾ ನೆಪ ಹೇಳಿ ವಿಳಂಬಕ್ಕೆ ಕಾರಣರಾಗಿದ್ದಾರೆ ಎಂದು ದೂರಿದರು.

ಮೈಸೂರಿನಲ್ಲಿ 500ಕ್ಕೂ ಹೆಚ್ಚು ಉದ್ದಿಮೆಗಳಿದ್ದು, ಪಾಲಿಕೆಗೆ ಕಿಂಚಿತ್ತೂ ತೆರಿಗೆ ಕೊಡಬೇಕು ಎಂಬ ಭಾವನೆ ಜನರಿಗಿದ್ದರೂ, ತೆರಿಗೆ ವಸೂಲಿಯಲ್ಲಿ ನಗರಪಾಲಿಕೆ ಅಧಿಕಾರಿಗಳು ವಿಫಲವಾಗಿದ್ದಾರೆ ಎಂದರು.

ತೆರಿಗೆ ವಸೂಲಾತಿ ಕುಂಠಿತ: ಅತೀ ಹೆಚ್ಚು ಆದಾಯದ ಮೂಲವಾದ ಕಟ್ಟಡ ರಹದಾರಿಯಲ್ಲಿ ಸಿಆರ್ ಕೊಡುವ ಕೆಲಸ ಕುಂಠಿತವಾಗುತ್ತಿದೆ. ವಾಣಿವಿಲಾಸ, ದೇವರಾಜ ಮತ್ತು ಮಂಡಿ ಮಾರುಕಟ್ಟೆಗಳಿಂದ ಆದಾಯ ಕುಂಠಿತವಾಗಿದೆ. ವಸೂಲಾತಿ ಆಗುತ್ತಿಲ್ಲ. ಪಾಲಿಕೆಗೆ ಸೇರಿದ ಕಟ್ಟಡಗಳಿಂದಲೇ ಆಸ್ತಿ ತೆರಿಗೆ ವಸೂಲು ಮಾಡಿ, ಇವೆಲ್ಲವೂ ನಿರೀಕ್ಷಿತ ಆದಾಯದ ಮೂಲಗಳು. 9 ವಲಯ ಕಚೇರಿಗಳಿದ್ದರೂ ತಮ್ಮ ಕೆಲಸಗಳಿಗೆ ಬರುವ ಜನರು ಅಲೆಯುವಂತಾಗಿದೆ. ನಿರ್ವಹಣೆ ವೆಚ್ಚ ಕಡಿಮೆ ಮಾಡುವತ್ತ ಗಮನ ಹರಿಸಿ. ಪಾಲಿಕೆಗೆ ಶಾಶ್ವತ ಆದಾಯ ಬರುವಂತಹ ಕಟ್ಟಡಗಳ ಕೊರತೆ ಇದೆ. ಹಾಗಾಗಿ ಒಂದು ಮಲ್ಟಿಲೆವೆಲ್ ಪಾರ್ಕಿಂಗ್ ಮಾಡಲಾಗಿಲ್ಲ. ಟೌನ್‌ಹಾಲ್‌ನಲ್ಲಿ ಒಳ್ಳೆಯ ಗುತ್ತಿಗೆದಾರನಿಗೆ ಕೊಡದ ಹಿನ್ನೆಲೆಯಲ್ಲಿ ಇಂದು ಅದು ಪಾಳು ಬೀಳುವಂತಾಗಿದೆ. ವಲಯ ಕಚೇರಿಗಳಿಗೆ ಸ್ವಂತ ಕಟ್ಟಡ ಕಲ್ಪಿಸುವಂತಾಗಬೇಕು ಎಂದು ಸಲಹೆ ನೀಡಿದರು.



ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮಾತನಾಡಿ, ಇನ್ನೂ ಮುಡಾ ವಶದಲ್ಲೇ ಇರುವ ಬನ್ನಿಮಂಟಪ ಕೈಗಾರಿಕಾ ಪ್ರದೇಶವನ್ನು ಪಾಲಿಕೆ ವಶಕ್ಕೆ ಪಡೆಯಬೇಕು. ಖಾತೆ ಕಂದಾಯ ವಿಚಾರದಲ್ಲಿ ಜನರಿಗೆ ಆಗುತ್ತಿರುವ ಕಿರಿಕಿರಿ ತಪ್ಪಿಸಿ. ನಮ್ಮ ಹಣ ಕಟ್ಟಲು ನಾವು ಪರದಾಡುವಂತಾಗಿದೆ. ಆನ್‌ಲೈನ್ ಆಗಿದೆ ಎನ್ನುತ್ತೀರಿ. ಆದರೆ ಅರ್ಧದಷ್ಟು ಆಫ್‌ಲೈನ್‌ನಲ್ಲೇ ಇದೆ ಎಂದು ತಮ್ಮ ಸಲಹೆಗಳ ಪಟ್ಟಿಯನ್ನೇ ಸಭೆಗೆ ಮಂಡಿಸಿದರು.

ಟ್ರೇಡ್ ಲೈಸೆನ್ಸ್ ಸಿಗುತ್ತಿಲ್ಲ: ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ನಗರದಲ್ಲಿ 4 ಸಾವಿರ ಕಾಂಪ್ಲೆಕ್ಸ್‌ಗಳಿಗೆ ಸಿಆರ್ ನೀಡಿಲ್ಲ. ಸಿಆರ್ ಆಗಿಲ್ಲ ಎಂದು ಟ್ರೇಡ್ ಲೈಸೆನ್ಸ್ ಸಿಗುತ್ತಿಲ್ಲ. ಒಂದು ಟ್ರೇಡ್ ಲೈಸೆನ್ಸ್‌ಗೆ 67 ಸಾವಿರ ಹಾಕಲಾಗುತ್ತಿದೆ. ಈ ನ್ಯೂನತೆಯನ್ನು ಸರಿಪಡಿಸಬೇಕು. 10 ವರ್ಷವಾದರೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಸ್ಥಿತಿಯಲ್ಲಿ ಏನೂ ಬದಲಾವಣೆ ಆಗಿಲ್ಲ. ಕೆಡವಿ ಇಲ್ಲವೇ ಹೊಸದಾಗಿ ನಿರ್ಮಿಸಿ, ಎಲ್ಲಾ ಪಾರಂಪರಿಕ ಕಟ್ಟಡಗಳನ್ನು ಉಳಿಸಿ ಎಂದು ಹೇಳಿದರು.

ಸಾರ್ವಜನಿಕರ ಸಲಹೆ ಆಧರಿಸಿ ಬಜೆಟ್: ಮೇಯರ್ ಭರವಸೆ

ನಮಗೆ ಬಜೆಟ್‌ನ ಖರ್ಚು ವೆಚ್ಚ ಇಟ್ಟುಕೊಂಡು ಬಜೆಟ್ ಮಾಡಬೇಕಾಗಿದೆ. ಹಾಗಾಗಿ ಸಾರ್ವಜನಿಕರೊಂದಿಗೆ ಸಮಾಲೋಚಿಸಿ ಈ ಬಜೆಟ್ ಸಿದ್ಧಪಡಿಸಲಿದ್ದೇವೆ. ಮೈಸೂರು ನಗರದ ಅಭಿವೃದ್ಧಿಯ ದೂರದೃಷ್ಟಿಯಿಂದ ಸಾರ್ವಜನಿಕರ ಅಮೂಲ್ಯ ಸಲಹೆ ಪಡೆಯಲೆಂದು ಈ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಬಂದಿರುವ ಸಲಹೆಗಳನ್ನು ಅಳವಡಿಸಿಕೊಂಡು ಬಜೆಟ್ ರೂಪಿಸಲಾಗುವುದು. ನಮ್ಮ ಪರಿಮಿತಿಯಲ್ಲಿ ಏನೇನು ಸಾಧ್ಯವಿದೆಯೋ ಅವೆಲ್ಲವನ್ನು ಪರಿಗಣಿಸಿ, ಬಜೆಟ್ ಮಾಡುತ್ತಿದ್ದೇವೆ ಎಂದು ಮೇಯರ್ ಶಿವಕುಮಾರ್ ಭರವಸೆ ನೀಡಿದರು.

ನಾಯಿಗಳ ಕಾಟ ತಪ್ಪಿಸಿ: ಮೈಸೂರಿನಲ್ಲಿ ಎಲ್ಲೆಂದರಲ್ಲಿ ನಾಯಿಗಳ ಕಾಟ ಹೆಚ್ಚಾಗಿ, ನಾಗರಿಕರು ತೊಂದರೆ ಅನುಭವಿಸುವಂತಾಗಿದೆ. ನಾಯಿಗಳು ಜನರನ್ನು, ಮಕ್ಕಳನ್ನು ಅಟ್ಟಾಡಿಸಿಕೊಂಡು ಕಚ್ಚುವ ಪರಿಸ್ಥಿತಿ ಇದೆ. ಇದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು ಎಂದರು. ವಿಶ್ವಕರ್ಮರ ಪ್ರತಿಮೆ ಸ್ಥಾಪಿಸಿ, ಯಾವುದಾದರೂ ವೃತ್ತಕ್ಕೆ ಅಮರಶಿಲ್ಪಿ ಜಕಣಾಚಾರಿ ಹೆಸರಿಡಿ. ವಿಶ್ವಕರ್ಮ ಸಮಾಜಕ್ಕೆ ಸಿಎ ನಿವೇಶನ ನೀಡಿ ಎಂದು ವಿಶ್ವಕರ್ಮ ಸಮಾಜದ ಮುಖಂಡರು ಆಗ್ರಹಿಸಿದರೆ, ಶಿವಶರಣ ಹಡಪದ ಅಪ್ಪಣ್ಣ ಪ್ರತಿಮೆ ಸ್ಥಾಪಿಸಿ, ವೃತ್ತಕ್ಕೆ ಸವಿತಾ ಮಹರ್ಷಿಗಳ ಹೆಸರಿಡಿ ಎಂದು ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್ ಆಗ್ರಹಿಸಿದರು.

ಪೆಟ್ರೋಲಿಯಂ ಮಾಲೀಕರ ಸಂಘದ ಅಧ್ಯಕ್ಷೆ ಶಶಿಕಲಾ ನಾಗರಾಜ್ ಅವರು, ಎಪಿಎಂಸಿ ಸಿಗ್ನಲ್ ಬಳಿ ಸಣ್ಣ ಬಸವನ ವಿಗ್ರಹವಿದ್ದು, ಅದನ್ನು ಗೌರವಯುತವಾಗಿ ಬೇರೆಡೆಗೆ ಸ್ಥಳಾಂತರಿಸಿ, ಪೂಜೆಗೆ ಅವಕಾಶ ಮಾಡಿ ಕೊಡಬೇಕು ಎಂದು ಸಲಹೆ ನೀಡಿದರು. ವರ್ತಕ ರಮೇಶ್‌ಕುಮಾರ್ ಮಾತನಾಡಿ, ಟ್ರೇಡರ್‌ಗಳು ಮೈಸೂರಿನಲ್ಲಿ ಬಿಸಿನೆಸ್ ಮಾಡಲು ಹೆದರುವಂತಾಗಿದೆ. ದಂಡ ಜಾಸ್ತಿ ಹಾಕುತ್ತಿದ್ದೀರಿ. ಇದನ್ನು ತಪ್ಪಿಸಿ ಎಂದು ಹೇಳಿದರು.

ಮಲ್ಟಿಲೆವೆಲ್ ಪಾರ್ಕಿಂಗ್ ವ್ಯವಸ್ಥೆ ಮಾಡಿ: ಮೈಸೂರು ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ದೇವರಾಜ ಅರಸು ರಸ್ತೆ, ಅಶೋಕ ರಸ್ತೆಗೆ ಸಂಬಂಧಿಸಿದಂತೆ ಮಲ್ಟಿಲೆವೆಲ್ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿಕೊಡಿ. ಟ್ರೇಡ್ ಲೈಸೆನ್ಸ್‌ಗೆ ಸಂಗ್ರಹಿಸುವ ಡಬ್ಬಲ್ ಟ್ಯಾಕ್ಸ್ ಬದಲು, ಸಿಂಗಲ್ ಟ್ಯಾಕ್ಸ್ ವಸೂಲಿ ಮಾಡಿ ಎಂದು ಸಲಹೆ ನೀಡಿದರು.

ಹಿಂದುಳಿದ ಸಮಾಜಗಳ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಅನುಕೂಲ ಆಗುವಂತೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಿ ಎಂದು ಜಿಲ್ಲಾ ಭಗೀರಥ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್ ತಿಳಿಸಿದರು.

ಬೀದಿಬದಿ ವ್ಯಾಪಾರಿಗಳ ಕಿರಿಕಿರಿ ತಪ್ಪಿಸಿ: ಕೆಆರ್‌ಎಸ್ ಪಕ್ಷದ ಮುಖಂಡ ಆದರ್ಶ ಮಾತನಾಡಿ, ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್‌ನಲ್ಲಿ ಪಾದಚಾರಿಗಳು ಮುಕ್ತವಾಗಿ ಓಡಾಡಲು ಆಗದ ರೀತಿಯಲ್ಲಿ ಬೀದಿ ಬದಿ ವ್ಯಾಪಾರಿಗಳು ಆಕ್ರಮಿಸಿಕೊಂಡಿದ್ದಾರೆ. ಅವರನ್ನು ಬೇರೆಡೆಗೆ ಸ್ಥಳಾಂತರಿಸಿ, ದೇವರಾಜ ಮಾರುಕಟ್ಟೆಗೆ ಜನರು ಮುಕ್ತವಾಗಿ ಓಡಾಡಲು ಅವಕಾಶ ಆಗಬೇಕು. ನಗರಕ್ಕೆ ಬರುವ ಪ್ರವಾಸಿಗರಿಗೆ ಮೈಸೂರು ಉತ್ತಮ ಸಾಂಸ್ಕೃತಿಕ ನಗರ ಎಂಬುದು ತಿಳಿಯುವಂತಾಗಬೇಕು ಎಂದು ಸಲಹೆ ನೀಡಿದರು.

ವಾಸ್ತವಿಕ ಗುರಿಯೊಂದಿಗೆ ಬಜೆಟ್ ರೂಪಿಸಿ: ಇಂಜಿನಿಯರ್ ಸಂತೋಷ್ ಅವರು, ಬಜೆಟ್ ಅನ್ನು ತೀರಾ ಸುಲಭ ಮಾಡಿಕೊಳ್ಳಿ. ವಾಸ್ತವಿಕ ಗುರಿ ಹೊಂದಿರಬೇಕು. ನಿಮ್ಮ ಆದಾಯ ವೆಚ್ಚ ಗುರ್ತಿಸಿ, ಅಗತ್ಯ ಮತ್ತು ಅನಗತ್ಯ ವೆಚ್ಚಗಳ ಬಗ್ಗೆ ಯೋಚಿಸಿ, ಬಜೆಟ್ ವಿನ್ಯಾಸಗೊಳಿಸಬೇಕು. ಅಲ್ಲದೆ ಬಜೆಟ್‌ನಲ್ಲಿ ನೀಡಿರುವ ಯೋಜನೆಗಳು ಕಾರ್ಯಗತವಾಗಬೇಕು. ಹಾಗಾದರೆ ಮಾತ್ರ ಉತ್ತಮ ಬಜೆಟ್ ಎನಿಸಿಕೊಳ್ಳಲು ಸಾಧ್ಯ ಎಂದು ತಿಳಿಸಿದರು.




ಬುಧವಾರ ಬೆಂಗಳೂರಿಗೆ ಆಗಮಿಸಿದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಯಶ್ವಂತ್ ಅಂಬೇಡ್ಕರ್ ಅವರನ್ನು ಜೆಡಿಎಸ್ ಪಕ್ಷದ ಪರವಾಗಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡರು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಖಾಸಗಿ ಹೋಟೆಲ್‌ನಲ್ಲಿ ರಾಜಕೀಯ ಸಂಬಂಧಿತ ಚರ್ಚೆ ನಡೆಸಿದರು.

ಚಾಮರಾಜ ವೃತ್ತದ ದುರಸ್ತಿ ಕಾರ್ಯ ಆರಂಭ



ಮೈಸೂರು,ಜ.4(ಜಿಎ)–ಮೈಸೂರಿನ ಚಾಮರಾಜ ಒಡೆಯರ್ ವೃತ್ತದ ಅವ್ಯವಸ್ಥೆಯನ್ನು ಸರಿಪಡಿಸುವ ಕಾರ್ಯವನ್ನು ಪಾಲಿಕೆ, ಇಂದು ಬೆಳಗ್ಗೆಯಿಂದ ಆರಂಭಿಸಿದೆ.

ಮೈಸೂರು ಅರಮನೆ ಕೋಟೆ ಆಂಜನೇಯ ದೇವಾಲಯದ ಮುಂಭಾಗವಿರುವ ಚಾಮರಾಜ ಒಡೆಯರ್ ವೃತ್ತದ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಮೇಯರ್ ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಬುಧವಾರ ಬೆಳಗ್ಗೆ ಪಾಲಿಕೆ ಸಿಬ್ಬಂದಿ ರಿಪೇರಿ ಕಾರ್ಯಕೈಗೊಂಡಿದ್ದಾರೆ.

ಪಾರಂಪರಿಕ ತಜ್ಞ ಪ್ರೊ.ರಂಗರಾಜು ನೇತೃತ್ವದ ಪಾರಂಪರಿಕ ಉಪಸಮಿತಿ ಸರ್ವೆ ನಡೆಸುತ್ತಿದ್ದ ಸಂದರ್ಭದಲ್ಲಿ ವೃತ್ತದ ಅಧ್ವಾನಗಳು ಕಂಡಿದ್ದವು. ಕೂಡಲೇ ರಂಗರಾಜು ಅವರು ಮೇಯರ್‌ಗೆ ಕರೆ ಮಾಡಿ ಇಲ್ಲಿನ ಪರಿಸ್ಥಿತಿಯ ಬಗ್ಗೆ ತಿಳಿಸುತ್ತಿದ್ದಂತೆ ತಕ್ಷಣ ಸ್ಥಳಕ್ಕೆ ಧಾವಿಸಿದ ಮೇಯರ್ ಶಿವಕುಮಾರ್, ಉಪಸಮಿತಿ ಜೊತೆಗೂಡಿ ವೃತ್ತವನ್ನು ಪರಿಶೀಲಿಸಿದ್ದರು.

ಪ್ರಾಂಕ್ ಪೇ ಆ್ಯಪ್ ಬಳಸಿ ಚಿನ್ನಾಭರಣ ಅಂಗಡಿಗಳಲ್ಲಿ ವಂಚನೆ: ಮೂವರ ಬಂಧನ

ಮೈಸೂರು,ಜ.4(ಎಂಕೆ)–ಪ್ರಾಂಕ್ ಪೇ ಆ್ಯಪ್(ಅಪ್ಲಿಕೇಷನ್) ಬಳಸಿ ಚಿನ್ನಾಭರಣ ಅಂಗಡಿಗಳಿಗೆ ಹಣ ವರ್ಗಾವಣೆಯಾಗಿದೆ ಎಂದು ನಂಬಿಸಿ ಮೋಸ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ಸೆನ್ ಕ್ರೈಂ ಠಾಣೆ ಪೊಲೀಸರು ಬಂಧಿತರಿಂದ 12 ಗ್ರಾಂನ ಸರ, 2 ಮೊಬೈಲ್ ಹಾಗೂ 4,500 ರೂ.ನಗದು ವಶಕ್ಕೆ ಪಡೆದಿದ್ದಾರೆ. 2022ರ ಡಿ.30ರಂದು ಜ್ಯುವೆಲರಿ ಅಂಗಡಿಗೆ ಬಂದಿದ್ದ ಇಬ್ಬರು 62,500 ರೂ ಮೌಲ್ಯದ 11.250 ಗ್ರಾಂ ಚಿನ್ನದ ಸರ ಹಾಗೂ ಡಾಲರ್ ಖರೀದಿಸಿ, ಹಣವನ್ನು ಫೋನ್ ಪೇ ಮಾಡುವುದಾಗಿ ಹೇಳಿ ನಕಲಿ ಸ್ಕ್ರೀನ್‌ಶಾಟ್ ತೋರಿಸಿ ಹಣ ವರ್ಗಾವಣೆಯಾಗಿದೆ ಎಂದು ಮೋಸ ಮಾಡಿದ ಬಗ್ಗೆ ದೂರು ದಾಖಲಾಗಿತ್ತು. ತನಿಖೆ ನಡೆಸಿದ ಸೇನ್ ಕ್ರೈಂ ಠಾಣೆ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಪ್ರಾಂಕ್ ಪೇ ಎಂಬ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡು, ಜ್ಯೂವೆಲರಿ ಅಂಗಡಿಯಲ್ಲಿ ಚಿನ್ನವನ್ನು ಖರೀದಿಸಿ, ಖರೀದಿ ಮಾಡಿದ ಹಣ ಅಂಗಡಿಯವರಿಗೆ ಪಾವತಿಯಾಗಿರುವಂತೆ ನಕಲಿ ಸ್ಕ್ರೀನ್‌ಶಾಟ್ ತೋರಿಸಿ ಹಣ ವರ್ಗಾವಣೆ ಆಗಿದೆ ಎಂದು ನಂಬಿಸಿ ಮೈಸೂರು ಸೇರಿದಂತೆ ಹಲವೆಡೆ ಸುಮಾರು 1,26,500 ರೂ. ವಂಚಿಸಿರುವುದು ತನಿಖೆ ವೇಳೆ ಬಯಲಾಗಿದೆ. ಡಿಸಿಪಿ ಎಂ.ಮುತ್ತುರಾಜು ಮಾರ್ಗದರ್ಶನ, ದೇವರಾಜ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ನೇತೃತ್ವದಲ್ಲಿ ನಡೆದ ತನಿಖೆಯಲ್ಲಿ ಸೆನ್ ಕ್ರೈಂ ಪೊಲೀಸ್ ಠಾಣಾ ಇನ್ಸ್‌ಸ್ಪೆಕ್ಟರ್ ಎನ್.ಜಯಕುಮಾರ್, ಪಿಎಸ್‌ಐಗಳಾದ ಅನಿಲ್‌ಕುಮಾರ್, ಸಿದ್ದೇಶ್, ಎಎಸ್‌ಐ ಸುಭಾಷ್‌ಚಂದ್ರ ಹಾಗೂ ಸಿಬ್ಬಂದಿಗಳಾದ ನಾಗೇಂದ್ರ, ಶ್ರೀನಿವಾಸ್, ಮಧು, ಭವಾನಿ, ಕುಮಾರ್ ಭಾಗವಹಿಸಿದ್ದರು.

ಕೆಪಿಟಿಸಿಎಲ್ ಅಕ್ರಮ: ಮತ್ತೆ ಮೂವರ ಬಂಧನ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ, ಪೊಲೀಸರು ಬುಧವಾರ ಮತ್ತೆ ಮೂವರನ್ನು ಬಂಧಿಸಿದ್ದಾರೆ. ಈವರೆಗೆ ಬಂಧಿತರಾದವರ ಸಂಖ್ಯೆ 48ಕ್ಕೇರಿದೆ. ಗೋಕಾಕ್ ತಾಲೂಕಿನ ಮಲ್ಲಾಪುರ ಪಿ.ಜಿ. ಗ್ರಾಮದ ಅಣ್ಣಪ್ಪ ಕೆಂಪಣ್ಣ ವಾರವಾಡಿ(31), ಶಿವಾಪುರದ ಜಾನ್‌ರಾಬರ್ಟ್ ಯಶವಂತ ಬಂಗೆನ್ನವರ(26), ಮೂಡಲಗಿಯ ರಾಜಾಪುರದ ಚಿದಾನಂದ ಚಿನ್ನಪ್ಪ ಮಾಡಲಗಿ(27) ಬಂಧಿತರು. ಪರೀಕ್ಷೆಯಲ್ಲಿ ಎಲೆಕ್ಟ್ರಾನಿಕ್ ಡಿವೈಸ್ ಮತ್ತು ಮೈಕ್ರೋಚಿಪ್ ಬಳಸಿ, ಮೂವರು ಪರೀಕ್ಷೆ ಬರೆದಿದ್ದರು. ಅವರಿಂದ ಅಕ್ರಮಕ್ಕೆ ಬಳಸಿದ್ದ ಸಾಮಗ್ರಿಗಳ ವಶಕ್ಕೆ ಪಡೆದಿದ್ದು, ಆರೋಪಿತರು ನ್ಯಾಯಾಂಗ ಬಂಧನದಲ್ಲಿದ್ದಾರೆ ಎಂದು ಎಸ್‌ಪಿ ಡಾ.ಸಂಜೀವ್‌ಪಾಟೀಲ ತಿಳಿಸಿದ್ದಾರೆ.

ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆಗಾರಿಕೆ

ಬೆಂಗಳೂರು, ಜ.4– ಐಎಎಸ್ ಅಧಿಕಾರಿ ಡಾ.ರಾಮ್ ಪ್ರಸಾತ್ ಮನೋಹರ್, ಬಿಬಿಎಂಪಿ ವಿಶೇಷ ಆಯುಕ್ತ, ಇವರಿಗೆ ಪ್ರವಾಸೋದ್ಯಮ ಇಲಾಖೆ ನಿರ್ದೇಶಕರಾಗಿ ಹೆಚ್ಚುವರಿ ಜವಾಬ್ದಾರಿ. ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿರುವ ಪಿ.ಮಣಿವಣ್ಣನ್ ಅವರಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿ ಹೆಚ್ಚುವರಿ ಹೊಣೆಗಾರಿಕೆ. ಬೆಳಗಾವಿ ಪ್ರಾದೇಶಿಕ ಆಯುಕ್ತ ಎಂ.ಜಿ.ಹಿರೇಮಠ್ ಇವರಿಗೆ ಕೆಆರ್‌ಐಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ಜವಾಬ್ದಾರಿ ನೀಡಲಾಗಿದೆ.

ಮೈಸೂರು ಸೇರಿದಂತೆ ಹಲವೆಡೆ 31 ವಿದ್ಯುತ್ ಕಳವು ಪ್ರಕರಣ ಪತ್ತೆ

ಮೈಸೂರು, ಜ.4 (ಜಿಎ)– ಚೆಸ್ಕಾಂ ಜಾಗೃತದಳ ದಾಳಿ ನಡೆಸಿ, ಮೈಸೂರಿನ ಎನ್.ಆರ್.ಮೊಹಲ್ಲಾದ ವ್ಯಾಪ್ತಿಯಲ್ಲಿ 22, ಹನೂರು ವ್ಯಾಪ್ತಿಯಲ್ಲಿ 4 ಹಾಗೂ ಹೆಚ್.ಎನ್.ಪುರ ವ್ಯಾಪ್ತಿಯಲ್ಲಿ 5 ವಿದ್ಯುತ್ ಕಳವು ಪ್ರಕರಣಗಳನ್ನು ಪತ್ತೆ ಮಾಡಿ ಕೇಸ್ ದಾಖಲಿಸಿದ್ದಾರೆ.

ಚೆಸ್ಕಾಂ ಜಾಗೃತದಳದ ಪೊಲೀಸ್ ಅಧೀಕ್ಷಕಿ ರಶ್ಮಿ ಪರಡ್ಡಿ ಆದೇಶದ ಮೇರೆಗೆ, ಡಿವೈಎಸ್ಪಿ ಧರ್ಮೇಂದ್ರ ಮತ್ತು ಇಇ ತಬ್ಬಸ್ಸುಮ್ ಅವರ ಮಾರ್ಗದರ್ಶನದಲ್ಲಿ ಮೈಸೂರು ವಿಜಿಲೆನ್ಸ್ ತಂಡವು ಮಂಡ್ಯ, ಚಾಮರಾಜನಗರ, ಮಡಿಕೇರಿ ವಿಜಿಲೆನ್ಸ್ ತಂಡಗಳೊಂದಿಗೆ ಮೈಸೂರಿನ ಭಾರತ್‌ನಗರದಲ್ಲಿ ಏಕಕಾಲಕ್ಕೆ ದಾಳಿ ಮಾಡಿ ಒಟ್ಟು 22 ವಿದ್ಯುತ್ ಕಳವು ಪ್ರಕರಣಗಳನ್ನು ಪತ್ತೆ ಮಾಡಿ ಕ್ರಿಮಿನಲ್ ಕೇಸ್ ದಾಖಲು ಮಾಡಿದ್ದಾರೆ.

ಚಾಮರಾಜನಗರ ಜಾಗೃತಿ ತಂಡದಿಂದ ಹನೂರು ವ್ಯಾಪ್ತಿಯಲ್ಲಿ 4 ಪ್ರಕರಣ, ಹಾಸನ ದಳದಿಂದ ಹೆಚ್.ಎನ್.ಪುರ ವ್ಯಾಪ್ತಿಯಲ್ಲಿ 5 ಪ್ರಕರಣಗಳನ್ನು ಪತ್ತೆ ಮಾಡಿ ಕ್ರಿಮಿನಲ್ ಕೇಸ್ ದಾಖಲಿಸಿದ್ದಾರೆ. ಚೆಸ್ಕಾಂ ಜಾಗೃತದಳ ಠಾಣೆ ನಿರೀಕ್ಷಕ ವಿನಯ್ ರಾಘವೇಂದ್ರ ಮಹದೇವಸ್ವಾಮಿ, ಅನೀಶ್ ಪಾಟಕ್ ತಿಲಕ್, ರಹೀಮ್, ಲತಾ, ಸೈಯ್ಯದ್ ಕೌಸರ್ ಬೇಗಂ, ಎಇ ಮಣಿಕಂಠ ಸ್ವಾಮಿ, ಕೌಸರ್, ಪಿಎಸ್‌ಐಗಳಾದ ಸುಧಾ, ನಿಕಿತಾ, ವೀಣಾ ನಾಯ್ಕ್ ಸುಧಾ, ಸಿಬ್ಬಂದಿಗಳಾದ ಸಿ.ಹೆಚ್.ಸಿ ಶೇಷಾದ್ರಿ, ಪರಮೇಶ್ ರಮೇಶ್, ರೇವಣ್ಣ, ಮಲ್ಲಿಕ, ಸಿದ್ದರಾಜು, ಉದಯ ಕುಮಾರ, ರವಿ, ಅಜಯ್‌ಗೌಡ, ಶ್ರೀಧರ್ ದಾಳಿಯಲ್ಲಿದ್ದರು.



ನಕ್ಕರೆ ಅದೇ ಸ್ವರ್ಗ

ಪತ್ನಿ : ಅಕ್ಕಿ ತೆಗೆದುಕೊಂಡು ಬನ್ನಿ ಅಂದ್ರೆ, ಅಕ್ಕಿ ಹಿಟ್ಟು ತಂದಿದ್ದೀರಲ್ಲಾ, ಏನು ಹೇಳಲಿ ನಿಮ್ಮ ಬುದ್ಧಿಗೆ?

ಪತಿ : ಅಕ್ಕಿ ಬೀಸ್ಕೊಂಡು ಬನ್ನಿ ಅಂತಾ ಮತ್ತೆ ನನ್ನನ್ನ ಕಳಿಸ್ತೀಯ ತಾನೆ. ಅದಕ್ಕೇ ಅಕ್ಕಿ ಹಿಟ್ಟು ತಂದುಬಿಟ್ಟೆ!

ಮೈಸೂರು ಮಿತ್ರ

ಗುರುವಾರ, 5 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮನುಷ್ಯನ ಇಬ್ಬರು ಶ್ರೇಷ್ಠ ವೈದ್ಯರು ಮಿತ ಆಹಾರ ಹಾಗೂ ದುಡಿಮೆ –ರೂಸೋ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಡೆಯೋವರೆಗೆ ನಾಣ್ಯ

ನಿಮ್ಮ ಪತ್ರಗಳು

ಅಂಗೈನಲ್ಲಿ ಅಂಕಪಟ್ಟಿ ಯೋಜನೆ ಅದ್ಭುತ

ಮಾನ್ಯರೆ,

ನಮ್ಮ ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳು ಕರ್ನಾಟಕದ ಅಂಕಪಟ್ಟಿಗಳನ್ನು ಆನ್‌ಲೈನ್‌ನಲ್ಲಿ ದೊರೆಯುವಂತೆ ಮಾಡಿ ಅಗ್ರಸ್ಥಾನದಲ್ಲಿದೆ. ಈ ಯೋಜನೆಯು ಅದ್ಭುತವಾಗಿದೆ. ಈ ಯೋಜನೆಯಿಂದ ವಿದ್ಯಾರ್ಥಿಗಳು ನಿಟ್ಟುಸಿರು ಬಿಡುವಂತಾಗಿದೆ. ವಿದ್ಯಾರ್ಥಿಗಳ ಅಂಕಪಟ್ಟಿ ಪಾರದರ್ಶಕದ ಜೊತೆಗೆ ಮುಂದಿನ ವಿದ್ಯಾಭ್ಯಾಸಕ್ಕೆ ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ಅಂಕಪಟ್ಟಿಗಾಗಿ ಕಾಲೇಜುಗಳಿಗೆ ಅಲೆಯುವುದು ತಪ್ಪಿದಂತಾಗಿದೆ. ಶೀಘ್ರವಾಗಿ ಉದ್ಯೋಗವನ್ನು ಪಡೆಯುವುದಕ್ಕೂ ಅನುಕೂಲವಾಗಲಿದೆ. ನಕಲಿ ಅಂಕಪಟ್ಟಿಗಳಿಗೆ ತಡೆ ಹಿಡಿದಂತಾಗಿದೆ. ಎಲ್ಲೆಡೆ ಜವಾಬ್ದಾರಿತವಾದ ಹುದ್ದೆಗಳ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗೆ ಸ್ಥಾನ ದೊರಕಲು ಅನುಕೂಲವಾಗಿದೆ. ಇದರಿಂದ ದೇಶದ ಉನ್ನತಿಗೆ ಸಹಕಾರಿಯಾಗಿದೆ. ಈ ಯೋಜನೆಯನ್ನು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೂ ವಿಸ್ತರಿಸಿ. ಇದರಿಂದ ಇಲ್ಲಿಯೂ ನಕಲಿ ಅಂಕಪಟ್ಟಿ ಹಾವಳಿ ತಡೆದಂತಾಗುತ್ತದೆ. ಯಾವುದೇ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜು ಸೇರಲು ಬಯಸುವ ಪ್ರತಿಭಾವಂತ ವಿದ್ಯಾರ್ಥಿಗೆ ನ್ಯಾಯ ದೊರಕಿದಂತಾಗುತ್ತದೆ. ಇಲ್ಲಿ ನಡೆಯುವ ಅನೇಕ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದಂತಾಗುತ್ತದೆ.

–ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯತ್ರಿ, ಮೈಸೂರು.

ಕುಮಾರಸ್ವಾಮಿಗಳು ಹೇಳುವುದರಲ್ಲಿ ಸತ್ಯಾಂಶವಿದೆಯೇ ಅಥವಾ ಊಹೆಯೇ?


ಮಾನ್ಯರೆ,

ಜನವರಿ 2 ರಂದು ಮೈಸೂರಿನಲ್ಲಿ ಜೆಡಿಎಸ್‌ನಿಂದ ಕೃಷ್ಣರಾಜ ಕ್ಷೇತ್ರದ ವಿಧಾನಸಭಾ ಚುನಾವಣೆಗೆ ನಿಯೋಜಿತ ಅಭ್ಯರ್ಥಿಯಾದ ಕೆ.ವಿ.ಮಲ್ಲೇಶ್ ಅವರು ಆಯೋಜಿಸಿದ್ದ "ಶರಣರೊಂದಿಗೆ ಕುಮಾರಣ್ಣ" ಕಾರ್ಯಕ್ರಮದಲ್ಲಿ ವೀರಶೈವ ಮುಖಂಡರನ್ನುದ್ದೇಶಿಸಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಮಾತನಾಡುತ್ತಾ, ಮಾನ್ಯ ಯಡಿಯೂರಪ್ಪನವರನ್ನು ಬಿಜೆಪಿ ಕಡೆಗಾಣಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿ ಯಾವ ಸ್ವಂತ ತೀರ್ಮಾನ ತೆಗೆದುಕೊಳ್ಳುವ ಹಾಗಿಲ್ಲ. ಕೇವಲ ಹೆಸರಿಗೆ ಮುಖ್ಯಮಂತ್ರಿಯನ್ನಾಗಿಟ್ಟುಕೊಂಡಿದ್ದಾರೆ ಮತ್ತು ಬಿಜೆಪಿ ಬೆಂಬಲಿಸುವ ವೀರಶೈವ ನಾಯಕರನ್ನೂ ಕೂಡ ತೀರಾ ಅಸಡ್ಡೆಯಿಂದ ಕಾಣುತ್ತಿದ್ದಾರೆ. ಹಾಗಾಗಿ ವೀರಶೈವ ಲಿಂಗಾಯತ ಸಮಾಜವು ಎಚ್ಚೆತ್ತುಕೊಂಡು ಈಗ ಬಿಜೆಪಿಯಿಂದ ವಿಮುಖವಾಗುತ್ತಿದೆ ಎಂದು ಹೇಳಿದ್ದಾರೆ ಎಂಬುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಈ ವಿಚಾರದ ಬಗ್ಗೆ ಯಡಿಯೂರಪ್ಪನವರು ಮತ್ತು ಬೊಮ್ಮಾಯಿಯವರ ಪ್ರತಿಕ್ರಿಯೆ ಏನು? ಮಾನ್ಯ ಕುಮಾರಸ್ವಾಮಿಗಳು ಹೇಳುವುದರಲ್ಲಿ ಸತ್ಯಾಂಶವಿದೆಯೇ! ಅಥವಾ ಅದು ಕೇವಲ ಊಹೆಯೇ! ಎಂಬುದನ್ನು ಸ್ವತಃ ಈ ಇಬ್ಬರೂ ನಾಯಕರೇ ತಮ್ಮ ಅಭಿಪ್ರಾಯ ಅಥವಾ ಪ್ರತಿಕ್ರಿಯೆಯನ್ನು ನೀಡಬೇಕು. ಒಂದು ವೇಳೆ ಅವರು ಪ್ರತಿಕ್ರಿಯೆ ನೀಡದಿದ್ದಲ್ಲಿ ಕುಮಾರಸ್ವಾಮಿಯವರು ಹೇಳಿದ್ದು ನಿಜವೆಂದೇ ಆ ಸಮುದಾಯ ಪರಿಗಣಿಸಬೇಕಾಗಬಹುದು. ಹಾಗಾಗಿ ಮಾನ್ಯ ಯಡಿಯೂರಪ್ಪನವರಾಗಲೀ ಅಥವಾ ಬಸವರಾಜ ಬೊಮ್ಮಾಯಿಯವರಾಗಲೀ ಈ ಅನುಮಾನಕ್ಕೆ ಉತ್ತರಿಸಬೇಕು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಕಾಲ್ಚೆಂಡಿನ ಮಾಂತ್ರಿಕ ಪೀಲೆ ಕಣ್ಮರೆ

ಮಾನ್ಯರೆ,



ಫುಟ್‌ಬಾಲ್ ಜಗತ್ತಿನ ಅನಭಿಷಿಕ್ತ ದೊರೆ ಪೀಲೆ ಮತ್ತೇ ಎಂದೂ ಬಾರದೂರಿಗೆ ಪ್ರಯಾಣ ಬೆಳೆಸಿದ್ದಾರೆ. ಫುಟ್‌ಬಾಲ್ ಅಂದರೆ ಪೀಲೆ, ಪೀಲೆ ಅಂದರೆ ಫುಟ್‌ಬಾಲ್ ಎಂದು ಪ್ರತೀತಿ ಗಳಿಸಿದ್ದ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಪೀಲೆ ಅವರ ನಿಧನಕ್ಕೆ ಇಡೀ ಜಗತ್ತು ಕಂಬನಿ ಮಿಡಿದಿದೆ. ಮೂರು ಬಾರಿ ವಿಶ್ವಕಪ್ ಫುಟ್‌ಬಾಲ್ ಪ್ರಶಸ್ತಿ ಜಯಿಸಿದ ಮೊದಲ ಆಟಗಾರ ಪೀಲೆ, ವಿಶ್ವಕಪ್‌ನಲ್ಲಿ ಗೋಲು ಗಳಿಸಿದ ಅತ್ಯಂತ ಕಿರಿಯ ಆಟಗಾರ ಪೀಲೆ, ವಿಶ್ವಕಪ್ ಜಯಿಸಿದ ತಂಡದಲ್ಲಿದ್ದ ಅತಿ ಕಿರಿಯ ಮತ್ತು ವಿಶ್ವಕಪ್ ಪಂದ್ಯಗಳಲ್ಲಿ ಹ್ಯಾಟ್ರಿಕ್ ಗೋಲು ಗಳಿಸಿದ ಅತಿ ಕಿರಿಯ ಆಟಗಾರ ಪೀಲೆ. ಫಾರ್ವರ್ಡ್, ಅಟ್ಯಾಕಿಂಗ್, ಮಿಡ್ ಫೀಲ್ಡರ್ ಆಟಗಾರನಾಗಿ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಒಟ್ಟು 92 ಪಂದ್ಯಗಳಲ್ಲಿ 77 ಗೋಲು ಗಳಿಸಿ, ವಿಶ್ವಕಪ್‌ನಲ್ಲಿ 14 ಪಂದ್ಯಗಳಿಂದ 12 ಗೋಲುಗಳನ್ನು ಗಳಿಸಿ, ಅವರ ಫುಟ್‌ಬಾಲ್ ವೃತ್ತಿ ಜೀವನದಲ್ಲಿ 1363 ಪಂದ್ಯಗಳಿಂದ ಗಳಿಸಿದ ಒಟ್ಟು ಗೋಲುಗಳು 1281. ಇದು ಸಾಮಾನ್ಯವಾದ ಸಾಧನೆಯೇನಲ್ಲ. ಪೀಲೆ ಅವರು ಬ್ರೆಜಿಲ್ ದೇಶದ ಕ್ರೀಡಾ ಸಚಿವರಾಗಿಯೂ ಸೇವೆ ಸಲ್ಲಿಸಿರುವುದು ತುಂಬಾ ಶ್ಲಾಘನೀಯ. ಜಗತ್ತು ಎಂದು ಮರೆಯದ ಫುಟ್‌ಬಾಲ್ ಕಣ್ಮಣಿ ಪೀಲೆ.

–ಬೆಸಗರಹಳ್ಳಿ ರವಿಪ್ರಸಾದ್, ಕೆ.ಸಿ.ನಗರ, ಮೈಸೂರು.

ಮೈವಿವಿ ಆವರಣದಲ್ಲಿ ಕುಡಿಯುವ ನೀರಿಗೆ ಸಮಸ್ಯೆ

ಮಾನ್ಯರೆ,

ಮೈ.ವಿ.ವಿ.ಯಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆಯುತ್ತಿರುವ ಸಾವಿರಾರು ವಿದ್ಯಾರ್ಥಿಗಳು ಮಾನಸಗಂಗೋತ್ರಿ ಆವರಣದಲ್ಲಿ ತಮ್ಮ ಕಲಿಕಾ ಕೇಂದ್ರಗಳನ್ನು ಹುಡುಕುತ್ತಾ ಅಲೆದಾಡುವುದು ಸಾಮಾನ್ಯ. 739 ಎಕರೆ ವಿಸ್ತೀರ್ಣವುಳ್ಳ ಮಾನಸಗಂಗೋತ್ರಿ ಆವರಣದಲ್ಲಿ 85 ಸ್ನಾತಕೋತ್ತರ ವಿಭಾಗಗಳಿವೆ ಹಾಗೂ 150ಕ್ಕೂ ಹೆಚ್ಚು ಸ್ನಾತಕೋತ್ತರ ವಿಷಯಗಳನ್ನು ಒಳಗೊಂಡಿದೆ. ಪದವಿ, ಸ್ನಾತಕ ಪದವಿ, ಎಂ.ಫಿಲ್ ಓದುತ್ತಿರುವ ಸಾವಿರಾರು ವಿದ್ಯಾರ್ಥಿಗಳಿದ್ದಾರೆ. ಸಂಶೋಧನಾ ಕೇಂದ್ರಗಳು, ಹೊರಗುತ್ತಿಗೆ, ಸಂಶೋಧನಾ ಕೇಂದ್ರಗಳು, ತರಬೇತಿ ಕೇಂದ್ರಗಳಿವೆ ಹಾಗೂ 11 ವಿಭಾಗಗಳು ರಾಷ್ಟ್ರೀಯ ಸಂಶೋಧನಾ ಸೌಲಭ್ಯವನ್ನು ಒಳಗೊಂಡಿದೆ. DST-FIST, UGC-SAP ಅನುದಾನಿತ ಘಟಕಗಳು, ನಾನಾ ದೇಶಗಳಿಂದ ಬಹು ಸಂಖ್ಯೆಯ ವಿದೇಶಿ ವಿದ್ಯಾರ್ಥಿಗಳು ವಿ.ವಿಯಲ್ಲಿ ವಿವಿಧ ವಿಷಯಗಳನ್ನು ಕಲಿಯುತ್ತಿದ್ದು ಮಾನಸಗಂಗೋತ್ರಿಯು ಅಂತರರಾಷ್ಟ್ರೀಯ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಹೀಗಿರುವಾಗ ಆವರಣದಲ್ಲಿ ದಣಿದ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗಿದೆ ಎಂದರೆ ನಂಬಲಸಾಧ್ಯ. ವರ್ಷಗಳ ಹಿಂದೆಯಷ್ಟೆ ಕ್ಯಾಂಪಸ್ಸಿನ ಕೆಲವು ಕಡೆ ನಿರ್ಮಾಣಗೊಂಡಿರುವ ನಾಲ್ಕೈದು ಶುದ್ಧ ನೀರಿನ ಘಟಕಗಳು ಇಲ್ಲಿಯವರೆಗೂ ಹನಿ ನೀರನ್ನು ಕೂಡ ಕಂಡಿಲ್ಲದಿರುವುದು ಶೋಚನೀಯ. ಇತ್ತ ವಿದ್ಯಾರ್ಥಿನಿಲಯಗಳಲ್ಲೂ ಕೂಡ ಕುಡಿಯುವ ನೀರಿನ ಪೂರೈಕೆಯಾಗುತ್ತಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ನೀರಿನ ಸಮಸ್ಯೆಗೆ ನಾಂದಿ ಹಾಡಬೇಕಿದೆ.

–ಪ್ರದೀಪ್ ಸೋಗಳ್ಳಿ, ಮಾನಸಗಂಗೋತ್ರಿ, ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಸ್ತ್ರೀ ಸ್ವಾತಂತ್ರ್ಯ ವಿರೋಧಿ ಕೃತ್ಯಗಳಿಗೆ ಕ್ರೌರ್ಯದ ಲೇಪನ

ಹೆಣ್ಣು ಪ್ರಶ್ನೆ-ಪ್ರತಿಭಟನೆಯ ಹಾದಿಯಲ್ಲಿ ಕಾಲಿಟ್ಟ ತಕ್ಷಣ ಪುರುಷ ಪ್ರಜ್ಞೆ ಜಾಗೃತವಾಗಿ ಆಕೆಯ ಬದುಕನ್ನು ಹತ್ತಿಕ್ಕಲು ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಮಟ್ಟಕ್ಕೆ ಹೋಗುತ್ತಾರೆ ಎಂದರೆ ಈ ಪರಿಸ್ಥಿತಿಗೆ ಕಾರಣವಾದ ಎಲ್ಲ ವ್ಯವಸ್ಥೆಗಳಲ್ಲೂ ಆಮೂಲಾಗ್ರ ಬದಲಾವಣೆಗಳನ್ನು ತರುವುದೇ ಅಲ್ಲದೆ ಈ ಕೃತ್ಯಗಳನ್ನೆಸಗುವವರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ನೀಡಬೇಕಾಗಿರುವುದು ಕೂಡಾ ಅಷ್ಟೇ ಮುಖ್ಯ.



ಬೆಂಗಳೂರಿನ ಖಾಸಗಿ ವಿಶ್ವವಿದ್ಯಾಲಯವೊಂದರಲ್ಲಿ ಮೂರು ದಿನಗಳ ಹಿಂದೆ ಯುವಕನೊಬ್ಬ ತನ್ನ ಪ್ರೀತಿಯನ್ನು ನಿರಾಕರಿಸಿದ ಹೆಣ್ಣು ಮಗಳನ್ನು ಕ್ಯಾಂಪಸ್‌ನಲ್ಲೇ ಹಾಡುಹಗಲಲ್ಲೇ ಇರಿದು ಕೊಲೆ ಮಾಡಿದ ಸುದ್ದಿಯನ್ನು ಅರಗಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಈ ಘಟನೆ ನಡೆದಿರುವುದು ನೂರಾರು ವಿದ್ಯಾರ್ಥಿಗಳು ಇದ್ದಂಥ ಶಿಕ್ಷಣ ಸಂಸ್ಥೆಯೊಂದರಲ್ಲಿ! ಕೊಲೆಗಡುಕನ ಕೈಯ್ಯಲ್ಲಿ ಇದ್ದ ಆಯುಧಕ್ಕೆ ಹೆದರಿ ಇವರಲ್ಲಿ ಯಾರೂ ಆಕೆಯ ರಕ್ಷಣೆಗೆ ಹೋಗದಿದ್ದುದು, ಮಕ್ಕಳ ಭವಿಷ್ಯವನ್ನು ಕಟ್ಟಿ ಕೊಡಬೇಕಾದ ವಿದ್ಯಾ ಸಂಸ್ಥೆ ಅವರಿಗೆ ಸುರಕ್ಷಿತವಾದ ಕಲಿಕಾ ಪರಿಸರವನ್ನು ಸೃಷ್ಟಿಸುವಲ್ಲಿ ಸೋತಿರುವುದು. ಎಲ್ಲಕಿಂತ ಮಿಗಿಲಾಗಿ ಮಾನವ ಸಂಬಂಧಗಳು ತಾಳುತ್ತಿರುವ ವಿಕೃತ ಸ್ವರೂಪ ನಮ್ಮ ಸಮಾಜ ತಲುಪುತ್ತಿರುವ ಅಸಹನೀಯ ಸ್ಥಿತಿಗೆ ಒಂದು ನಿದರ್ಶನವಷ್ಟೇ.

ತಮ್ಮೊಡನೆ ಸಂಬಂಧವನ್ನು ಬೆಳೆಸಲು ಅಸಮ್ಮತಿಯನ್ನು ಸೂಚಿಸಿದ ಹೆಣ್ಣು ಮಕ್ಕಳ ಮೇಲೆ ಸಾರ್ವಜನಿಕ ಸ್ಥಳಗಳಲ್ಲಿ, ಇಲ್ಲವೇ ವಾಹನಗಳಲ್ಲಿ ಅಥವಾ ಮನೆಗಳಲ್ಲಿ ದೈಹಿಕ, ಲೈಂಗಿಕ ದೌರ್ಜನ್ಯವನ್ನು ನಡೆಸಿ ಅವರನ್ನು ಹತ್ಯೆ ಮಾಡಲು ಅಥವಾ ಅವರನ್ನು ವಿರೂಪಗೊಳಿಸಿ, ವಿಲಕ್ಷಣ ತೃಪ್ತಿಯನ್ನು ಹೊಂದಲು ಪ್ರಯತ್ನಪಡುವುದು, ತಾವು ಸಿಲುಕಿ ಹಾಕಿಕೊಳ್ಳುವ ಪರಿಸ್ಥಿತಿ ಸೃಷ್ಟಿಯಾದಾಗ ಪುರುಷರು ಆತ್ಮಹತ್ಯೆಗೆ ಪ್ರಯತ್ನಿಸುವುದು–ಇಂಥ ಘಟನೆಗಳು ಪದೇ–ಪದೆ ನಡೆಯುತ್ತಿವೆ.

ಬೆಂಗಳೂರಿನ ಘಟನೆ ನಡೆದ ಒಂದು ವಾರದ ಹಿಂದೆಯಷ್ಟೇ ತನ್ನನ್ನು ವಿವಾಹವಾಗಲು ನಿರಾಕರಿಸಿದ ಸ್ನೇಹಿತೆಯ ಮೇಲೆ ಸೇಡು ತೀರಿಸಿಕೊಳ್ಳಲು ಪುರುಷನೊಬ್ಬ ಮಿಕ್ಸರ್‌ನಲ್ಲಿ ಸ್ಫೋಟಕ ವಸ್ತುವನ್ನು ಇಟ್ಟು ಅದನ್ನು ಕೊರಿಯರ್ ಮೂಲಕ ಆಕೆಯ ಮನೆಗೆ ಕಳುಹಿಸಿದ. ಅದನ್ನು ಆಕೆ ಸ್ವೀಕರಿಸಲು ಒಪ್ಪದಿದ್ದಾಗ ಕೊರಿಯರ್ ಕಚೇರಿಗೆ ವಾಪಸ್ಸಾದ ಆ ವಸ್ತು, ಕಚೇರಿಯಲ್ಲಿ ಸ್ಫೋಟಗೊಂಡು ಅಲ್ಲಿ ಇದ್ದ ಉದ್ಯೋಗಿಯೊಬ್ಬರಿಗೆ ಗಾಯಗಳಾದವು. ದೇಶದ ನಾನಾ ಭಾಗಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಆಸಿಡ್ ದಾಳಿ ಅಥವಾ ದೈಹಿಕ ಹಲ್ಲೆಗಳು, ತಮನ್ನು ಧಿಕ್ಕರಿಸಿದ ಹೆಣ್ಣು ಮಕ್ಕಳ ಭವಿಷ್ಯ ನಾಶವಾಗಬೇಕೆಂಬ ಮನುಷ್ಯ ಸ್ವರೂಪಿ ದಾನವರ ಧೋರಣೆಗಳು. ಅದೆಷ್ಟು ಹೆಣ್ಣು ಮಕ್ಕಳ ಬದುಕನ್ನು ಮುಗಿಸಿಬಿಟ್ಟಿವೆಯೋ ಅದಕ್ಕೆ ಲೆಕ್ಕ ದೊರೆಯಲಾರದು.

ಹೆಣ್ಣಿನ ಆಸೆ ಹಾಗೂ ಆಸಕ್ತಿಗಳಿಗೆ ಬೆಲೆ ಕೊಡದೆ ತಾನು ಬಯಸಿದರೆ ಆಕೆ ತನ್ನನ್ನು ವಿವಾಹವಾಗಲು ಒಪ್ಪಿ ಬಿಡಬೇಕು ಎನ್ನುವ ಪುರುಷಪ್ರಧಾನ ಧೋರಣೆಯಿಂದ ಇಂದಿಗೂ ಅನೇಕ ಪುರುಷರು ಹೊರಬಂದಿಲ್ಲ. ಆಕೆಯ ತಿರಸ್ಕಾರ ಪುರುಷ 'ಅಹಂ'ಗೆ ಸವಾಲನ್ನು ಎಸೆಯುತ್ತದೆ ಎಂದು ಭಾವಿಸುವ ಅನೇಕರು ಪ್ರತೀಕಾರಕ್ಕಾಗಿ ಹಿಂಸಾ ಮಾರ್ಗವನ್ನು ಅನುಸರಿಸಿ ಆಕೆಯ ಮೇಲೆ ಆಕ್ರಮಣ ಮಾಡಲು ಮುಂದಾಗುವುದು, ಕೊಲೆಯಂಥ ಪಾಶವೀ ಕೃತ್ಯಕ್ಕೆ ಸಜ್ಜಾಗುವುದು–ಇವುಗಳನ್ನು ನೋಡಿದಾಗ ನಾಗರಿಕ ಸಮಾಜ ಎಂದು ಗುರುತಿಸಿಕೊಳ್ಳಲು ನಮಗೆ ಹಕ್ಕಿದೆಯೇ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ. ಗುಜರಾತಿನಲ್ಲಿ ಕೆಲ ತಿಂಗಳ ಹಿಂದೆ ನಡೆದ ಈ ಕೊಲೆಯ ಕಥೆಯನ್ನು ಕೇಳಿದರೆ ಈ ಮಟ್ಟಕ್ಕೆ ಮನುಷ್ಯರು ಇಳಿಯುತ್ತಾರೆಯೇ ಎಂದು ಊಹಿಸುವುದೂ ಕಷ್ಟವೆನಿಸುತ್ತದೆ.

ಸೂರತ್ ನಗರದಲ್ಲಿ, ಸಂಬಂಧಿ ಮತ್ತು ಸಹಪಾಠಿಯೂ ಆಗಿದ್ದ ಯುವತಿ, ತನ್ನೊಡನೆ ವಿವಾಹ ಸಂಬಂಧವನ್ನು ಬೆಳೆಸಲು ನಿರಾಕರಿಸಿದಾಗಿನಿಂದ ಆಕೆಯನ್ನು ಎಲ್ಲೆಡೆ ಹಿಂಬಾಲಿಸಿ ಬೆದರಿಕೆ ಹಾಕುತ್ತಿದ್ದ ಪುರುಷನ ಬಗ್ಗೆ ತನ್ನ ಕುಟುಂಬಸ್ಥರ ಗಮನವನ್ನು ಆ ಹೆಣ್ಣು ಮಗಳು ಸೆಳೆದಿದ್ದಳಂತೆ. ಆತನನ್ನು ಹೆದರಿಸಿದರೆ ತಮ್ಮ ಬಂಧು ವಲಯದಲ್ಲಿ ಮುಜುಗರ ಉಂಟಾಗಬಹುದು ಎಂಬ ಕಾರಣಕ್ಕಾಗಿ ಅವರು ಗಂಭೀರ ಕ್ರಮವನ್ನು ಆತನ ಮೇಲೆ ತೆಗೆದುಕೊಳ್ಳದಿದ್ದುದೇ, ಮಗಳು ತಮ್ಮ ಎದುರಿನಲ್ಲೇ ಆತ ನಡೆಸಿದ ಹತ್ಯಾಕಾಂಡಕ್ಕೆ ಬಲಿಯಾದುದನ್ನು ನೋಡುವಂಥ ಸ್ಥಿತಿ ಬಂತು. ಆತ ನೇರವಾಗಿ ಆಕೆಯ ಮನೆಗೇ ಹೋಗಿ, ತಪ್ಪಿಸಿಕೊಳ್ಳಲು ಆಕೆ ಎಷ್ಟೇ ಯತ್ನಿಸಿದರೂ ಬಿಡದೆ ಕತ್ತನ್ನು ಬ್ಲೇಡಿನಿಂದ ಕೊಯ್ದದ್ದು, ಆಕೆಯ ರಕ್ಷಣೆಗೆ ಬಂದ ಇಬ್ಬರು ಬಂಧುಗಳಿಗೂ ಹರಿತವಾದ ಆಯುಧದಿಂದ ಇರಿದು ಗಾಯ ಮಾಡಿದ್ದು, ತಮ್ಮ ಎದುರಿನಲ್ಲೇ ಇಂಥ ಹೀನ ಕೃತ್ಯ ನಡೆಯುತ್ತಿದ್ದಾಗಲೂ ಆಕೆಯ ನೆರೆಹೊರೆಯ ಅನೇಕರು ಆ ಕೊಲೆಗಡುಕನ ಬಳಿ ಇದ್ದ ಆಯುಧಗಳಿಗೆ ಹೆದರಿ ಆಕೆಯ ಸಾವಿಗೆ ಮೌನ ಸಾಕ್ಷಿಗಳಾಗಿ ನಿಂತದ್ದು–ಇವೆಲ್ಲ ಸಮಕಾಲೀನ ಸಮಾಜ ಎತ್ತ ಸಾಗುತ್ತಿದೆ ಎಂಬ ಗಂಭೀರ ಪ್ರಶ್ನೆಯನ್ನು ಎತ್ತುತ್ತಿದೆ.

ತನ್ನ ಜೊತೆಯಲ್ಲಿ ಸಹಬಾಳ್ವೆ ನಡೆಸುತ್ತಿದ್ದ ಗೆಳತಿಯ ದೇಹವನ್ನು ತುಂಡು ತುಂಡಾಗಿ ಕತ್ತರಿಸಿ, ಆ ದೇಹದ ಭಾಗಗಳನ್ನು ದೆಹಲಿಯ ಅರಣ್ಯ ಪ್ರದೇಶದಲ್ಲಿ ಆಕೆಯ ಜೊತೆಗಾರ ಚೆಲ್ಲಿದ ಪ್ರಕರಣ ಬೆಳಕಿಗೆ ಬಂದಾಗಿನಿಂದ ದೇಶದಾದ್ಯಂತ ಹೀಗೆ ನಡೆದು ಹೋಗಿರುವ ಅನೇಕ ಘಟನೆಗಳ ನೆನಪುಗಳು ಮರುಜೀವ ಪಡೆಯುತ್ತಿವೆ. ಶ್ರದ್ಧಾ ವಾಲ್ಕರ್ ಹಾಗೂ ಆಕೆಯ ಸಂಗಾತಿ ಭಿನ್ನ ಧಾರ್ಮಿಕ ಹಿನ್ನೆಲೆಗಳಿಂದ ಬಂದವರಾದ್ದರಿಂದ ಈ ಪ್ರಕರಣದೊಡನೆ ಮತೀಯ ಆಯಾಮಗಳೂ ತಳುಕು ಹಾಕಿಕೊಂಡಿದ್ದು, ಈ ರಾಕ್ಷಸಿ ಕೃತ್ಯದ ಹಿಂದಿರುವ ಕಾರಣಗಳನ್ನು ಹೊರತೆಗೆದು ಇಂಥ ಘಟನೆಗಳು ಮರುಕಳಿಸದ ಹಾಗೆ ಸಮಾಜಕ್ಕೆ ಎಚ್ಚರವನ್ನು ಕೊಡಲು ಏನು ಮಾಡಬೇಕು ಎಂದು ಯೋಚಿಸುವ ಬದಲು ಇಡೀ ಪ್ರಕರಣವನ್ನು ದಾರಿ ತಪ್ಪಿಸುವ ಪ್ರಯತ್ನಗಳು ನಡೆಯುತ್ತಿರುವುದು ನಮ್ಮ ಕಾಲಘಟ್ಟದ ಆತ್ಮಸಾಕ್ಷಿಯನ್ನು ಒತ್ತೆ ಇಟ್ಟಂತಾಗಿದೆ.

ಈ ಎಲ್ಲ ಪ್ರಕರಣಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಾ ಹೋದ ಹಾಗೆಲ್ಲ ನಮ್ಮ ಮುಂದೆ ಎದ್ದು ನಿಲ್ಲುವ ವಿಚಾರವೆಂದರೆ ಹಿಂಸಾ ಪ್ರವೃತ್ತಿ ಹೇಗೆ ನಮ್ಮ ಬದುಕಿನ ಒಂದು ಭಾಗವಾಗುತ್ತಿದೆ ಎನ್ನುವುದು. ಹೆಣ್ಣನ್ನು ಭೋಗವಸ್ತುವಾಗಿ ನೋಡುವುದು, ತಮ್ಮ ಅಗ್ಗದ ಆಸೆಗಳಿಗೆ ಬಲಿಯಾಗಲು ಒಪ್ಪದಿದ್ದಾಗ ಆಕೆಯ ಮೇಲೆ ಆಕ್ರಮಣ ಮಾಡುವುದು ಅಥವಾ ಅವಳ ಜೀವ ಹರಣ ಮಾಡುವುದು, ಕೆಲ ದಿನಗಳು ಎಲ್ಲೆಡೆ ಅದೇ ವಿಷಯ ಚರ್ಚೆಯಾಗುವುದು, ಮತ್ತೆ ನೇಪಥ್ಯಕ್ಕೆ ಸರಿಯುವುದು, ಮತ್ತೊಮ್ಮೆ ನಮ್ಮನ್ನು ಬೆಚ್ಚಿ ಬೀಳಿಸುವಂಥ ಘಟನೆ ನಡೆದಾಗ ಅದರತ್ತ ಗಮನ ಹರಿಸುವುದು– ಇವೆಲ್ಲ ಸರ್ವೇ ಸಾಮಾನ್ಯವಾಗುತ್ತಿವೆಯೇನೋ ಎಂಬ ಸ್ಥಿತಿಗೆ ಈ ಸಮಾಜ ತಲುಪುತ್ತಿದೆ. ಇಂಥ ಘಟನೆಗಳಿಗೆ ಯಾರು ಹೊಣೆ? ಹಿಂಸೆ ಹೇಗೆ ಹಿಂಸೆಯನ್ನು ಮರು ಸೃಷ್ಟಿಸುತ್ತದೆ ಎನ್ನುವುದಕ್ಕೆ, ತನ್ನ ಮಗಳನ್ನು ನಿರಂತರವಾಗಿ ಹಿಂಸಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ತಂದೆಯಾದವನು ತುಂಡು ತುಂಡು ಮಾಡಿ ನದಿಗೆ ಎಸೆದಿರುವ ಘಟನೆಯೊಂದು ಮಧ್ಯಪ್ರದೇಶದಿಂದ ವರದಿಯಾಗಿರುವುದೇ ಸಾಕ್ಷಿ.

ಕುಟುಂಬ ವ್ಯವಸ್ಥೆ ಹಾಗೂ ಅನೇಕರ ಮನಸ್ಥಿತಿ ಇನ್ನೂ ಪುರುಷ ಪ್ರಾಧಾನ್ಯತೆಯಿಂದ ಹೊರಗೆ ಬಂದಿಲ್ಲ. ಪುರುಷನಿಗೆ ಹೆಣ್ಣಿನ ಮೇಲೆ ಪರಮಾಧಿಕಾರವನ್ನು ಸ್ಥಾಪಿಸುವ ಹಕ್ಕು ಇದೆ ಎಂಬ ಮೌಢ್ಯಾಚರಣೆಗಳು ಇಂದಿಗೂ ಸ್ತ್ರೀ–ಪುರುಷ ಸಂಬಂಧಗಳನ್ನು ಬಹುಮಟ್ಟಿಗೆ ಆವರಿಸಿವೆ. ಹೆಣ್ಣು ಪುರುಷನ ಅಧೀನದಲ್ಲಿರಬೇಕು, ಆಕೆಗೆ ತನ್ನ ಬದುಕನ್ನು ಕುರಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸ್ವಾತಂತ್ರ್ಯವಿಲ್ಲ, ವಿವಾಹ ಎನ್ನುವುದು ಇಬ್ಬರು ಸಮಾನರ ನಡುವೆ ಏರ್ಪಡುವ ಸಂಬಂಧವಲ್ಲ, ಅದು ಪುರುಷ ಪ್ರಾಬಲ್ಯವನ್ನು ಎತ್ತಿ ಹಿಡಿಯುವ ಒಂದು ವ್ಯವಸ್ಥೆ ಎನ್ನುವ ಭಾವನೆಗಳು ಹೆಣ್ಣು–ಗಂಡು ಮಕ್ಕಳನ್ನು ಬೆಳೆಸುವ ರೀತಿಯಲ್ಲಿ ಹಾಸು ಹೊಕ್ಕಾಗಿರುವುದೇ ಈ ಸಮಾಜದಲ್ಲಿ ಸ್ತ್ರೀ ವಿರೋಧಿ ದೌರ್ಜನ್ಯಕ್ಕೆ ದೊರೆಯುವ ಪ್ರಕಟಿತ ಅಥವಾ ಸೂಚ್ಯ ಸ್ವೀಕೃತಿಗೆ ಮುಖ್ಯ ಕಾರಣಗಳಲ್ಲಿ ಒಂದು. ದುರಂತವೆಂದರೆ ಸ್ವತಃ ತಾವೇ ಆಯ್ಕೆ ಮಾಡಿಕೊಂಡ ಪುರುಷ ಸಂಗಾತಿಗಳೂ ವಿವಾಹ ಸಂಬಂಧದಲ್ಲಿ ಹೆಣ್ಣಿನ ಮೇಲೆ ದೈಹಿಕ ಅಥವಾ ಮಾನಸಿಕ ದೌರ್ಜನ್ಯ ಮಾಡುವುದು, ಆಕೆ ಇಂಥ ಅನಪೇಕ್ಷಿತ ಸಂಬಂಧದಿಂದ ಹೊರಬರುವ ನಿರ್ಧಾರ ತೆಗೆದುಕೊಂಡಾಗ ಆಕೆಯ ಮೇಲೆ ಹಲ್ಲೆ ಮಾಡುವುದು ಅಥವಾ ಕೊಲೆ ಮಾಡುವುದು ಇವೆಲ್ಲಾ ವರ್ಗಾತೀತವಾಗಿ ಕಂಡು ಬರುತ್ತಿರುವ ವಾಸ್ತವಗಳು. ಹೆಣ್ಣು ಪ್ರಶ್ನೆ–ಪ್ರತಿಭಟನೆಯ ಹಾದಿಯಲ್ಲಿ ಕಾಲಿಟ್ಟ ತಕ್ಷಣ ಪುರುಷ ಪ್ರಜ್ಞೆ ಜಾಗೃತವಾಗಿ ಆಕೆಯ ಬದುಕನ್ನು ಹತ್ತಿಕ್ಕಲು ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಮಟ್ಟಕ್ಕೆ ಹೋಗುತ್ತಾರೆ ಎಂದರೆ ಈ ಪರಿಸ್ಥಿತಿಗೆ ಕಾರಣವಾದ ಎಲ್ಲ ವ್ಯವಸ್ಥೆಗಳಲ್ಲೂ ಆಮೂಲಾಗ್ರ ಬದಲಾವಣೆಗಳನ್ನು ತರುವುದೇ ಅಲ್ಲದೆ ಈ ಕೃತ್ಯಗಳನ್ನೆಸಗುವವರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ನೀಡಬೇಕಾಗಿರುವುದು ಕೂಡಾ ಅಷ್ಟೇ ಮುಖ್ಯ.

ಹೆಣ್ಣು ಮಕ್ಕಳಾಗಲೀ, ಗಂಡು ಮಕ್ಕಳಾಗಲೀ ಸ್ನೇಹ ಮತ್ತು ಸಂಬಂಧಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ ಸಂಗಾತಿಯನ್ನು ಆಯ್ಕೆ ಮಾಡುವಾಗ ಎಚ್ಚರಿಕೆ ವಹಿಸಬೇಕಾಗಿರುವುದು ಬಹು ಮುಖ್ಯ. ಅನೇಕ ಕುಟುಂಬಗಳಲ್ಲಿ ಮಕ್ಕಳ, ಅದರಲ್ಲೂ ಹೆಣ್ಣು ಮಕ್ಕಳ ಮೇಲೆ ಅತಿಯಾದ ನಿರ್ಬಂಧಗಳನ್ನು ಹೇರುವುದರಿಂದ ಅವರು ವಯೋಸಹಜ ಸ್ನೇಹಕ್ಕೆ ಆಸೆ ಪಟ್ಟು ಪುರುಷರೊಡನೆ ಸಾಂಗತ್ಯ ಬಯಸುವುದು, ಭ್ರಮಾಲೋಕದ ಪ್ರವೇಶ ಮಾಡಿ ಭವಿಷ್ಯದ ಬಗ್ಗೆ ಕನಸುಗಳನ್ನು ಕಟ್ಟುವುದು, ಸಂಗಾತಿಯಿಂದ ನಿರೀಕ್ಷಿತ ಸ್ಪಂದನಾ ದೊರೆಯದಿದ್ದಾಗ ಅಂತ ಸಂಬಂಧದಿಂದ ಹೊರ ಬರಲು ಯತ್ನಿಸುವುದು–ಇವೆಲ್ಲ ಸಾಮಾನ್ಯವಾಗಿ ನಾವು ನೋಡುವಂಥ ಪ್ರವೃತ್ತಿಗಳೇ. ಆದರೆ ಸ್ನೇಹ ಮತ್ತು ಸ್ವೇಚ್ಛಾಚಾರಕ್ಕೆ ನಡುವೆ ಇರುವ ಅಂತರವನ್ನು ಮನದಟ್ಟು ಮಾಡಿ, ತಮ್ಮ ಸ್ವಂತಿಕೆ–ಸ್ವಾಭಿಮಾನಗಳಿಗೆ ಧಕ್ಕೆಯಾಗುವಂಥ ಸಂದರ್ಭಗಳನ್ನು ಗುರುತಿಸುವ ಸೂಕ್ಷ್ಮತೆಯನ್ನು ಹೆಣ್ಣು ಮಕ್ಕಳಲ್ಲಿ ಬೆಳೆಸುವುದು, ಅವರ ಬದುಕಿನ ಕನಸುಗಳನ್ನು ಮೊಟಕುಗೊಳಿಸದೆ ಜೀವನದ ವಾಸ್ತವಗಳ ಬಗ್ಗೆ ಜಾಗೃತಿ ಮೂಡಿಸುವುದು ಕುಟುಂಬ, ಶಿಕ್ಷಣ, ಗೆಳೆಯರ ಬಳಗಗಳು–ಇವುಗಳೆಲ್ಲದರ ಜವಾಬ್ದಾರಿಯಾಗಬೇಕು.

ಜ.20ರಂದು ಲಿಂಗದೇವರಕೊಪ್ಪಲಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ



ಮೈಸೂರು,ಜ.4(ಎಂಕೆ)–ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಜ.20ರಂದು ಮೈಸೂರಿನ ಇಲವಾಲ ಬಳಿಯ ಲಿಂಗದೇವರಕೊಪ್ಪಲಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆಯಲಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಜೆಡಿಎಸ್‌ನಿಂದ ಹೊರ ಬಂದಿರುವ ಮುಖಂಡರಾದ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ ಹಾಗೂ ಕೆಂಪನಾಯಕ ಕಾಂಗ್ರೆಸ್‌ಗೆ ಸೇರ್ಪಡೆಯಾಗಲಿದ್ದಾರೆ. ಇದಕ್ಕೂ ಮೊದಲು ಅಂದರೆ ಜ.8ರಂದು ಚಿತ್ರದುರ್ಗದಲ್ಲಿ ನಡೆಯುವ ಎಸ್‌ಸಿ–ಎಸ್‌ಟಿ ಐಕ್ಯತಾ ಸಭೆ ಹಾಗೂ ಜ.20ರಂದು ಕಾರ್ಯಕರ್ತರ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗಿಯಾಗುವಂತೆ ಮನವಿ ಮಾಡಲು ಪೂರ್ವಭಾವಿಯಾಗಿ ಜ.6ರಿಂದ 11ರವರೆಗೆ ಚಾಮುಂಡೇಶ್ವರಿ ಕ್ಷೇತ್ರದಾದ್ಯಂತ ಕೆಪಿಸಿಸಿ ಸದಸ್ಯ ಹಾಗೂ ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ ನೇತೃತ್ವದಲ್ಲಿ ಟಿಕೆಟ್ ಆಕಾಂಕ್ಷಿಗಳು, ಮುಖಂಡರು, ಮುಂಚೂಣಿ ಘಟಕದ ಅಧ್ಯಕ್ಷರು, ಮಹಿಳಾ ಪದಾಧಿಕಾರಿಗಳಿಂದ ಪ್ರವಾಸ ಹಮ್ಮಿಕೊಳ್ಳಲಾಗಿದೆ.

ಇಂದು ಪತ್ರಿಕಾ ವಿತರಕರ ಸಂಘದ ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಜ.4–ಮೈಸೂರು ನಗರ ಪತ್ರಿಕಾ ವಿತರಕರ ಸಂಘದ 2023ನೇ ವರ್ಷದ ಕ್ಯಾಲೆಂಡರ್ ಅನ್ನು ನಾಳೆ (ಜ.5) ಬೆಳಗ್ಗೆ 11 ಗಂಟೆಗೆ ಪತ್ರಕರ್ತರ ಭವನದಲ್ಲಿ ಬಿಡುಗಡೆ ಮಾಡಲಾಗುವುದು. ಶಾಸಕ ಎಸ್.ಎ.ರಾಮದಾಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಪರಾಧ ಪತ್ತೆಯಲ್ಲಿ ಮೈಸೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಪ್ರಸಿದ್ಧಿ

● ದಿನದ 24 ಗಂಟೆಯೂ ಕಾರ್ಯನಿರ್ವಹಣೆ ● ಮೈಸೂರು ಭಾಗದ ಅಪರಾಧ ಪ್ರಕರಣಗಳ ವೈಜ್ಞಾನಿಕ ಸಾಕ್ಷ್ಯ ಒದಗಿಸುವ ಪ್ರಮುಖ ಕೇಂದ್ರ

ಮೋಹನ್ ಕಾಯಕ



ಮೈಸೂರು, ಜ.4–ಅಂತರರಾಷ್ಟ್ರೀಯ ಮಟ್ಟದ ಅತ್ಯಾಧುನಿಕ ವಿಶ್ಲೇಷಣಾ ಯಂತ್ರಗಳನ್ನೊಳಗೊಂಡ 'ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ' (Regional Forensic Science Laboratory-FSL)ದ ಸೇವಾ ವಿಸ್ತೀರ್ಣತೆ ಹೆಚ್ಚಾಗಿದ್ದು, ಇಕ್ಕಟ್ಟಿನ ನಡುವೆಯೂ ನ್ಯಾಯಬದ್ಧ ವರದಿಗಳನ್ನು ನೀಡುವಲ್ಲಿ ಪ್ರಸಿದ್ಧಿಯಾಗಿದೆ.

2006ರ ಫೆ.23ರಿಂದ ಮೈಸೂರಿನಲ್ಲಿರುವ ಕರ್ನಾಟಕ ಪೊಲೀಸ್ ಅಕಾಡೆಮಿ ಆವರಣದಲ್ಲಿ ಕಾರ್ಯಾರಂಭಿಸಿದ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಆರಂಭದಲ್ಲಿ ಜೀವಶಾಸ್ತ್ರ ಮತ್ತು ವಿಷಶಾಸ್ತ್ರ ವಿಭಾಗಗಳಿಗೆ ಸಂಬಂಧಿಸಿದ ಮರಣೋತ್ತರ ವರದಿಗಳನ್ನು ಮಾತ್ರ ನೀಡಲಾಗುತ್ತಿತ್ತು. ಇತ್ತೀಚೆಗೆ ಅಂದರೆ ಒಂದು ವರ್ಷದ ಅವಧಿಯಲ್ಲಿ ರಸಾಯನ, ಪ್ರಶ್ನಿತಾ ದಸ್ತಾವೇಜು, ಮನೋವಿಜ್ಞಾನ ಹಾಗೂ ಛಾಯಾಚಿತ್ರ ವಿಭಾಗಗಳು ಸೇರ್ಪಡೆಯಾಗಿದ್ದು, ಮೈಸೂರು ನಗರ ಮತ್ತು ಜಿಲ್ಲೆ, ಮಂಡ್ಯ, ಹಾಸನ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಿಂದ ಬರುವ ಮೃತ ದೇಹಗಳ ಪರೀಕ್ಷೆಯಲ್ಲಿ ಕಾರ್ಯನಿರತವಾಗಿದೆ.

ದಿನದ 24 ಗಂಟೆ, ವರ್ಷದ 365 ದಿನಗಳೂ ಕಾರ್ಯನಿರ್ವಹಿಸಲಿದ್ದು, ವಿಷಶಾಸ್ತ್ರ ವಿಭಾಗದಲ್ಲಿ(ಅಸ್ವಾಭಾವಿಕ ಸಾವು, ಆತ್ಮಹತ್ಯೆ, ಅನುಮಾನಾಸ್ಪದ ಸಾವು, ಕೊಲೆ, ಅಪಹರಣ ಇತ್ಯಾದಿ ಪ್ರಕರಣ) ವರ್ಷಕ್ಕೆ ಸುಮಾರು 2500 ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯವಿಜ್ಞಾನ ವರದಿ ನೀಡುತ್ತಿದೆ. ಹಾಗೆಯೇ ಜೀವಶಾಸ್ತ್ರ ವಿಭಾಗ (ಕೊಲೆ, ಅತ್ಯಾಚಾರ, ಅಪಘಾತ ಇತ್ಯಾದಿ ಪ್ರಕರಣಗಳ ಸಂಬಂಧ ರಕ್ತ, ಚಾಕು, ತಲೆ ಕೂದಲು, ಉಗುರು, ಮಲ, ವೀರ್ಯ, ವಾಂತಿ ಇತ್ಯಾದಿ ಅಂಶಗಳ ಪರೀಕ್ಷೆ)ದಲ್ಲಿ ವರ್ಷಕ್ಕೆ ಸುಮಾರು 1200 ಪ್ರಕರಣ, ಪ್ರಶ್ನಿತಾ ದಸ್ತಾವೇಜು ವಿಭಾಗ(ಸಹಿ, ಬರವಣಿಗೆ, ಡೆತ್‌ನೋಟ್, ದಾಖಲೆ, ಸೀಲ್ ಇತ್ಯಾದಿ) ವರ್ಷಕ್ಕೆ ಸುಮಾರು 100 ಪ್ರಕರಣ, ರಸಾಯನ ವಿಭಾಗ(ಮಾದಕ ವಸ್ತು ಮತ್ತು ದ್ರವ್ಯಗಳು, ಸ್ಫೋಟಕಗಳು)ದಲ್ಲಿ ವರ್ಷಕ್ಕೆ ಸುಮಾರು 400–500 ಪ್ರಕರಣ, ಮನೋವಿಜ್ಞಾನ ವಿಭಾಗ(ಸುಳ್ಳು ಪತ್ತೆ ಪರೀಕ್ಷೆ, ನಾರ್ಕೊ ಅನಾಲಿಸಸ್ (ಮಂಪರು ಪರೀಕ್ಷೆ), ಬ್ರೈನ್ ಮ್ಯಾಪಿಂಗ್ ಪರೀಕ್ಷೆ)ದಲ್ಲಿ ಇದುವರೆಗೆ ಒಂದು ಪ್ರಕರಣ ಹಾಗೂ ಛಾಯಾಚಿತ್ರ ವಿಭಾಗಕ್ಕೆ ಸಂಬಂಧಿಸಿದ ಪ್ರಕರಣಗಳ ಪರೀಕ್ಷೆಗಳೂ ನಡೆಯುತ್ತಿದೆ.

ಉನ್ನತ ಸಂಸ್ಥೆಗಳಿಂದ ಮಾನ್ಯತೆ: ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯವು ಎನ್‌ಎಬಿಎಲ್ (National Accreditation Board for Testing and Calibration Laboratories)ನಿಂದ ಮಾನ್ಯತೆ ಪಡೆದಿದೆ. ಹಾಗೆಯೇ ಎನ್‌ಐಸಿಎಫ್‌ಸಿ (National Institute of Criminology and Forensic Science), ಸಿಎಫ್‌ಎಸ್‌ಸಿ(Central Forensic Science Laboratory) ಬಿಪಿಆರ್‌ಡಿ (Bu reau of police research and development) ಸಂಸ್ಥೆಗಳಿಂದ ಮಾನ್ಯತೆ ಪಡೆದಿದೆ. ಅಲ್ಲದೆ ಪೊಲೀಸ್ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ.

ನುರಿತ ಸಿಬ್ಬಂದಿ: ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಹಲವಾರು ಸಂಸ್ಥೆಗಳಿಂದ ತರಬೇತಿ ಪಡೆದ ವೈಜ್ಞಾನಿಕ ಅಧಿಕಾರಿಗಳಿದ್ದು, ಅವರಲ್ಲಿ ಶೇ.80 ರಷ್ಟು ಮಹಿಳೆಯರಿದ್ದಾರೆ. ಉಪನಿರ್ದೇಶಕರು, ಸಹಾಯಕ ನಿರ್ದೇಶಕರು, ಹಿರಿಯ ವೈಜ್ಞಾನಿಕ ಅಧಿಕಾರಿಗಳು, ವೈಜ್ಞಾನಿಕ ಅಧಿಕಾರಿಗಳು, ಸಹಾಯ ಸಿಬ್ಬಂದಿಗಳನ್ನು ಒಳಗೊಂಡಿದ್ದು, ಕೊಲೆ, ಅತ್ಯಾಚಾರದಂತಹ ಘಟನೆ ನಡೆದ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಸಾಕ್ಷ್ಯಾಧಾರಗಳ ಸಂಗ್ರಹಣೆ ಮತ್ತು ಪರೀಶಿಲನೆ ಮಾಡುವುದರ ಜೊತೆಗೆ ನ್ಯಾಯಾಲಯಗಳಿಗೆ ಹಾಜರಾಗಿ ಪ್ರಕರಣ ಸಂಬಂಧ ಸಾಕ್ಷಿ ಹೇಳುವ ಮೂಲಕ ಸಮಾಜಕ್ಕೆ ಸತ್ಯ ತಿಳಿಸುವ ಕೆಲಸ ಮಾಡುತ್ತಿದೆ.

ಇಕ್ಕಟ್ಟಿನ ಪರಿಸ್ಥಿತಿ: ಮೈಸೂರು ಸೇರಿದಂತೆ ಐದು ಜಿಲ್ಲೆಗಳಲ್ಲಿ ಪ್ರತಿನಿತ್ಯ ನಡೆಯುವ ಅಪರಾಧ ಪ್ರಕರಣಗಳ ಸಂಬಂಧ ನ್ಯಾಯವಿಜ್ಞಾನ ವರದಿ ನೀಡುತ್ತಿರುವ ಪ್ರಯೋಗಾಲಯದಲ್ಲಿ ಇಕ್ಕಟ್ಟಿನ ಪರಿಸ್ಥಿತಿ ಇದೆ. ಲ್ಯಾಬ್‌ಗಳು ಚಿಕ್ಕದಾಗಿದ್ದು, ವಿಶ್ಲೇಷಣೆಗೆ ತೊಡಕಾಗುತ್ತಿದೆ. ವೈಜ್ಞಾನಿಕ ಅಧಿಕಾರಿಗಳು ಇರುವ ಕಡಿಮೆ ಜಾಗದಲ್ಲಿಯೇ ಗಣನೀಯ ಸೇವೆ ಸಲ್ಲಿಸುತ್ತಿದ್ದು, ಲ್ಯಾಬ್‌ಗಳ ಕೊಠಡಿಗಳು ಇನ್ನಷ್ಟು ವಿಸ್ತೀರ್ಣವಾದರೆ ಪರೀಕ್ಷೆ ನಡೆಸಲು ಹಾಗೂ ಮುಂದಿನ ದಿನಗಳಲ್ಲಿ ಸೇರ್ಪಡೆಯಾಗುವ ಡಿಎನ್‌ಎ ಪರೀಕ್ಷೆ ಮತ್ತು ಸೈಬರ್ ವಿಭಾಗಕ್ಕೆ ಅನುಕೂಲವಾಗಲಿದೆ. ಸದ್ಯಕ್ಕೆ ಪ್ರಯೋಗಾಲಯ ಕಟ್ಟಡದ ಮೊದಲ ಮಹಡಿ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಪ್ರಯೋಗಾಲಯದ ವಿಸ್ತೀರ್ಣ ಹೆಚ್ಚಾದಂತೆ ಅದರ ಸೇವೆ ಇನ್ನಷ್ಟು ವೇಗವಾಗಲಿದೆ.



ನ್ಯಾಯವಿಜ್ಞಾನ ವರದಿ ನೀಡುವ ಮೂಲಕ ನೊಂದವರ ಸೇವಾ ಕಾರ್ಯ ಮಾಡುತ್ತಿದೇವೆ. ಮಲ, ಮೂತ್ರ, ದೇಹದ ನಾನಾ ಭಾಗಗಳನ್ನು ಪರೀಕ್ಷೆ ನಡೆಸುತ್ತೇವೆ. ಕಟ್ಟುನಿಟ್ಟಿನ ವಿಶ್ಲೇಷಣೆ ಮೂಲಕ ಮೈಸೂರಿನಲ್ಲಿ 'ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ' ದೇಶದಲ್ಲಿಯೇ ಹೆಸರು ಪಡೆಯುವಂತಾಗಿದೆ. **–ಎಸ್.ಕೆ.ಕೃಷ್ಣರಾಜು, ಉಪನಿರ್ದೇಶಕರು.**

15–30 ದಿನದಲ್ಲಿ ವರದಿ: ಮೈಸೂರಿನಲ್ಲಿ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದ ಆರಂಭಕ್ಕೂ ಮೊದಲು ಮರಣೋತ್ತರ ಪರೀಕ್ಷಾ ವರದಿಗಳನ್ನು ಪಡೆಯಲು ಸುಮಾರು ಒಂದು ವರ್ಷವೇ ಆಗುತ್ತಿತ್ತು. ಪರೀಕ್ಷೆಗಾಗಿ ಬೆಂಗಳೂರಿಗೆ ಕಳುಹಿಸಬೇಕಾಗಿತ್ತು. ಈಗ 15ರಿಂದ 30 ದಿನಗಳಲ್ಲಿ ವರದಿ ನೀಡುತ್ತಿದ್ದೇವೆ. ತುರ್ತು ಇದ್ದಲ್ಲಿ 24 ಗಂಟೆಯೊಳಗೂ ವರದಿ ನೀಡುತ್ತಿದ್ದೇವೆ ಎಂದು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದ ಉಪ ನಿರ್ದೇಶಕ ಎಸ್.ಕೆ.ಕೃಷ್ಣರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

2018ರ ಡಿಸೆಂಬರ್‌ನಲ್ಲಿ ಸುಳ್ವಾಡಿ ಕಿಚ್‌ಗುತ್ ಮಾರಮ್ಮ ದೇವಸ್ಥಾನದಲ್ಲಿ ನಡೆದ ವಿಷ ಪ್ರಸಾದ ಘಟನೆಯಲ್ಲಿ ಮೃತಪಟ್ಟವರ ಮರಣೋತ್ತರ ಪರೀಕ್ಷಾ ವರದಿಯನ್ನು 24 ಗಂಟೆಯೊಳಗೆ ನೀಡಿದ್ದೆವು. ಅದರಂತೆ ಹಲವಾರು ಪ್ರಕರಣಗಳ ಸಂಬಂಧ ತುರ್ತು ಇದ್ದಲ್ಲಿ ಸಾಧ್ಯವಾದಷ್ಟು ವೇಗವಾಗಿ ವರದಿ ನೀಡುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪರಿಶಿಷ್ಟ ಪಂಗಡದ 30 ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ



ಮೈಸೂರು,ಜ.4(ಪಿಎಂ)–ಮೈಸೂರು ಪಾಲಿಕೆ 24.10ರ ಯೋಜನೆಯಡಿ ವಲಯ ಕಚೇರಿ 1ರ ವ್ಯಾಪ್ತಿಯ ವಾರ್ಡ್ 50ರ ಸುಣ್ಣದಕೇರಿಯ ಪರಿಶಿಷ್ಟ ಪಂಗಡದ 30 ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರಗಳನ್ನು ಬುಧವಾರ ವಿತರಣೆ ಮಾಡಲಾಯಿತು.

ಸುಣ್ಣದಕೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡಿದರು. ಬಳಿಕ ಮಾತನಾಡಿದ ಎಂ.ಕೆ.ಸೋಮಶೇಖರ್, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಹಿಳೆಯರು ಯಾವುದೇ ಕ್ಷೇತ್ರದಲ್ಲೂ ಹಿಂದೆ ಬಿದ್ದಿಲ್ಲ. ಪುರುಷರಿಗೆ ಸರಿಸಮಾನವಾಗಿ ಎಲ್ಲಾ ರಂಗದಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಆ ಮೂಲಕ ಮುಖ್ಯವಾಹಿನಿಗೆ ಬರುತ್ತಿದ್ದಾರೆ ಎಂದು ಹೇಳಿದರು.

ನಗರ ಪ್ರದೇಶದಲ್ಲಿ ಎಲ್ಲಾ ಮಹಿಳೆಯರು ಶಿಕ್ಷಿತರು, ಅನುಕೂಲಸ್ಥರು ಆಗಿರುವುದಿಲ್ಲ. ಅಂತಹ ಮಹಿಳೆಯರ ಸ್ವಾವಲಂಬಿ ಬದುಕಿಗೆ ಅನೇಕ ಅವಕಾಶಗಳು ಲಭ್ಯವಾಗುತ್ತವೆ. ಅವುಗಳನ್ನು ಸಮರ್ಪಕವಾಗಿ ಬಳಸಿಕೊಂಡರೆ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಬಹುದು. ಈ ನಿಟ್ಟಿನಲ್ಲಿ ಹೊಲಿಗೆ ಯಂತ್ರಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಫಲಾನುಭವಿಗಳಿಗೆ ಸಲಹೆ ನೀಡಿದರು. ವಲಯ ಆಯುಕ್ತ ಮಂಜುನಾಥ್ ರೆಡ್ಡಿ, ಮುಖಂಡರಾದ ಶಿವಮಲ್ಲು, ನಾಗರಾಜು, ಸತೀಶ್, ವಿಶ್ವನಾಥ್ (ವಿಶ್ವ), ನಾಗೇಶ್ ನಾಯಕ, ಸಿದ್ದಪ್ಪ, ಕೃಷ್ಣ, ಶೇಖರ್, ಮಂಜುನಾಥ್, ವಿಜಯ್ ಮತ್ತಿತರರು ಹಾಜರಿದ್ದರು.



ಜ.20ರ ಶುಕ್ರವಾರದಂದು ನಡೆಯಲಿರುವ ಬೃಹತ್ ಕಾಂಗ್ರೆಸ್ ಕಾರ್ಯಕರ್ತರ ಸಭೆ ಹಾಗೂ ಸ್ವಾಭಿಮಾನಿ ಬಳಗದ ಸಾವಿರಾರು ಬೆಂಬಲಿಗರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದ ಸಿದ್ಧತೆಯನ್ನು ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ ಪರಿಶೀಲಿಸಿದರು. ಈ ವೇಳೆ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ನಾಗೇಶ, ಮಾದೇಗೌಡ, ಕೆಂಪನಾಯಕ, ಸೂರಿ, ಸ್ವಾಮಿ, ಮಹೇಶ, ಶರೀಫ್, ಮಹೇಶ, ಪುಟ್ಟಸ್ವಾಮಿ, ಸಿದ್ದೇಗೌಡ, ಯೋಗೇಶ್, ಜಗದೀಶ್, ಮಂಜು, ರಘು, ಸ್ವಾಮಿ, ಚಂದ್ರು, ನಾಗರಾಜು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಮಂಡ್ಯ ಜಿಲ್ಲೆಯ ಸಾಹಿತ್ಯ ಪರಂಪರೆ ಬಹಳ ದೊಡ್ಡದು

5ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಯರಾಂ ರಾಯಪುರ ಅಭಿಮತ



ಮಂಡ್ಯ, ಜ.4– ನೂರು ವರ್ಷಗಳ ಹಿಂದೆ ಸಾಹಿತ್ಯ ರಚಿಸಿದ ಎಂ.ಎಲ್.ಶ್ರೀಕಂಠೇಶಗೌಡರಿಂದ ಹಿಡಿದು ಇಂದು ಪುಸ್ತಕ ಬಿಡುಗಡೆ ಮಾಡಿದ ಸಾಹಿತಿಗಳವರೆಗೆ ಹೋಬಳಿ ಮಟ್ಟದಿಂದ ರಾಷ್ಟ್ರಮಟ್ಟದವರೆಗೆ ಖ್ಯಾತರಾದ ಸಾಹಿತಿಗಳು ಮಂಡ್ಯ ಜಿಲ್ಲೆಯಲ್ಲಿ ಇದ್ದಾರೆ. ಹೀಗಾಗಿ ಜಿಲ್ಲೆಯ ಸಾಹಿತ್ಯ ಪರಂಪರೆ ಬಹಳ ದೊಡ್ಡದು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ ಅಭಿಪ್ರಾಯಪಟ್ಟರು.

ನಗರ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಬುಧವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಮಂಡ್ಯ ನಗರ 5ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಮಂಡ್ಯದಲ್ಲಿ ಪುಸ್ತಕ ಪ್ರೇಮಿಗಳು ಹೆಚ್ಚಾಗಿದ್ದಾರೆ. ಕುವೆಂಪು ಭಾಷಾ ಪ್ರಾಧಿಕಾರದವರು ಒಂದು ವಾರದಲ್ಲಿ ನಾಲ್ಕುವರೆ ಲಕ್ಷ ರೂ. ಮೌಲ್ಯದ ಪುಸ್ತಕ ಮಾರಾಟ ಮಾಡಿದ ದಾಖಲೆ ಇದೆ. ಜಿಲ್ಲೆಯಲ್ಲಿ ಕುವೆಂಪು ಅಭಿಮಾನಿಗಳು ಸಹ ಹೆಚ್ಚಾಗಿದ್ದಾರೆ ಎಂದರು.

ಕನ್ನಡ ಸಾಹಿತ್ಯದ ಜೊತೆಗೆ ಸಂಸ್ಕೃತಿ ಮತ್ತು ಪರಂಪರೆ ಸಹ ಸಹಜವಾಗಿ ಬೆಳೆಯುತ್ತದೆ. ಭಾಷೆ ಬೆಳೆಸುವ ವಿಚಾರದಲ್ಲಿ ನಮ್ಮ ಮನೋಭಾವ ಬದಲಾಗಬೇಕು. ಕನ್ನಡ ಭಾಷೆ ನಮ್ಮ ಅಸ್ಮಿತೆಯಾಗಿದ್ದು ಆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರನ್ನು ಗೌರವಿಸಬೇಕು. ಭಾಷೆಯನ್ನು ಸ್ಪಷ್ಟವಾಗಿ ಶುದ್ಧತೆಯಿಂದ ಬಳಸುವ ಮನೋಭಾವ ಬೆಳೆಸಿಕೊಳ್ಳಬೇಕು. ಆಗ ಕನ್ನಡ ಭಾಷೆಯ ಜೊತೆಗೆ ಇಂಗ್ಲಿಷ್ ಸಹ ಶುದ್ಧವಾಗುತ್ತದೆ. ಬೆರಕೆ ಭಾಷೆಯ ಬಳಕೆಯ ಅಗತ್ಯವಿಲ್ಲ. ಕನ್ನಡವಾದರೆ ಕನ್ನಡ, ಇಂಗ್ಲಿಷ್ ಆದರೆ ಇಂಗ್ಲಿಷ್ ಅನ್ನು ಸಮರ್ಪಕವಾಗಿ ಬಳಸಬೇಕು. ಮಂಡ್ಯದಲ್ಲಿ ಸಾಂಸ್ಕೃತಿಕ ಶ್ರೀಮಂತ ವಾತಾವರಣ ವಿದೆ ಎಂಬ ಅಭಿಮಾನ ವ್ಯಕ್ತಪಡಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಧನಂಜಯ ಮಾತನಾಡಿ, ಜಿಲ್ಲೆಯ ಆರೋಗ್ಯ ಇಲಾಖೆ ಕಾರ್ಯವೈಖರಿ ಹಾಗೂ ಜನತೆ ಆರೋಗ್ಯದ ವಿಷಯದಲ್ಲಿ ಕಾಳಜಿ ವಹಿಸಬೇಕು. ಬೂಸ್ಟರ್ ಡೋಸ್‌ಗಳನ್ನು ಪಡೆದುಕೊಳ್ಳಿ. ಕೋವಿಡ್‌ಗೆ ಹೆದರುವ ಅಗತ್ಯವಿಲ್ಲ ಎಂದರು.

ಯುವ ಸಾಹಿತಿ ಡಾ.ಹೆಚ್.ಆರ್.ಕನ್ನಿಕಾ ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡಿದರು. ನಿಕಟ ಪೂರ್ವ ಸಮ್ಮೇಳನಾಧ್ಯಕ್ಷೆ ಡಾ.ಪಿ. ಸುಮಾರಾಣಿ ಶಂಭು ಮಾತನಾಡಿದರು.

ಕನ್ನಿಕಾ ಅವರಿಗೆ ಕನ್ನಡ ಧ್ವಜ ನೀಡುವ ಮೂಲಕ ಸುಮಾ ರಾಣಿ ಸಮ್ಮೇಳನಾಧ್ಯಕ್ಷತೆ ಅಧಿಕಾರ ಹಸ್ತಾಂತರಿಸಿದರು. ಪತ್ರಕರ್ತ ಹೊಳಲು ಶ್ರೀಧರ್ ಅವರ ಪದ ಸಂಚಯ ಕೃತಿ ಹಾಗೂ ಸಮ್ಮೇಳನಾಧ್ಯಕ್ಷೆ ಹೆಚ್.ಆರ್.ಕನ್ನಿಕಾ ಅವರ ಹಣತೆ ಕವನ ಸಂಕಲನವನ್ನು ಜಿಪಂ ಸಿಇಓ ಶಾಂತ ಎಲ್ ಹುಲ್ಮನಿ ಹಾಗೂ ಜಯರಾಂ ರಾಯಪುರ ಬಿಡುಗಡೆ ಮಾಡಿದರು. ವೇದಿಕೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಧನಂಜಯ, ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ ಅಶೋಕ್ ಜಯರಾಂ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರವಿಕುಮಾರ್ ಚಾಮಲಾಪುರ, ಕೋಶಾಧ್ಯಕ್ಷ ಬಿ.ಎಂ. ಅಪ್ಪಾಜಪ್ಪ, ಕಾರ್ಯದರ್ಶಿ ಹುಸ್ಕೂರು ಕೃಷ್ಣೇಗೌಡ, ಧನಂಜಯ ದರಸಗುಪ್ಪೆ ಮಂಡ್ಯ ತಾಲೂಕು ಘಟಕದ ಅಧ್ಯಕ್ಷ ಮಂಜು ಮುತ್ತೇಗೆರೆ, ನಗರ ಘಟಕದ ಅಧ್ಯಕ್ಷೆ ಸುಜಾತ ಕೃಷ್ಣ ಸಾಹಿತಿ ಶ್ವೇತಾ ಎಂ.ಯು, ವಕೀಲ ಗುರುಪ್ರಸಾದ್ ಮುಂತಾದವರು ಇದ್ದರು.

ಸಮ್ಮೇಳನದಲ್ಲಿ ಗದ್ದಲ: ಜಿಲ್ಲಾಧ್ಯಕ್ಷರ ವಿರುದ್ಧ ಕಪ್ಪು ಬಾವುಟ ಪ್ರದರ್ಶನ

ಮಂಡ್ಯ, ಜ.4– ಮದ್ದೂರು ತಾಲೂಕಿನ ಪದಾಧಿಕಾರಿಗಳನ್ನು ಏಕಾಏಕಿ ಬದಲಾವಣೆ ಮಾಡಿರುವುದರ ವಿರುದ್ಧ ಪರಿಷತ್ ಸದಸ್ಯರು ಮಂಡ್ಯ ನಗರ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲಾಧ್ಯಕ್ಷರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಕಪ್ಪು ಬಾವುಟ ಪ್ರದರ್ಶಿಸಿದ ಹಿನ್ನೆಲೆಯಲ್ಲಿ ಕೆಲಕಾಲ ಗದ್ದಲದ ಪರಿಸ್ಥಿತಿ ಉಂಟಾಗಿತ್ತು.



ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯುತ್ತಿದ್ದ ಸಮ್ಮೇಳನದಲ್ಲಿ ಮದ್ದೂರು ತಾಲೂಕು ಸಾಹಿತ್ಯ ಪರಿಷತ್ತಿನ ಸದಸ್ಯರು ಕಸಾಪ ಜಿಲ್ಲಾಧ್ಯಕ್ಷ ರವಿಕುಮಾರ್ ಚಾಮಲಾಪುರ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿ, ವೇದಿಕೆ ಎದುರು ಧರಣಿ ನಡೆಸಿ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಮ್ಮೇಳನದ ಉದ್ಘಾಟನೆಯಲ್ಲಿ ಸ್ವಾಗತ ಭಾಷಣ ಮಾಡಲು ರವಿಕುಮಾರ್ ಚಾಮಲಾಪುರ ಮುಂದಾದಾಗ ಸಭಿಕರ ಸಾಲಿನಲ್ಲಿದ್ದ ಪರಿಷತ್ ಸದಸ್ಯರು ಕಪ್ಪು ಬಾವುಟ ಹಿಡಿದು ಧಿಕ್ಕಾರದ ಘೋಷಣೆ ಕೂಗುತ್ತಾ ವೇದಿಕೆಯತ್ತ ನುಗ್ಗಿದರು. ಪೊಲೀಸರು ತಡೆಯಲು ಮುಂದಾದಾಗ ಅದನ್ನು ಲೆಕ್ಕಿಸದೆ ವೇದಿಕೆ ಮುಂಭಾಗಕ್ಕೆ ತೆರಳಿ ಧರಣಿ ಕುಳಿತರು. ಪರಿಷತ್‌ನ ಜಿಲ್ಲಾಧ್ಯಕ್ಷ ಸಮ್ಮೇಳನದ ವೇದಿಕೆ ಮೇಲೆ ಕುಳಿತಿದಿದ್ದಾಗ ನಮ್ಮನ್ನು ನೋಡಿ ಕಾಲು ಮೇಲೆ ಎತ್ತಿ ಚಪ್ಪಲಿ ತೋರಿಸಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮದ್ದೂರು ತಾಲೂಕು ಕಸಾಪ ಅಧ್ಯಕ್ಷ ಸುನೀಲ್, ಕಾರ್ಯದರ್ಶಿ ಹರ್ಷ ಅವರನ್ನು ಪದಾಧಿಕಾರಿ ಸ್ಥಾನದಿಂದ ವಜಾ ಮಾಡುವ ಮೂಲಕ ಜಿಲ್ಲಾಧ್ಯಕ್ಷರು ಸರ್ವಾಧಿಕಾರಿತನ ಪ್ರದರ್ಶಿಸಿದ್ದಾರೆ ಎಂದು ಕಿಡಿಕಾರಿದರು.

ಮದ್ದೂರಿನಲ್ಲಿ ತಾಲೂಕು ಕಸಾಪ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಲೇಖಕ ಗುಬ್ಬಿಗೂಡು ರಮೇಶ್ ಅವರನ್ನು ಅತಿಥಿಯಾಗಿ ಆಹ್ವಾನ ಮಾಡಿದ್ದಕ್ಕೆ ಪದಾಧಿಕಾರಿ ಹುದ್ದೆಯಿಂದ ವಜಾ ಮಾಡಲಾಗಿದೆ. ವೈಯಕ್ತಿಕವಾಗಿ ಗುಬ್ಬಿಗೂಡು ರಮೇಶ್ ಬಗ್ಗೆ ಪರಿಷತ್‌ನ ಜಿಲ್ಲಾಧ್ಯಕ್ಷರಿಗೆ ಅಸಮಾಧಾನ ಇದೆ. ತಮಗೆ ಆಗದವರನ್ನು ಕರೆಸಿ ಸಮಾರಂಭ ಮಾಡಿದ್ದರಿಂದ ಪದಾಧಿಕಾರಿಗಳನ್ನು ಕೈ ಬಿಡುವ ಮೂಲಕ ಸರ್ವಾಧಿಕಾರಿತನ ಮೆರೆದಿದ್ದಾರೆ ಎಂದು ಕಿಡಿಕಾರಿದರು.

ಪರಿಷತ್‌ನಲ್ಲಿ ಯಾರಿಗಾದರೂ ಅನ್ಯಾಯವಾಗಿದ್ದರೆ ಮುಂದಿನ ದಿನಗಳಲ್ಲಿ ಎಲ್ಲರೂ ಕುಳಿತು ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸೋಣ. ಸಮ್ಮೇಳನಕ್ಕೆ ಅವಕಾಶ ಮಾಡಿಕೊಡುವಂತೆ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಅಶೋಕ್ ಜಯರಾಮ್ ಮನವಿ ಮಾಡುವ ಮೂಲಕ ಪ್ರತಿಭಟನಾಕಾರರನ್ನು ಮನವೊಲಿಸಿದರು. ಅನಂತರ ಸಮ್ಮೇಳನದ ಉದ್ಘಾಟನೆ ಸುಗಮವಾಗಿ ನಡೆಯಿತು.

ಜಮೀನು ವಿವಾದ: ಕಾರು ಹರಿಸಿ ಮಹಿಳೆ ಕೊಲೆ, ಮೂವರಿಗೆ ಗಾಯ

ನಾಗಮಂಗಲ, ಜ.4–ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆ ಯಲ್ಲಿ ಕಾರು ಹತ್ತಿಸಿ ಮಹಿಳೆಯನ್ನು ಹತ್ಯೆ ಮಾಡಿ, ಮೂವರನ್ನು ಗಾಯಗೊಳಿಸಿದ ಘಟನೆ ತಾಲೂಕಿನ ಗಾಣಸಂದ್ರ ಗ್ರಾಮದಲ್ಲಿ ಭಾನುವಾರ ಸಂಜೆ ನಡೆದಿದ್ದು, ಬೆಳ್ಳೂರು ಪೊಲೀಸರು ನಾಲ್ವರನ್ನು ಬಂಧಿಸಿ, ಕಾರನ್ನು ವಶಪಡಿಸಿಕೊಂಡಿದ್ದಾರೆ.

ಗಾಣಸಂದ್ರ ಗ್ರಾಮದ ರಾಮಕೃಷ್ಣಯ್ಯ ಎಂಬುವರ ಪತ್ನಿ ಜಯಲಕ್ಷ್ಮಮ್ಮ(45) ಹತ್ಯೆಗೀಡಾದವರಾಗಿದ್ದು, ರಾಮಕೃಷ್ಣಯ್ಯ, ದೇವರಾಜು ಮತ್ತು ನವೀನ್ ಗಾಯ ಗೊಂಡು ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಣಸಂದ್ರ ಗ್ರಾಮದವರೇ ಆಗಿದ್ದು, ಹಾಲಿ ಬೆಂಗಳೂರಿ ನಲ್ಲಿ ವಾಸವಿರುವ ಗೌಡಯ್ಯ, ಆತನ ಪುತ್ರ ಅನಿಲ್ ಕುಮಾರ್, ಅನಿಲ್ ಕುಮಾರ್ ಮಾವ ಬಸವರಾಜು ಮತ್ತು ಗ್ರಾಮದ ಗಿರೀಶ ಬಂಧಿತರಾಗಿದ್ದು, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ವಿವರ: ಹತ್ಯೆಗೀಡಾದ ಜಯಲಕ್ಷ್ಮಮ್ಮ ಅವರ ತಾಯಿ ಲಕ್ಷ್ಮಮ್ಮ ಅವರ ಜಮೀನನ್ನು ಜಯಮ್ಮ ಮತ್ತು ಕುಟುಂಬದವರು ನೋಡಿ ಕೊಳ್ಳುತ್ತಿದ್ದರು. ಜಮೀನಿನಲ್ಲಿ ಬೆಳೆದಿದ್ದ ಹುರುಳಿ ಫಸಲನ್ನು ಭಾನುವಾರ ಬೆಳಗ್ಗೆ ಜಯಲಕ್ಷ್ಮಮ್ಮ, ಪತಿ ರಾಮ ಕೃಷ್ಣಯ್ಯ ಮತ್ತು ಪುತ್ರ ಜೀವಿತ್ ಕಟಾವು ಮಾಡಿಸುತ್ತಿದ್ದರು. ಆ ವೇಳೆ ಪಕ್ಕದ ಜಮೀನಿನ ಗೌಡಯ್ಯ, ಅವರ ಪುತ್ರ ಅನಿಲ್ ಕುಮಾರ್ ಅವರುಗಳು ಜೆಸಿಬಿಯಿಂದ ಜಯಲಕ್ಷ್ಮಮ್ಮ ಜಮೀನಿಗೆ ಸಂಪರ್ಕವಿದ್ದ ವಿದ್ಯುತ್ ಲೈನ್ ಅನ್ನು ಹಾಳು ಮಾಡಿದರು. ಹಾಗಿದ್ದರೂ ಜಯಲಕ್ಷ್ಮಮ್ಮ ಕುಟುಂಬದವರು ತಮ್ಮ ಕೆಲಸವನ್ನು ಮುಂದುವರೆಸಿದ್ದರು ಎಂದು ಹೇಳಲಾಗಿದ್ದು, ಆ ವೇಳೆ ಕಟಾವು ಮಾಡಿದ ಹುರುಳಿಯನ್ನು ಸಾಗಿಸಲು ಜಮೀನಿಗೆ ಬಂದ ನವೀನ್ ಎಂಬಾತ ನನ್ನು ಗೌಡಯ್ಯ ಮತ್ತಿತರರು ಕಲ್ಲಿನಿಂದ ಹೊಡೆದಿದ್ದಾರೆ ಎಂದು ಆರೋಪಿಸಲಾಗಿದೆ.

ಇವರ ಹಾವಳಿಯನ್ನು ತಡೆಯಲಾರದೇ ರಾಮಕೃಷ್ಣಯ್ಯ ಅವರು ತಮ್ಮ ಪರಿಚಯಸ್ಥರಿಗೆ ಕರೆ ಮಾಡಿದಾಗ ದೇವರಾಜ ಎಂಬುವರು ಸ್ಥಳಕ್ಕೆ ಬಂದಿದ್ದರು. ಈ ವೇಳೆ ಗೌಡಯ್ಯ, ಅನಿಲ್ ಕುಮಾರ್ ಮತ್ತು ಗೌಡಯ್ಯ ಪತ್ನಿ ಪ್ರಮೀಳಾ ಮತ್ತು ಬಸವ ರಾಜು ಕಾರಲ್ಲಿ ಕುಳಿತುಕೊಂಡಿದ್ದಾರೆ. ಹಾತ್ತನೆ ಅನಿಲ್ ಕುಮಾರ್ ಕಾರನ್ನು ವೇಗವಾಗಿ ಚಾಲನೆ ಮಾಡಿ, ರಾಮಕೃಷ್ಣಯ್ಯ ಕುಟುಂಬದ ಮೇಲೆ ಹರಿಸಿದ್ದಾನೆ. ಈ ವೇಳೆ ಜಯಲಕ್ಷ್ಮಮ್ಮ, ರಾಮಕೃಷ್ಣಯ್ಯ, ದೇವರಾಜು ಮತ್ತು ನವೀನ್ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗ ಮಧ್ಯೆ ಜಯಲಕ್ಷ್ಮಮ್ಮ ಮೃತಪಟ್ಟಿದ್ದಾರೆ. ಉಳಿದ ಮೂವರು ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ವಿಷಯವನ್ನು ಮೊಬೈಲ್ ಮೂಲಕ ಗ್ರಾಮಸ್ಥರಿಗೆ ಠಾಣೆಗೆ ತಿಳಿಸಿದ್ದು, ಕಾರ್ಯ ಪ್ರವೃತ್ತರಾದ ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ನೇತೃತ್ವದ ಬೆಳ್ಳೂರು ಠಾಣೆ ಪೊಲೀಸರು ಬೆಂಗಳೂರು–ಮಂಗಳೂರು ಮಾರ್ಗವಾಗಿ ಹೋಗುತ್ತಿದ್ದ ಗೌಡಪ್ಪ ಕುಟುಂಬಸ್ಥರಿದ್ದ ಕಾರನ್ನು ವಶಪಡಿಸಿಕೊಂಡು ನಾಲ್ವರನ್ನು ಬಂಧಿಸಿದ್ದಾರೆ.

ಸಬ್ಬನಕುಪ್ಪೆಯಲ್ಲಿ ಚಿರತೆ ಸೆರೆ



ಶ್ರೀರಂಗಪಟ್ಟಣ, ಜ.4– ಇಲ್ಲಿನ ಸಬ್ಬನಕುಪ್ಪೆ ಗ್ರಾಮದಲ್ಲಿ ಚಿರತೆ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬುಧವಾರ ಸೆರೆ ಸಿಕ್ಕಿದೆ. ಗ್ರಾಮದಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದನ್ನು ಗ್ರಾಮಸ್ಥರ ಅರಣ್ಯ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದು ಬೋನ್ ಇಡುವಂತೆ ಮನವಿ ಮಾಡಿದ್ದರು. ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಬಾಲು ಎಂಬುವರ ತೋಟದಲ್ಲಿ ಬೋನ್ ಇಟ್ಟಿದ್ದರು. ಶ್ರೀರಂಗಪಟ್ಟಣ ವಲಯಾಧಿಕಾರಿ ಹಾಗೂ ಅರ್ಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಚಿರತೆಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದಾರೆ.

ಕ್ರೀಡೆಯಿಂದ ಮಾನಸಿಕ ಸದೃಢತೆ: ಶಾಸಕ ಸುರೇಶ್‌ಗೌಡ



ಮದ್ದೂರು,ಜ.4– ಕ್ರೀಡೆಯಿಂದ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢರಾಗಬಹುದು ಎಂದು ನಾಗಮಂಗಲ ಕ್ಷೇತ್ರದ ಶಾಸಕ ಸುರೇಶ್‌ಗೌಡ ತಿಳಿಸಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಬುಧವಾರ ಮದ್ದೂರು ತಾಲೂಕು ಮುಜರಾಯಿ ದೇವಾಲಯಗಳ ಅರ್ಚಕರ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ಆರ್‌ಸಿಎಂ ಕ್ರಿಕೆಟರ್ಸ್ ಮದ್ದೂರು ವತಿಯಿಂದ ಕರ್ನಾಟಕ ರಾಜ್ಯ ಆಗಮಿಕರು, ಅರ್ಚಕರು, ಪುರೋಹಿತರು ಹಾಗೂ ಜ್ಯೋತಿಷಿಗಳಿಗೆ ಹಮ್ಮಿಕೊಂಡಿದ್ದ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಿಗೆ ಚಾಲನೆ ನೀಡಿ ಮಾತನಾಡಿದರು.

ಮದ್ದೂರು ಶಾಸಕ ಡಿ.ಸಿ.ತಮ್ಮಣ್ಣ ಮಾತನಾಡಿ, ಗ್ರಾಮಾಂತರ ಪ್ರದೇಶದ ಅರ್ಚಕರು ಕಷ್ಟದಲ್ಲಿ ಜೀವನ ಮಾಡುತ್ತಿದ್ದು, ಸರ್ಕಾರ ನೀಡುವ ಗೌರವಧನ ಯಾವುದಕ್ಕೂ ಸಾಕಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ನೆರವಿಗೆ ಧಾವಿಸಬೇಕು ಎಂದು ಮನವಿ ಮಾಡಿದರು. ಕಬ್ಬಹಳ್ಳಿ ಪಟ್ಟದ ಮಠದ ಶ್ರೀ.ಷ.ಬ್ರ. ಗುರುಸಿದ್ದಸ್ವಾಮಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಹಲವಾರು ತಂಡಗಳು ಭಾಗವಹಿಸುವ ಮೂಲಕ ನೋಡುಗರ ಗಮನ ಸೆಳೆದರು.

ಖ್ಯಾತ ಜ್ಯೋತಿಷಿ ರಾಂಪುರ ಆರ್.ಸಿ. ದೊರೆಸ್ವಾಮಿ, ಧಾರ್ಮಿಕ ಪರಿಷತ್ ಸದಸ್ಯ ಎನ್.ಎಸ್.ನವೀನ್ ಟೂರ್ನಿಯ ಆಯೋಜಕರಾದ ಟಿ.ಸಿ.ದಯಾನಂದ್, ದೇವರಾಜ್, ಟಿ.ಎಂ.ಮಂಜುನಾಥ್, ಟಿ.ಎಂ. ನಟರಾಜು, ಮಹೇಶ್, ಶಿವಕುಮಾರ್, ಎಆರ್. ದರ್ಶನ್, ನಾಗೇಶ್, ರಕ್ಷಿತ್, ಗಿರೀಶ್, ಮಲ್ಲಪ್ಪ, ರಂಜಿತ್, ಸಂತೋಷ್, ರವಿಕುಮಾರ್, ಅರುಣ್‌ಕುಮಾರ್, ನಿರಂಜನ್ ಕುಮಾರ್, ಶಂಕರ್, ರಾಜಶೇಖರ್ ಇದ್ದರು.



ಪಾಲಹಳ್ಳಿಯಲ್ಲಿ 8ನೇ ಅಂಗನವಾಡಿ ಕೇಂದ್ರದ ಕಟ್ಟಡಕ್ಕೆ ಗ್ರಾಪಂ ಅಧ್ಯಕ್ಷೆ ರೇಖಾ ಗುದ್ದಲಿ ಪೂಜೆ ನೆರವೇರಿಸಿದರು. ಪಿಡಿಓ ರವಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪುಷ್ಪಾವತಿ, ಉಪಾಧ್ಯಕ್ಷೆ ಜಯಲಕ್ಷ್ಮಿ, ಸದಸ್ಯರಾದ ಪ್ರಕಾಶ್, ದಿನೇಶ್, ಆದರ್ಶ, ರಾಮು, ಲೋಕೇಶ್ ಆಶಾ, ಗ್ರಾಮದ ಮುಖಂಡರಾದ ಪೈ ಮುಕುಂದಣ್ಣನವರು, ರಮೇಶ್ ಬಾಬು, ನಾಗರಾಜು, ಶಂಕರೇಗೌಡ, ಶ್ರೀಧರ್, ಪ್ರಭಾಕರ್, ಸಂಜು ಇದ್ದರು.

ಒಂದನೇ ಪುಟದಿಂದ

ಸಕ್ರಿಯ ರಾಜಕಾರಣಕ್ಕೆ ಎಸ್.ಎಂ.ಕೃಷ್ಣ ಗುಡ್‌ಬೈ

ಬಿಜೆಪಿ ವರಿಷ್ಠರ ಗಮನಕ್ಕೆ ತರುವ ಅಗತ್ಯವಿಲ್ಲ. ಅವರೇನು ನನಗೆ ಪೆನ್ಷನ್ ಕೊಡಲ್ಲ. ಹೀಗಾಗಿ ಅವರ ಗಮನಕ್ಕೆ ತಂದಿಲ್ಲ ಎಂದರು. ವಯಸ್ಸಿಗೆ ಬೆಲೆ ಕೊಟ್ಟು ಸಾರ್ವಜನಿಕ ಜೀವನ ದಿಂದ ಹಿಂದೆ ಸರಿಯುತ್ತಿದ್ದೇನೆಯೇ ಹೊರತು ಇದಕ್ಕೆ ಬೇರೆ ಕಾರಣಗಳನ್ನು ನೀಡುವ ಅಗತ್ಯವಿಲ್ಲ ಎಂದರು. 1962 ರಲ್ಲೇ ರಾಜ್ಯ ವಿಧಾನಸಭೆಗೆ ಮಂಡ್ಯ ಜಿಲ್ಲೆಯ ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಪ್ರಜಾ ಸೋಶಿಯಲಿಸ್ಟ್ ಪಕ್ಷದಿಂದ ಆಯ್ಕೆಗೊಂಡ ಕೃಷ್ಣಾ ಅವರು, ನಂತರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಕಾಂಗ್ರೆಸ್ ಪಕ್ಷದಲ್ಲಿ ವಿಧಾನಸಭೆ, ವಿಧಾನಪರಿಷತ್ತು, ಲೋಕಸಭಾ, ರಾಜ್ಯಸಭಾ ಸದಸ್ಯರಾಗಿ ಕೇಂದ್ರದ ಸಚಿವರಾಗಿಯು ಸೇವೆ ಸಲ್ಲಿಸಿದ್ದಾರೆ. 1999ರಿಂದ 2004 ರವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ ಕೃಷ್ಣಾ, ಬೆಂಗಳೂರು ನಗರವನ್ನು ಮಾಹಿತಿ ತಂತ್ರಜ್ಞಾನ ನಗರವನ್ನಾಗಿ ಪರಿವರ್ತಿಸಿದ ಹೆಗ್ಗಳಿಕೆ ಅವರದ್ದಾಗಿದೆ.

ನಂತರ ಕೇಂದ್ರದಲ್ಲಿ ವಿದೇಶಾಂಗ ಸಚಿವರಾಗಿ, ಮಹಾರಾಷ್ಟ್ರದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ 2017 ರಲ್ಲಿ ಬಿಜೆಪಿ ಸೇರ್ಪಡೆಗೊಂಡರು. ಬಿಜೆಪಿಗೆ ಸೇರಿದ ನಂತರ ಅವರಿಗೆ ಯಾವುದೇ ಸ್ಥಾನಮಾನ ದೊರೆಯಲಿಲ್ಲ. ಇದೀಗ ಅವರು ರಾಜಕೀಯ ನಿವೃತ್ತಿ ಘೋಷಣೆ ಮಾಡಿದ್ದಾರೆ.

ಜೋಡಿ ಚಿರತೆ ಪ್ರತ್ಯಕ್ಷ

ವಿವಿಧ ಪ್ರಯೋಗಾಲಯಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಸೇರಿದಂತೆ ಇಲ್ಲಿನ ವಸತಿ ಗೃಹ ಗಳ ನಿವಾಸಿಗಳು ಎಚ್ಚರದಿಂದ ಇರುವಂತೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಮುಂಜಾನೆಯೇ ಪ್ರತ್ಯಕ್ಷ: ಸಿಎಫ್‌ಟಿಆರ್‌ಐ ಆವರಣದಲ್ಲಿರುವ ಶಾಲೆಯ ಪಕ್ಕದ ರಸ್ತೆಯ ಜಂಕ್ಷನ್ ಪಹರೆ ಪಾಯಿಂಟ್‌ನಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ ಭದ್ರತಾ ಸಿಬ್ಬಂದಿ ಎಸ್.ಕೆ.ಪ್ರಭಾಕರ್, ಎರಡು ಚಿರತೆ ರಸ್ತೆಯಲ್ಲಿ ಹಾದು ಹೋಗುತ್ತಿರುವುದನ್ನು ಗಮನಿಸಿದ್ದಾರೆ. ಶಾಲೆಯ ಆಟದ ಮೈದಾ ನದ ಸಮೀಪದ ರಸ್ತೆಯಲ್ಲಿ ಚಿರತೆಗಳು ಕಾಣಿಸಿಕೊಂಡಿದ್ದರಿಂದ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಮುಂಜಾನೆಯೇ ಶಾಲೆಗೆ ರಜೆ ಘೋಷಿಸಿ, ಪೋಷಕರ ವಾಟ್ಸಪ್ ಗ್ರೂಪ್‌ಗೆ ಸಂದೇಶ ಕಳುಹಿಸಲಾಗಿದೆ. ಆದರೂ, ಹಲವು ವಿದ್ಯಾರ್ಥಿಗಳು ಶಾಲೆಗೆ ಆಗಮಿ ಸಿದ್ದರು. ಅಲ್ಲದೆ, ಶಾಲೆಯ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಆಗಮಿ ಸಿದ್ದರು. ಎಲ್ಲಾ ವಿದ್ಯಾರ್ಥಿಗಳನ್ನು ಮನೆಗೆ ವಾಪಸ್ಸು ಹೋಗುವಂತೆ ಸೂಚಿಸಲಾಯಿತು. ತಕ್ಷಣ ಪೋಷಕರು ಶಾಲೆಗೆ ಆಗಮಿಸಿದ ತಮ್ಮ ತಮ್ಮ ಮಕ್ಕಳನ್ನು ಕರೆದೊಯ್ದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಎಸಿಎಫ್ ಲಕ್ಷ್ಮೀಕಾಂತ್, ಆರ್‌ಎಫ್‌ಓ ಸುರೇಂದ್ರ, ಡಿಆರ್‌ಎಫ್ ವೆಂಕಟಾಚಲ ಇನ್ನಿತರರ ತಂಡ, ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿತು. ಶಾಲೆಯ ಪಕ್ಕದ ರಸ್ತೆಯಲ್ಲಿ ದಟ್ಟವಾಗಿ ಬೆಳೆದು ನಿಂತಿರುವ ಪೊದೆ ಸೇರಿದಂತೆ ಅರಣ್ಯದಂತೆ ಬೆಳೆದಿರುವ ಮರಗಳ ನಡುವೆ ಸುಮಾರು ಒಂದು ಗಂಟೆ ಕಾರ್ಯಾಚರಣೆ ನಡೆಸಿದರು. ಆದರೆ, ಚಿರತೆಗಳ ಸುಳಿವೇ ಸಿಗಲಿಲ್ಲ. ಎಲ್ಲಿಯೂ ಚಿರತೆಗಳ ಹೆಜ್ಜೆ ಗುರುತು, ಅವುಗಳ ಮಲ ಸೇರಿದಂತೆ ಯಾವ ಸುಳಿವೂ ದೊರೆಯಲಿಲ್ಲ.

ಬೋನ್, ಕ್ಯಾಮರಾ ಟ್ರಾಪ್ ಅಳವಡಿಕೆ: ಸದ್ಯಕ್ಕೆ ಚಿರತೆಗಳ ಸುಳಿವು ದೊರೆಯದ ಹಿನ್ನೆಲೆಯಲ್ಲಿ ಸಿಎಫ್‌ಟಿಆರ್‌ಐ ಆವರಣದಲ್ಲಿ ಬೋನ್ ಇಡಲು ನಿರ್ಧರಿಸಲಾಗಿದೆ. ಅಲ್ಲದೆ, ಚಿರತೆಗಳು ಓಡಾಡಬಹುದಾದ ಸ್ಥಳ ಗುರುತಿಸಿ, ಕ್ಯಾಮರಾ ಟ್ರಾಪ್ ಅಳವಡಿಸಲು ತೀರ್ಮಾನಿಸಲಾಗಿದೆ. ಎರಡು ದಿನ ಕ್ಯಾಮರಾ ಟ್ರಾಪ್‌ನಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿದ ಬಳಿಕ ಮುಂದಿನ ಕ್ರಮ ಜರುಗಿಸಲು ಅರಣ್ಯ ಸಿಬ್ಬಂದಿ ನಿರ್ಧರಿಸಿದ್ದಾರೆ.

ಪಾಳು ಬಿದ್ದ ಕಟ್ಟಡಗಳಲ್ಲಿ ಅನುಮಾನ: ಸಿಎಫ್‌ಟಿಆರ್‌ಐ ಆವರಣದಲ್ಲಿ ಸಿಬ್ಬಂದಿಗಳಿಗಾಗಿ ನಿರ್ಮಿಸಿರುವ ಸುಮಾರು 30ಕ್ಕೂ ಹೆಚ್ಚು ವಸತಿ ಗೃಹಗಳು ಖಾಲಿಯಿದ್ದು, ಇವುಗಳ ಸುತ್ತಮುತ್ತಲೂ ಗಿಡಗಂಟೆ ಬೆಳೆದುಕೊಂಡಿದೆ. ಅಲ್ಲದೆ, ಕೆಲವು ವಸತಿ ಗೃಹಗಳ ಬಾಗಿಲು ಮುರಿದಿರುವುದರಿಂದ ಚಿರತೆಗಳು, ಇಲ್ಲಿ ಬೀಡು ಬಿಟ್ಟಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಅಲ್ಲದೆ, ಇದುವರೆಗೂ ಸಿಎಫ್‌ಟಿಆರ್‌ಐ ಆವರಣದಲ್ಲಿ ಚಿರತೆಯಿಂದ ಯಾವುದೇ ಪ್ರಾಣಿಗಳು ಬಲಿಯಾಗಿಲ್ಲ. ಎಲ್ಲಿಯೂ ಆತಂಕ ಉಂಟಾಗಿಲ್ಲ. ಈ ಹಿನ್ನೆಲೆಯಲ್ಲಿ ಚಿರತೆಗಳು ಅಲ್ಲಿಯೇ ಬೀಡು ಬಿಟ್ಟಿರಬಹುದು ಎಂಬ ಅನುಮಾನವನ್ನು ಕೆಲವರು ವ್ಯಕ್ತಪಡಿಸಿದ್ದಾರೆ.

ಮತ್ತೆ ಅಧಿಕಾರ ಹಿಡಿಯಲು ಮಠಗಳ ಮೊರೆ!

ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ನಾಳೆಯಿಂದ ಮೂರು ದಿನಗಳ ಕಾಲ ರಾಜ್ಯ ಪ್ರವಾಸ ಕೈಗೊಂಡಿದ್ದು, ಈ ಸಂದರ್ಭದಲ್ಲಿ ಅವರು 15ಕ್ಕೂ ಹೆಚ್ಚು ಮಠಗಳಿಗೆ ಭೇಟಿ ನೀಡುತ್ತಿದ್ದಾರೆ. ಅಷ್ಟೇ ಅಲ್ಲ ಬೂತ್ ಮಟ್ಟದಲ್ಲಿ ಕಾರ್ಯಕರ್ತರ ಸಭೆಗಳನ್ನು ಹಮ್ಮಿಕೊಂಡಿದ್ದಾರೆ. 5 ರಂದು ಮಧ್ಯಾಹ್ನ ಅವರು ತುಮಕೂರಿನಲ್ಲಿ ತುಮಕೂರು ಮತ್ತು ಮಧುಗಿರಿಯ ಶಕ್ತಿ ಕೇಂದ್ರಗಳ ಪ್ರಮುಖರ ಸಭೆಯಲ್ಲಿ ಭಾಗವಹಿಸುವರು. ಬಳಿಕ ಸಿದ್ಧಗಂಗಾ ಮಠಕ್ಕೆ ಭೇಟಿ ಕೊಡಲಿದ್ದಾರೆ. ಸಂಜೆ ಅವರು ಚಿತ್ರದುರ್ಗದಲ್ಲಿ ವೀರ ಮದಕರಿ ನಾಯಕ, ಒನಕೆ ಓಬವ್ವ ಮತ್ತು ಡಾ. ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವರು. ಎಸ್‌ಸಿ, ಎಸ್‌ಟಿ, ಒಬಿಸಿ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಳ್ಳುವರು. ಶ್ರೀ ಮಾದಾರ ಚೆನ್ನಯ್ಯ ಮಠ, ಸಿರಿಗೆರೆ ಶ್ರೀ ತರಳಬಾಳು ಮಠಕ್ಕೆ ಭೇಟಿ ನೀಡಲಿದ್ದಾರೆ.

ಅಗ್ನಿಶಾಮಕ ಸಿಬ್ಬಂದಿಯ ವಸತಿಗೃಹದಲ್ಲಿ ಸಿಲಿಂಡರ್ ಸ್ಫೋಟ: 6 ಮಂದಿಗೆ ಗಾಯ

● ಬನ್ನಿಮಂಟಪದ ಅಗ್ನಿಶಾಮಕ ಠಾಣೆ ಬಳಿಯೇ ಘಟನೆ
● ಗೃಹೋಪಯೋಗಿ ವಸ್ತುಗಳು ಬೆಂಕಿಗಾಹುತಿ





ಮೈಸೂರು, ಜ.4(ಎಂಟಿವೈ)– ಮೈಸೂರಿನ ಬನ್ನಿಮಂಟಪದಲ್ಲಿರುವ ಅಗ್ನಿಶಾಮಕ ಸಿಬ್ಬಂದಿಯ ವಸತಿಗೃಹದಲ್ಲಿ ಅಡುಗೆ ಅನಿಲ(ಎಲ್‌ಪಿಜಿ)ದ ಸಿಲಿಂಡರ್ ಸ್ಫೋಟಿಸಿ 6 ಮಂದಿ ಗಾಯಗೊಂಡಿದ್ದಾರೆ. ಈ ಘಟನೆ ಬುಧವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಬನ್ನಿಮಂಟಪದ ಅಗ್ನಿಶಾಮಕ ಠಾಣೆಯ ಅನತಿ ದೂರದ ಸಿಬ್ಬಂದಿ ಮಹದೇವ್ ಅವರ ವಸತಿ ಗೃಹದಲ್ಲಿ ಸಿಲಿಂಡರ್ ಸ್ಫೋಟಗೊಂಡಿರುವುದು ಅಚ್ಚರಿಗೆ ಕಾರಣವಾಗಿದೆ. ಫೈರ್‌ಮನ್ ಮಹದೇವ ಅವರ ಮನೆಯಲ್ಲಿ ನಾಲ್ವರು ಹಾಗೂ ಪಕ್ಕದ ಮನೆಯ ಇಬ್ಬರು ಗಾಯಗೊಂಡಿದ್ದು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ಘಟನೆ ವಿವರ: ಇಂದು ಬೆಳಗ್ಗೆ 7.05ರಲ್ಲಿ ಸಿಲಿಂಡರ್ ಸ್ಫೋಟ ಪ್ರಕರಣ ನಡೆದಿದೆ. ಬೆಳಗ್ಗೆ ಕಾಫಿ ಮಾಡಲು ಗ್ಯಾಸ್ ಸ್ಟವ್ ಹಚ್ಚಲು ಲೈಟರ್ ಹೊತ್ತಿಸುತ್ತಿದ್ದಂತೆ ಇಡೀ ಮನೆಯಲ್ಲಿ ಬೆಂಕಿ ಆವರಿಸಿದೆ. ಇದೇ ವೇಳೆ ಸಿಲಿಂಡರ್ ಸ್ಫೋಟಗೊಂಡ ಹಿನ್ನೆಲೆಯಲ್ಲಿ ಅಡುಗೆ ಮನೆಯ ಗೋಡೆಯೊಂದು ಛಿದ್ರಗೊಂಡಿದೆ. ಅಲ್ಲದೆ, ಬೆಂಕಿ ಜ್ವಾಲೆಗೆ ಮನೆಯಲ್ಲಿದ್ದ ಪೀಠೋಪಕರಣ, ಹಾಸಿಗೆ ಸೇರಿದಂತೆ ಇನ್ನಿತರ ವಸ್ತುಗಳು ಭಸ್ಮವಾಗಿವೆ.

ಗಾಯಾಳುಗಳಿಗೆ ಚಿಕಿತ್ಸೆ: ಘಟನೆ ಸಂಭವಿಸುತ್ತಿದ್ದಂತೆ ಪಕ್ಕದಲ್ಲೇ ಇರುವ ಅಗ್ನಿಶಾಮಕ ಠಾಣೆಯ ಕರ್ತವ್ಯನಿರತ ಸಿಬ್ಬಂದಿ ಕೂಡಲೇ ದೌಡಾಯಿಸಿ, ತುರ್ತು ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದರಲ್ಲದೆ, ಗಾಯಾಳುಗಳನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಘಟನೆಯಲ್ಲಿ ಗಾಯಗೊಂಡಿದ್ದ ಫೈರ್‌ಮನ್ ಮಹದೇವ(36), ಅವರ ಪತ್ನಿ ಗೀತಾ(32) ಮಕ್ಕಳಾದ ಮೌನಶ್ರೀ (10), ಮಿಥುನ(5) ಹಾಗೂ ಪಕ್ಕದ ಮನೆಯ ಸವಿತಾ ಮತ್ತು ಭಾಗ್ಯಮ್ಮ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಗಾಯಾಳುಗಳು ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಅವರ ಆರೋಗ್ಯ ಸುಧಾರಿಸಿದೆ ಎಂದು ಮೂಲಗಳು ತಿಳಿಸಿವೆ.

ಅನಿಲ ಸೋರಿಕೆಯೇ ಘಟನೆಗೆ ಕಾರಣ: ಬೆಂಕಿ ಹಾಗೂ ಸಿಲಿಂಡರ್ ಸ್ಫೋಟಕ್ಕೆ ಅನಿಲ ಸೋರಿಕೆಯೇ ಕಾರಣ ಎಂಬುದು ಮೇಲ್ನೋಟಕ್ಕೆ ತಿಳಿದು ಬಂದಿದೆ. ರಾತ್ರಿ ಅಡುಗೆ ಮಾಡಿದ ನಂತರ ಸಿಲಿಂಡರ್ ಸರಿಯಾಗಿ ಬಂದ್ ಮಾಡದಿರುವುದು ಇಲ್ಲವೆ ಪೈಪ್‌ನಲ್ಲಿ ಸೋರಿಕೆ ಉಂಟಾಗಿರಬಹುದು ಎಂದು ಶಂಕಿಸಲಾಗಿದೆ. ಅನಿಲ ಸೋರಿಕೆಯಿಂದಾಗಿ ಮನೆಯಲ್ಲಿ ಗ್ಯಾಸ್ ಶೇಖರಣೆಯಾಗಿದ್ದರಿಂದ ಸ್ಟವ್ ಹಚ್ಚುವ ವೇಳೆ ಇಡೀ ಮನೆಗೆ ಬೆಂಕಿ ಆವರಿಸಿದೆ ಎಂದು ಹೇಳಲಾಗಿದೆ. ವಿಷಯ ತಿಳಿದು, ಸ್ಥಳಕ್ಕೆ ಪೊಲೀಸ್ ಆಯುಕ್ತ ರಮೇಶ್, ಡಿಸಿಪಿ ಎಂ.ಮುತ್ತುರಾಜ್ ಭೇಟಿ ನೀಡಿ, ಪರಿಶೀಲಿಸಿದರು. ಎಫ್‌ಎಸ್‌ಎಲ್ ಅಧಿಕಾರಿಗಳ ತಂಡ ಅಗ್ನಿ ಆಕಸ್ಮಿಕಕ್ಕೆ ಕಾರಣ ತಿಳಿಯಲು ಕೆಲವು ವಸ್ತುಗಳ ತುಣುಕನ್ನು ಸಂಗ್ರಹಿಸಿ, ಪರೀಕ್ಷೆಗಾಗಿ ಕೊಂಡೊಯ್ದರು. ಈ ಸಂಬಂಧ ಎನ್.ಆರ್.ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರು ಜಿಪಂ 46 ಕ್ಷೇತ್ರ; ತಾಲೂಕು ಪಂಚಾಯ್ತಿ 160 ಸ್ಥಾನ: ಕ್ಷೇತ್ರ ಪುನರ್ ವಿಂಗಡಣೆ; ಆಕ್ಷೇಪಣೆಗೆ 15 ದಿನ ಅವಕಾಶ

ಮೈಸೂರು, ಜ.4(ಎಂಕೆ)– ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ಸದಸ್ಯರ ಸಂಖ್ಯೆ ಹಾಗೂ ಕ್ಷೇತ್ರಗಳ ಗಡಿ ನಿಗದಿಪಡಿಸಿ ಅಧಿಸೂಚನೆ ಹೊರಡಿಸಿರುವ ರಾಜ್ಯ ಸರ್ಕಾರ, ಮೈಸೂರು ಜಿಲ್ಲೆಯಲ್ಲಿ 46 ಜಿಪಂ ಹಾಗೂ 160 ತಾಪಂ ಸದಸ್ಯ ಸ್ಥಾನಗಳನ್ನು ನಿಗದಿಪಡಿಸಿದೆ.

ಕಳೆದ ಬಾರಿ 42 ಸದಸ್ಯ ಸ್ಥಾನಗಳನ್ನು ಹೊಂದಿದ್ದ ಮೈಸೂರು ಜಿಲ್ಲೆಯಲ್ಲಿ ನಾಲ್ಕು ಹೆಚ್ಚುವರಿ ಕ್ಷೇತ್ರಗಳ ರಚನೆಯಾಗಿದ್ದು, ನಂಜನಗೂಡು ತಾಲೂಕಿನಲ್ಲಿ ಅತೀ ಹೆಚ್ಚು ಕ್ಷೇತ್ರಗಳನ್ನು ನಿಗದಿಪಡಿಸಲಾಗಿದೆ.

ಸರಗೂರು 2, ಕೆ.ಆರ್.ನಗರ 3, ಸಾಲಿಗ್ರಾಮ 4, ಹೆಚ್.ಡಿ.ಕೋಟೆ 4, ಪಿರಿಯಾಪಟ್ಟಣ 6, ಹುಣಸೂರು 6, ಮೈಸೂರು 6, ಟಿ.ನರಸೀಪುರ 6 ಹಾಗೂ ನಂಜನಗೂಡು ತಾಲೂಕಿಗೆ 9 ಸೇರಿ 46 ಜಿಪಂ ಸದಸ್ಯ ಸ್ಥಾನಗಳಿವೆ. ಹಾಗೆಯೇ ಸರಗೂರು 9, ಕೆ.ಆರ್.ನಗರ 9, ಸಾಲಿಗ್ರಾಮ 13, ಹೆಚ್.ಡಿ.ಕೋಟೆ 16, ಪಿರಿಯಾಪಟ್ಟಣ 22, ಹುಣಸೂರು 23, ಮೈಸೂರು 20, ಟಿ.ನರಸೀಪುರ 20 ಹಾಗೂ ನಂಜನಗೂಡು ತಾಲೂಕಿನಲ್ಲಿ 28 ಸೇರಿ 160 ತಾಪಂ ಸದಸ್ಯ ಸ್ಥಾನಗಳಿವೆ.

ಚಾಮುಂಡೇಶ್ವರಿ ದರ್ಶನ ಪಡೆದ ಕ್ರಿಕೆಟ್ ತಾರೆ ರಾಹುಲ್



ಮೈಸೂರು, ಜ.4(ಜಿಎ)– ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್.ರಾಹುಲ್ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದಿದ್ದಾರೆ.

ಬುಧವಾರ ಬೆಳಗ್ಗೆ ಸುಮಾರು 10 ಗಂಟೆಗೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದ ರಾಹುಲ್, ವಿಶೇಷ ಪೂಜೆ ಸಲ್ಲಿಸಿ 20 ನಿಮಿಷಗಳ ಕಾಲ ಚಾಮುಂಡಿ ಸನ್ನಿಧಿಯಲ್ಲೇ ಕಾಲ ಕಳೆದಿದ್ದಾರೆ. ಇದಕ್ಕೂ ಮೊದಲು ಮಲೆಮಹದೇಶ್ವರ ಬೆಟ್ಟಕ್ಕೂ ಭೇಟಿ ನೀಡಿ ಮಹದೇಶ್ವರನ ದರ್ಶನ ಪಡೆದರು. ಭಾರತ–ಶ್ರೀಲಂಕಾ ಟಿ–20 ಸರಣಿಯಿಂದ ಹೊರ ಉಳಿದಿರುವ ರಾಹುಲ್ ವಿಶ್ರಾಂತಿಯಲ್ಲಿದ್ದು, ಏಕದಿನ ಸರಣಿಯಲ್ಲಿ ಭಾಗವಹಿಸಲಿದ್ದಾರೆ. ದೇವಾಲಯದಿಂದ ಹಿಂದಿರುಗುವಾಗ ಅವರ ಅಭಿಮಾನಿಗಳು ಸೆಲ್ಫಿಗೆ ಮುಗಿಬಿದ್ದಿದ್ದಾರೆ.

ಬಡವರ ವಸತಿ ಯೋಜನೆಗೆ ನೀಡುವ ಸಹಾಯಧನ ಹೆಚ್ಚಳ

● ಗ್ರಾಮೀಣರಿಗೆ 1.2 ಲಕ್ಷದಿಂದ ಮೂರು ಲಕ್ಷ; ನಗರ–ಪಟ್ಟಣದವರಿಗೆ 2.70 ಲಕ್ಷದಿಂದ 4 ಲಕ್ಷಕ್ಕೆ ಏರಿಕೆ ● ವಸತಿ ಸಚಿವ ಸೋಮಣ್ಣ ವಿವರಣೆ

ಬೆಂಗಳೂರು, ಜ. 4(ಕೆಎಂಶಿ)– ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಸೂರು ಕಲ್ಪಿಸುವ ಆಶ್ರಯ ಸೇರಿದಂತೆ ವಿವಿಧ ವಸತಿ ಯೋಜನೆಗಳಿಗೆ ನೀಡುವ ಸಹಾಯಧನದ ಮೊತ್ತವನ್ನು ಹೆಚ್ಚಳ ಮಾಡಲು ಸರ್ಕಾರ ಮುಂದಾಗಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ವಸತಿ ಸಚಿವ ವಿ. ಸೋಮಣ್ಣ ಸೂರಿಲ್ಲದವರಿಗೆ ಸೂರು ಕಲ್ಪಿಸುವ ಯೋಜನೆಗೆ ಗ್ರಾಮೀಣ ಭಾಗದಲ್ಲಿ ನೀಡುತ್ತಿದ್ದ ಸಹಾಯಧನದ ಮೊತ್ತವನ್ನು 1.2 ಲಕ್ಷದಿಂದ ಮೂರು ಲಕ್ಷ ರೂ.ಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಇದೇ ರೀತಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ 2.70 ಲಕ್ಷ ದಿಂದ 4 ಲಕ್ಷ ರೂ.ಗಳಿಗೆ ಹೆಚ್ಚಿಸಲು ನಿರ್ಧಾರ ಕೈಗೊಂಡಿದ್ದೇವೆ. ಬಡವರು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡುವ ಹಾಗೂ ಅವರನ್ನು ಸಾಲದ ಹೊರೆಯಿಂದ ಮುಕ್ತ ಮಾಡಲು ಸಹಾಯಧನವನ್ನು ಹೆಚ್ಚಳ ಮಾಡಲು ನಿರ್ಧರಿಸಿದ್ದೇವೆ.

ವಸತಿ ಇಲಾಖೆ ಕೈಗೊಂಡಿರುವ ಈ ನಿರ್ಧಾರವನ್ನು ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮುಂದಿನ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಲಿದ್ದಾರೆ. ಈ ನಿರ್ಧಾರದಿಂದ ಬಡವರು ಅತ್ಯಂತ ಕಡಿಮೆ ಬೆಲೆಯಲ್ಲಿ ಅಂದರೆ 4 ರಿಂದ 5 ಲಕ್ಷ ರೂ. ವೆಚ್ಚದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡರೆ ಅವರು ಸಾಲದ ಹೊರೆಯಿಂದ ದೂರ ಉಳಿದಂತಾಗುತ್ತದೆ.

ಕೇಂದ್ರ ಸರ್ಕಾರ ಎಲ್ಲಾ ವಸತಿ ಯೋಜನೆಗಳಿಗೂ ಒಂದೇ ಮಾದರಿಯಲ್ಲಿ ಸಬ್ಸಿಡಿ ನೀಡುತ್ತದೆ. ಅದೇ ಮಾದರಿಯಲ್ಲಿ ರಾಜ್ಯವು ಜಾರಿಗೆ ತರುತ್ತಿರುವುದರಿಂದ ಬಡವರಲ್ಲೇ ಉಂಟಾಗುತ್ತಿದ್ದ ತಾರತಮ್ಯ ನಿವಾರಿಸಿದಂತಾಗುತ್ತದೆ. ನಗರ ಪಟ್ಟಣಗಳಲ್ಲಿ ವಾಸಿಸುವ ಕೊಳಚೆ ನಿವಾಸಿಗಳಿಗೆ ಮುಂದಿನ ಮಾರ್ಚ್ ಒಳಗಾಗಿ 83 ಸಾವಿರ ಮನೆಗಳನ್ನು ನಿರ್ಮಿಸಿಕೊಡುವುದಾಗಿ ಇದೇ ಸಂದರ್ಭದಲ್ಲಿ ತಿಳಿಸಿದರು. ಕೊಳಚೆ ಪ್ರದೇಶಗಳಲ್ಲಿ 1.86 ಲಕ್ಷ ಮನೆಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ಯೋಜನೆಗೆ ಮೂರು ಸಾವಿರ ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಮನೆಗಳಿಗೆ ತಗಲುವ ವೆಚ್ಚದಲ್ಲಿ ಕೇಂದ್ರ ಸರ್ಕಾರ ಶೇಕಡ 50 ರಷ್ಟು ಪಾಲನ್ನು ನೀಡಿದರೆ, ಉಳಿದ ಪಾಲನ್ನು ರಾಜ್ಯ ಸರ್ಕಾರ ಮತ್ತು ಫಲಾನುಭವಿಗಳಿಂದ ಭರಿಸಲಾಗುವುದು.

ಮೈಸೂರು ಮಿತ್ರ ಗುರುವಾರ 5 ಜನವರಿ 2023

ನನ್ನ ಅವಧಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ

ಸಂವಾದದಲ್ಲಿ ಶಾಸಕ ಅಪ್ಪಚ್ಚುರಂಜನ್ ವಿವರಣೆ



ಮಡಿಕೇರಿ, ಜ.4– ರಾಷ್ಟ್ರದ ಅಭಿವೃದ್ಧಿಯಲ್ಲಿ ಶಿಕ್ಷಣ ಮಹತ್ತರ ಪಾತ್ರ ವಹಿಸುವ ಹಿನ್ನೆಲೆಯಲ್ಲಿ, ನನ್ನ ಅಧಿಕಾರದ ಅವಧಿಯಲ್ಲಿ ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ ಎಂದು ಮಡಿಕೇರಿ ಕ್ಷೇತ್ರದ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ತಿಳಿಸಿದರು.

ಕೊಡಗು ಪತ್ರಕರ್ತರ ಸಂಘ ಮತ್ತು ಕೊಡಗು ಪತ್ರಿಕಾ ಭವನ ಟ್ರಸ್ಟ್‌ನ ಸಂಯುಕ್ತಾಶ್ರಯದಲ್ಲಿ ನಗರದ ಪತ್ರಿಕಾ ಭವನ ಸಭಾಂಗಣದಲ್ಲಿ ಆಯೋಜಿಸಿದ್ದ 'ಸಂವಾದ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಹಿಂದೆ ಮಡಿಕೇರಿ, ಗೋಣಿಕೊಪ್ಪಲು ಮತ್ತು ಸೋಮವಾರಪೇಟೆಗಳಲ್ಲಿ ಮಾತ್ರ ಪದವಿ ಕಾಲೇಜುಗಳಿತ್ತು. ಆದರೆ ನಾನು ಅಧಿಕಾರಕ್ಕೆ ಬಂದ ಮೇಲೆ ಡಿ.ಹೆಚ್. ಶಂಕರಮೂರ್ತಿ ಅವರು ಉನ್ನತ ಶಿಕ್ಷಣ ಸಚಿವರಾಗಿದ್ದ ಅವಧಿಯಲ್ಲಿ 162 ಪ್ರಥಮ ದರ್ಜೆ ಕಾಲೇಜುಗಳನ್ನು ರಾಜ್ಯದ ವಿವಿಧೆಡೆ ಆರಂಭಿಸಲಾಯಿತು. ಅದರ ಫಲ ಸ್ವರೂಪವಾಗಿ ನಾಪೋಕ್ಲು, ವಿರಾಜಪೇಟೆ ಸೇರಿದಂತೆ ಜಿಲ್ಲೆಯ ವಿವಿಧೆಡೆಗಳಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಆರಂಭವಾಗಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲತೆ ದೊರಕಿತೆಂದು ಸಂತಸ ವ್ಯಕ್ತಪಡಿಸಿದರು.

ಭಾರತದ ಮೊದಲ ಮಹಾದಂಡನಾಯಕರಾದ ಫೀ.ಮಾ. ಕೆ.ಎಂ. ಕಾರ್ಯಪ್ಪ, ಜನರಲ್ ತಿಮ್ಮಯ್ಯ ಅವರ ನಾಡಾದ ಕೊಡಗು ಜಿಲ್ಲೆಯಲ್ಲಿ 'ಸೈನಿಕ ಶಾಲೆ'ಯ ಆರಂಭವಾಗಬೇಕೆನ್ನುವ ಚಿಂತನೆಗಳಡಿ ತಾನು ನಡೆಸಿದ ಪ್ರಯತ್ನಗಳಿಂದ, ಅಂದಿನ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ಅವರು ಜಿಲ್ಲೆಗೆ ಸೈನಿಕ ಶಾಲೆಯನ್ನು ಮಂಜೂರು ಮಾಡಿದರು. ಇದರ ನಿರ್ಮಾಣಕ್ಕೆ ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು 5 ಕೋಟಿ ರೂ.ಗಳನ್ನು ಒದಗಿಸಿದ್ದರು. ಬಳಿಕ 45 ಕೋಟಿ ರೂ. ವೆಚ್ಚದಲ್ಲಿ ಸೈನಿಕ ಶಾಲೆ ತಲೆ ಎತ್ತಿದ್ದನ್ನು ಸ್ಮರಿಸಿದ ಅಪ್ಪಚ್ಚು ರಂಜನ್, ಡಿ.ಹೆಚ್.ಶಂಕರಮೂರ್ತಿ ಅವರು ಉನ್ನತ ಶಿಕ್ಷಣ ಸಚಿವರಾಗಿದ್ದ ಅವಧಿಯಲ್ಲಿ ಅವರಿಗೆ ಮನವಿ ಮಾಡಿಕೊಂಡ ಮೇರೆಗೆ ಕುಶಾಲನಗರದಲ್ಲಿ ಪಾಲಿಟೆಕ್ನಿಕ್ ಕಾಲೇಜನ್ನು ಉಳಿಸಿಕೊಂಡು, ನೂತನ ಇಂಜಿನಿಯರ್ ಕಾಲೇಜು ಆರಂಭವಾಗಲು ಸಾಧ್ಯವಾಯಿತು ಎಂದು ಹೇಳಿದರು.

ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಅವಧಿಯಲ್ಲಿ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ವೈದ್ಯಕೀಯ ಕಾಲೇಜು ಆರಂಭಕ್ಕೆ ಅನುಮತಿ ದೊರಕಿದ್ದು, 234 ಕೋಟಿ ವೆಚ್ಚದಲ್ಲಿ ಕಾಲೇಜು ಅಸ್ತಿತ್ವಕ್ಕೆ ಬಂದಿದೆ. ಇತ್ತೀಚೆಗೆ ಚಿಕ್ಕಅಳುವಾರದ ಮಂಗಳೂರು ವಿವಿಯ ಸ್ನಾತಕೋತ್ತರ ಕೇಂದ್ರವನ್ನು ಕೊಡಗು ವಿಶ್ವ ವಿದ್ಯಾನಿಲಯವನ್ನಾಗಿ ಮಾಡಲಾಗಿದೆ. ಈ ಎಲ್ಲಾ ಶಿಕ್ಷಣಕ್ಕೆ ಪೂರಕವಾದ ಕಾರ್ಯಗಳಿಂದ ಜಿಲ್ಲೆಯ ಯುವ ಸಮೂಹ ಉನ್ನತ ಶಿಕ್ಷಣಕ್ಕಾಗಿ ಹೊರ ಜಿಲ್ಲೆಗಳ ಬದಲಾಗಿ, ಜಿಲ್ಲೆಯಲ್ಲೇ ಅದನ್ನು ಪಡೆಯಲು ಸಾಧ್ಯವಾಗಿದೆ ಮತ್ತು ಮಕ್ಕಳಲ್ಲಿ ಉನ್ನತ ಶಿಕ್ಷಣ ಪಡೆಯುವ ಹೊಸ ಬೆಳಕನ್ನು ಕಾಣುವಂತಾಗಿದೆಯೆಂದು ಹರ್ಷ ವ್ಯಕ್ತಪಡಿಸಿದರು.

ಕೊಡಗು ಜಿಲ್ಲೆಗೆ ಕಳೆದ 5 ವರ್ಷಗಳ ಅವಧಿಯಲ್ಲಿ 2 ಸಾವಿರ ಕೋಟಿ ಅನುದಾನ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಬಿಡುಗಡೆಯಾಗಿದೆ. ಹೆಚ್ಚುವರಿ ಅನುದಾನಕ್ಕೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಶಾಸಕ ಅಪ್ಪಚ್ಚು ರಂಜನ್ ಇದೇ ಸಂದರ್ಭ ತಿಳಿಸಿದರು.

ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ. ಮುರಳೀಧರ್ ಮಾತನಾಡಿ, ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಅವರು, 1994ರಲ್ಲಿ ಶಾಸಕರಾಗಿ ಆಯ್ಕೆಯಾದ ಬಳಿಕ ಸಾಕಷ್ಟು ಅಭಿವೃದ್ಧಿ ಕಾರ್ಯಗಳೊಂದಿಗೆ, ಜಿಲ್ಲೆಯ ಜ್ವಲಂತ ಸಮಸ್ಯೆಗಳ ಬಗೆಹರಿಕೆಗೆ ಪ್ರಯತ್ನಗಳನ್ನು ಮಾಡಿದ್ದಾರೆ ಎಂದು ಅಭಿಪ್ರಾಯಿಸಿದರು.

ಕೊಡಗು ಪತ್ರಿಕಾ ಭವನ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ. ಕೇಶವ ಕಾಮತ್ ಮಾತನಾಡಿ, ಇಂತಹ ಸಂವಾದ ಕಾರ್ಯಕ್ರಮಗಳು ಮತ್ತಷ್ಟು ನಡೆಯುವಂತಾಗಲಿ. ಇದರಿಂದ ಅಧಿಕಾರದಲ್ಲಿರುವವರ ತಪ್ಪು ಒಪ್ಪುಗಳ ವಿಮರ್ಶೆ ನಡೆಯುವುದಲ್ಲದೆ, ನಡೆದ ತಪ್ಪನ್ನು ಸರಿಪಡಿಸಿಕೊಳ್ಳಲು, ಒಳ್ಳೆಯ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಿಸಿದರು.

ಮಡಿಕೇರಿ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲರೂ ಕೈಜೋಡಿಸಿ



ಮಡಿಕೇರಿ, ಜ.4– ಇದೇ ಜ.28 ರಂದು ಮಡಿಕೇರಿ ತಾಲೂಕಿನ 11 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬೆಟ್ಟಗೇರಿಯ ಉದಯ ಪ್ರೌಢಶಾಲೆ ಆವರಣದಲ್ಲಿ ನಡೆಸಲು ನಿರ್ಧರಿಸಲಾಗಿದ್ದು, ಆ ನಿಟ್ಟಿನಲ್ಲಿ ನುಡಿ ಜಾತ್ರೆಗೆ ಎಲ್ಲರೂ ಕೈಜೋಡಿಸುವಂತೆ ಶಾಸಕ ಕೆ.ಜಿ.ಬೋಪಯ್ಯ ಕೋರಿದ್ದಾರೆ.

ಬೆಟ್ಟಗೇರಿಯ ಉದಯ ಪ್ರೌಢಶಾಲೆ ಸಭಾಂಗಣದಲ್ಲಿ ಬುಧವಾರ ನಡೆದ ಮಡಿಕೇರಿ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈಗಾಗಲೇ ವಿವಿಧ ಉಪ ಸಮಿತಿಗಳನ್ನು ರಚಿಸಲಾಗಿದ್ದು, ಉಪ ಸಮಿತಿಗಳು ತಮಗೆ ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಸಮ್ಮೇಳನ ಯಶಸ್ಸಿಗೆ ಸಹಕರಿಸುವಂತೆ ಶಾಸಕರು ಮನವಿ ಮಾಡಿದರು.

'ಅತ್ಯಂತ ಕಡಿಮೆ ಖರ್ಚಿನಲ್ಲಿ ಅಕ್ಷರ ಜಾತ್ರೆಯನ್ನು ಯಶಸ್ಸುಗೊಳಿಸಲು ಎಲ್ಲರೂ ಶ್ರಮಿಸಬೇಕು. ಇದೊಂದು ಸರ್ಕಾರಿ ಕಾರ್ಯಕ್ರಮವಾಗಿದ್ದು, ಎಲ್ಲಾ ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಸಾರ್ವಜನಿಕರು ಹೀಗೆ ಎಲ್ಲರೂ ನಾಡು ನುಡಿಗೆ ಕೈ ಜೋಡಿಸುವಂತೆ ಕೋರಿದರು.'

ಕನಿಷ್ಠ 5 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ಸಾಧ್ಯತೆ ಇದ್ದು, ಎಲ್ಲರಿಗೂ ಊಟದ ವ್ಯವಸ್ಥೆ ಮಾಡಬೇಕು ಎಂದು ಅವರು ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ವೇದಿಕೆ, ಸಾಂಸ್ಕೃತಿಕ, ಆಹಾರ, ಮೆರವಣಿಗೆ, ಅಲಂಕಾರ, ಹೀಗೆ ವಿವಿಧ ಉಪ ಸಮಿತಿಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮ ಯಶಸ್ಸಿಗೆ ಕೈಜೋಡಿಸುವಂತೆ ಕೋರಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಕೇಶವ ಕಾಮತ್ ಮಾತನಾಡಿ, ಬೆಟ್ಟಗೇರಿ ಸುತ್ತಮುತ್ತ ಎಲ್ಲಾ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಸೇರಿದಂತೆ ಎಲ್ಲರೂ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ಸಿಗೆ ಶ್ರಮಿಸಬೇಕು ಕೋರಿದರು.

ಕಸಾಪ ತಾಲೂಕು ಘಟಕದ ಅಧ್ಯಕ್ಷ ಅಂಬೆಕಲ್ ನವೀನ್, ಸ್ಮರಣ ಸಂಚಿಕೆ ಸಮಿತಿ ಅಧ್ಯಕ್ಷ ಕುಡೆಕಲ್ ಸಂತೋಷ್, ಪ್ರಮುಖರಾದ ತಳೂರು ಕಿಶೋರ್ ಕುಮಾರ್ ಅವರು ಮಾತನಾಡಿದರು. ಬೆಟ್ಟಗೇರಿ ಗ್ರಾಪಂ ಅಧ್ಯಕ್ಷ ನಾಪಂಡ ರ್‍ಯಾಲಿ ಮಾದಯ್ಯ, ಉಪಾಧ್ಯಕ್ಷ ಕೃಷ್ಣಪ್ಪ, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಮುನೀರ್ ಅಹ್ಮದ್, ತಹಶೀಲ್ದಾರ್ ಪಿ.ಎಸ್. ಮಹೇಶ್, ಡಿವೈಎಸ್‌ಪಿ ಗಜೇಂದ್ರ ಪ್ರಸಾದ್, ತಾಪಂ ಇಒ ಶೇಖರ್, ಪ್ರಮುಖರಾದ ಕೊಡಪಾಲು ಗಣಪತಿ, ಕೋಡಿ ಮೋಟಯ್ಯ, ಬೆಪ್ಪುರನ ಮೇದಪ್ಪ, ಸುನಿಲ್ ಪತ್ರಾವೋ, ನೆರವಂಡ ಉಮೇಶ್, ಇತರರು ಇದ್ದರು.

ವಿಕಲಚೇತನರು ಸರ್ಕಾರದ ಸೌಲಭ್ಯ ಬಳಸಿಕೊಳ್ಳಿ



ವಿರಾಜಪೇಟೆ, ಜ.4– ವಿಕಲಚೇತನರು ಸರಕಾರದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಸಮಾಜದ ಮುಖ್ಯ ವಾಹಿನಿಗೆ ಬರುವಂತಾಗಬೇಕು ಎಂದು ಬಿಟ್ಟಂಗಾಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ಸಿ.ವಿಶ್ವನಾಥ್ ತಿಳಿಸಿದ್ದಾರೆ.

ವಿರಾಜಪೇಟೆ ಬಳಿಯ ಬಿಟ್ಟಂಗಾಲ ಗ್ರಾಮ ಪಂಚಾಯಿತಿ ಬಳಿಯ ವಿಎಸ್‌ಎಸ್‌ಎನ್ ಬ್ಯಾಂಕ್ ಸಭಾಂಗಣದಲ್ಲಿ ಆಯೋಜಿಸಿದ್ದ "ವಿಕಲಚೇತನರ ಸಮನ್ವಯ ಗ್ರಾಮ ಸಭೆ"ಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಸರಕಾರ ವಿಕಲಚೇತನರಿಗೆ ಶೇ. 5ರ ಅನುದಾನದಲ್ಲಿ ಹಲವು ಸೌಲಭ್ಯಗಳನ್ನು ನೀಡುತ್ತಿದೆ ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗಖಾತ್ರಿ ಯೋಜನೆಯಲ್ಲಿ ಸೌಲಭ್ಯಗಳನ್ನು ಪಡೆದುಕೊಂಡು ಸ್ವಉದ್ಯೋಗ ಮೂಲಕ ಮುಂದೆ ಬರಬೇಕು ಎಂದರು.

ಬೋಟೋಳಿ ಗ್ರಾಮ ಪಂಚಾಯಿತಿಯ ಗ್ರಾಮೀಣ ಪುನರ್ ವಸತಿ ಕಾರ್ಯಕರ್ತೆ ಆಯೇಷಾ ಮಾತನಾಡಿ, ಸರಕಾರ ವಿಕಲಚೇತನರಿಗಾಗಿ ವೀಲ್ ಚೇರ್, ದ್ವಿಚಕ್ರ ವಾಹನ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ವಿದ್ಯಾರ್ಥಿವೇತನ, ವೈದ್ಯಕೀಯ ವೆಚ್ಚ ನೀಡುತ್ತಿದೆ. ಕಣ್ಣಿನ ತೊಂದರೆ ಇದ್ದಲ್ಲಿ ವಿರಾಜಪೇಟೆ ಸರಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಹಾಗೂ ಬುದ್ಧಿಮಾಂದ್ಯ ಮಕ್ಕಳು ಮತ್ತು ವೃದ್ಧರಿಗೆ ಪಿಂಚಣಿ ಸೌಲಭ್ಯ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿರುವುದಾಗಿ ತಿಳಿಸಿದರು. ಬಿಟ್ಟಂಗಾಲ ಗ್ರಾಮ ಪಂಚಾಯಿತಿ ಅದ್ಯಕ್ಷೆ ಟಿ.ಆರ್.ರಮ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವ ಮೂಲಕ ವಿಕಲಚೇತನರು ತಮ್ಮ ಜೀವನವನ್ನು ರೂಪಿಸಿಕೊಳ್ಳುವಂತಾಗಬೇಕು ಎಂದರು.. ಬಿಟ್ಟಂಗಾಲ ಸಮುದಾಯ ಆರೋಗ್ಯ ಅಧಿಕಾರಿ ಸಂಗೀತಾ ಮಾತನಾಡಿ ವಿಕಲಚೇತನರಿಗಾಗಿ ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಬಗ್ಗೆ ಮಾಹಿತಿ ನೀಡಿದರು.

ಬಿಟ್ಟಂಗಾಲ ಪಂಚಾಯಿತಿ ಗ್ರಾಮೀಣ ಪುನರ್ ವಸತಿ ಕಾರ್ಯಕರ್ತೆ ಹಸೀನ ಅವರು ಸ್ವಾಗತಿಸಿದರು. ಪಂಚಾಯಿತಿ ಸದಸ್ಯರಾದ ಎಂ.ಸುಬ್ಬಯ್ಯ, ಪದ್ಮಾವತಿ, ಕೆ.ಉತ್ತಪ್ಪ, ಸಿ.ಕಾವೇರಪ್ಪ, ಸಿ.ಬಿ.ಸೋಮಯ್ಯ, ಎನ್.ಬೋಪಣ್ಣ, ಕಾರ್ಯದರ್ಶಿ ಸತೀಶ್ ಮತ್ತು ಮಾಚಯ್ಯ ಉಪಸ್ಥಿತರಿದ್ದರು. ವಿಕಲಚೇತನರು ಮತ್ತು ಪೋಷಕರು ಸಭೆಯಲ್ಲಿ ಭಾಗವಹಿಸಿದ್ದರು.

ನಾಳೆ ಸಾಮೂಹಿಕ ಸತ್ಯನಾರಾಯಣ ಪೂಜೆ

ಮಡಿಕೇರಿ, ಜ.4– ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಜ.6 ರಂದು ಸಂಜೆ 4 ಗಂಟೆಯಿಂದ "ಸಾಮೂಹಿಕ ಸತ್ಯನಾರಾಯಣ" ಪೂಜೆ ನಡೆಯಲಿದೆ.

ಭಕ್ತಾದಿಗಳು ದೇವಾಲಯದಲ್ಲಿ ನಡೆಯುವ "ಸಾಮೂಹಿಕ ಸತ್ಯನಾರಾಯಣ" ಪೂಜೆಯಲ್ಲಿ ಭಾಗವಹಿಸಿ, ಪೂಜೆಯನ್ನು ಯಶಸ್ವಿಗೊಳಿಸುವಂತೆ ಶ್ರೀ ಭಗಂಡೇಶ್ವರ–ತಲಕಾವೇರಿ ಮತ್ತು ಸಮೂಹ ದೇವಾಲಯದ ಪ್ರಕಟಣೆ ತಿಳಿಸಿದೆ.

ಸೀತಾರಾಮ ನಿಧನ



ನಾಪೋಕ್ಲು, ಜ.4– ಬೇತು ಗ್ರಾಮದ ನಿವಾಸಿ ಮುಕ್ಕಾಟಿ ದಿವಂಗತ ಸೋಮಣ್ಣನವರ ಪುತ್ರ ಸೀತಾರಾಮ (78) ಅವರು ಮಂಗಳವಾರ ನಿಧನರಾದರು. ಅಂತ್ಯಕ್ರಿಯೆ ಮೃತರ ಸ್ವಗ್ರಾಮದಲ್ಲಿ ಬುಧವಾರ ನೆರವೇರಿತು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ನರೇನ್ ಕಾರ್ಯಪ್ಪ ಎಸ್‌ಎಂಎ ರಾಷ್ಟ್ರೀಯ ಉಪಾಧ್ಯಕ್ಷ



ಪೊನ್ನಂಪೇಟೆ, ಜ.4– ಜೆಸಿಐ ಭಾರತದ ಅಧೀನದಲ್ಲಿರುವ ಸೀನಿಯರ್ ಮೆಂಬರ್ಸ್ ಅಸೋಸಿಯೇಷನ್ (ಎಸ್.ಎಂ.ಎ.)ನ 2023ನೇ ಸಾಲಿನ ರಾಷ್ಟ್ರೀಯ ಮಂಡಳಿ ಉಪಾಧ್ಯಕ್ಷರಾಗಿ ಕೊಡಗಿನ ಅಜ್ಜಿಕುಟ್ಟೀರ ಎಸ್. ನರೇನ್ ಕಾರ್ಯಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜೆ.ಸಿ.ಐ. ಆಂದೋಲನದಲ್ಲಿ ಹಿರಿಯ ಸದಸ್ಯರ ಸಂಸ್ಥೆ ಎಂದೇ ಕರೆಯಲಾಗುವ ಎಸ್.ಎಂ.ಎ. ಘಟಕಕ್ಕೆ ಕರ್ನಾಟಕದಿಂದ ಆಯ್ಕೆಗೊಂಡಿರುವ ಏಕೈಕ ರಾಷ್ಟ್ರೀಯ ಉಪಾಧ್ಯಕ್ಷರಾದ ಎ.ಎಸ್. ನರೇನ್ ಕಾರ್ಯಪ್ಪ ಅವರು 2022ನೇ ಸಾಲಿನಲ್ಲಿ ರಾಷ್ಟ್ರೀಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

ಇತ್ತೀಚಿಗೆ ನವದೆಹಲಿಯಲ್ಲಿ ನಡೆದ ಎಸ್‌ಎಂಎ ಪ್ರಥಮ ರಾಷ್ಟ್ರೀಯ ಮಹಾಧಿವೇಶನದಲ್ಲಿ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿದ ನರೇನ್ ಕಾರ್ಯಪ್ಪ ಅವರಿಗೆ ದೇಶದ ವಿವಿದೆಡೆಗಳಲ್ಲಿರುವ 5 ಜೇಸಿ ವಲಯದ ಉಸ್ತುವಾರಿಯನ್ನು ವಹಿಸಲಾಗಿದೆ.

ಜೆ.ಸಿ.ಐ. ಪೊನ್ನಂಪೇಟೆ ಗೋಲ್ಡನ್ ಸದಸ್ಯರಾಗುವ ಮೂಲಕ ಜೇಸಿಸ್ ಆಂದೋಲನಕ್ಕೆ ಸೇರ್ಪಡೆಗೊಂಡಿದ್ದ ಇವರು, ಘಟಕಾಧ್ಯಕ್ಷರಾಗಿ, 3 ಬಾರಿ ವಲಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. 2011ರಲ್ಲಿ ದೇಶದಲ್ಲಿ ಅಸ್ತಿತ್ವಕ್ಕೆ ಬಂದ ಎಸ್‌ಎಂಎ ಘಟಕವನ್ನು ರಾಜ್ಯಾದ್ಯಂತ ಸಂಚರಿಸಿ ಸಂಘಟಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಮೂಲತಃ ಕಾಫಿ ಬೆಳೆಗಾರರಾಗಿರುವ ನರೇನ್ ಕಾರ್ಯಪ್ಪ ದಕ್ಷಿಣ ಕೊಡಗಿನ ಬೆಳ್ಳೂರು ಗ್ರಾಮದವರಾಗಿದ್ದು, ಹಿರಿಯ ನಾಯಕರಾಗಿದ್ದ, ಮಾಜಿ ಶಾಸಕ ದಿ. ಎ.ಕೆ. ಸುಬ್ಬಯ್ಯ ಮತ್ತು ಡಾಟಿ ಪೊನ್ನಮ್ಮ ದಂಪತಿಯ ಪುತ್ರ.

ಡಾ.ಎಂ.ಎ.ಕಾರ್ಯಪ್ಪರಿಂದ ಕಿಡ್ನಿ ಆರೋಗ್ಯ ತಪಾಸಣೆ

ಮಡಿಕೇರಿ, ಜ.4– ಅಮೇರಿಕಾದಲ್ಲಿ ವೈದ್ಯಕೀಯ ವೃತ್ತಿಯಲ್ಲಿರುವ ಹೆಸರಾಂತ ಕಿಡ್ನಿ ತಜ್ಞ ವೈದ್ಯರಾದ ಡಾ.ಎಂ.ಎ.ಕಾರ್ಯಪ್ಪ ಅವರು ನಗರದ ಜಿಲ್ಲಾಸ್ಪತ್ರೆಯಲ್ಲಿ ಕಿಡ್ನಿಗೆ ಸಂಬಂಧಿಸಿದಂತೆ ಆರೋಗ್ಯ ತಪಾಸಣೆ ನಡೆಸಿದರು. ನೂರಾರು ರೋಗಿಗಳು ಚಿಕಿತ್ಸೆ ಪಡೆದರು.

ಕಿಡ್ನಿಗೆ ಸಂಬಂಧಿಸಿದಂತೆ ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಹಲವು ಮಾಹಿತಿ ನೀಡಿದರು. ಆರೋಗ್ಯಕ್ಕೆ ಸಂಬಂಧಿಸಿದಂತೆ ವಹಿಸಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಡಾ.ಕಾರ್ಯಪ್ಪ ಅವರು ದೇಶದಲ್ಲಿ ಇರುವ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಂಡು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು ಎಂದರು. ದೇಶದಲ್ಲಿ ಮೂತ್ರಪಿಂಡ ರೋಗಿಗಳ ಸಂಖ್ಯೆ ಹೆಚ್ಚಿದೆ. ಆ ನಿಟ್ಟಿನಲ್ಲಿ ಮೂತ್ರಪಿಂಡಕ್ಕೆ ಸಂಬಂಧಿಸಿದಂತೆ ಹಲವು ಮುನ್ನೆಚ್ಚರಿಕಾ ಕ್ರಮ ವಹಿಸಬೇಕಿದೆ ಎಂದರು.

ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ.ಕಳ್ಳಿಚಂಡ ಕಾರ್ಯಪ್ಪ ಇತರರಿದ್ದರು.

ಕ್ರೀಡೆಯಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ

ಜಿಲ್ಲಾ ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ



ಚಾಮರಾಜನಗರ, ಜ.4– ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ. ಭಾಗವಹಿಸುವುದು ಮುಖ್ಯವಾಗಿರುವುದರಿಂದ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಸಲಹೆ ನೀಡಿದ್ದಾರೆ.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಸರ್ಕಾರಿ ನೌಕರರು ದಿನನಿತ್ಯ ಒತ್ತಡದಿಂದ ಕರ್ತವ್ಯ ನಿರ್ವಹಿಸುವುದರಿಂದ ಕ್ರೀಡೆಯಲ್ಲಿ ಪಾಲ್ಗೊಂಡು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗುವ ನಿಟ್ಟಿನಲ್ಲಿ ಎಲ್ಲಾ ನೌಕರರು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಬೇಕು. ಕ್ರೀಡೆಯಲ್ಲಿ ಸೋಲು ಗೆಲುವು ಸಾಮಾನ್ಯ. ಅದನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾಕೂಟದಲ್ಲಿ ಭಾಗವಹಿಸಿ ಜಿಲ್ಲೆಗೆ ಕೀರ್ತಿ ತರಬೇಕು ಎಂದರು. ಕ್ರೀಡಾಜ್ಯೋತಿ ಸ್ವೀಕರಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಸಿ.ಎಸ್. ಷಡಾಕ್ಷರಿ ಅವರು ಪ್ರತಿವರ್ಷದಂತೆ ಈ ಬಾರಿಯು 2 ದಿನಗಳ ಕಾಲ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದೆ. ಚಾಮರಾಜನಗರ ಸಾಂಸ್ಕೃತಿಕ ಕಲೆಗಳ ತವರೂರು. ಕಲೆ ಸಾಹಿತ್ಯ, ಸಂಸ್ಕೃತಿಯ ಜೊತೆಗೆ ಕ್ರೀಡಾಕೂಟ ಆಯೋಜನೆ ಸಂತಸ ತಂದಿದೆ ಎಂದರು.

ಕ್ರೀಡಾಕೂಟದಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಮಾತನಾಡಿ, ಸರ್ಕಾರಿ ನೌಕರರಿಗೆ ಇದು ಕ್ರೀಡಾ ಉತ್ಸವವಾಗಿದೆ. ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ನೌಕರರು ದೇಹವನ್ನು ಸದೃಢವಾಗಿಟ್ಟುಕೊಳ್ಳಬೇಕು. ನೌಕರರು ಪ್ರತಿದಿನ ಕ್ರೀಡೆಯಲ್ಲಿ ತೊಡಗುವುದರಿಂದ ದೇಹ ಮತ್ತು ಮನಸ್ಸು ಸಮಸ್ಥಿತಿಗೆ ಬರಲಿದೆ. ಕ್ರೀಡಾಕೂಟಕ್ಕೆ ಜಿಲ್ಲಾಡಳಿತ ಅಗತ್ಯ ಸಹಕಾರ ನೀಡಲಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಅವರು ಮಾತನಾಡಿ, ಸರ್ಕಾರಿ ನೌಕರರಿಗೆ ಪ್ರತಿದಿನ ಕಡತ ನಿರ್ವಹಣೆಯಲ್ಲಿಯೇ ಸಮಯ ಕಳೆದುಹೋಗಲಿದೆ. ತಮ್ಮಲ್ಲಿರುವ ಪ್ರತಿಭೆಯನ್ನು ಹೊರಸೂಸಲು ಕ್ರೀಡಾಕೂಟ ಉತ್ತಮ ವೇದಿಕೆಯಾಗಬೇಕು. ಕ್ರೀಡಾಕೂಟದಿಂದ ನೌಕರರಲ್ಲಿ ಸ್ಪರ್ಧಾತ್ಮಕ ಮನೋಭಾವ ಹೆಚ್ಚಾಗಲಿದೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ್, 2 ದಿನಗಳ ಕಾಲ ಆಯೋಜಿಸಲಾಗಿರುವ ಜಿಲ್ಲಾಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ನೌಕರರು ಪಾಲ್ಗೊಂಡು ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕು. ಏಳನೇ ವೇತನ ಆಯೋಗ ರಚನೆ ಸೇರಿದಂತೆ ಸಾಕಷ್ಟು ಯೋಜನೆಗಳನ್ನು ರಾಜ್ಯ ಸರ್ಕಾರ ಜಾರಿಗೆ ತರುವ ಮೂಲಕ ಸರ್ಕಾರಿ ನೌಕರರಿಗೆ ಅನುಕೂಲ ಮಾಡಿಕೊಟ್ಟಿದೆ ಎಂದು ತಿಳಿಸಿದರು.

ಇದೇ ವೇಳೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಸರ್ಕಾರಿ ನೌಕರರ ಮಕ್ಕಳಿಗೆ ನಗದು ಬಹುಮಾನ, ಸ್ಮರಣಿಕೆಯೊಂದಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಗಣ್ಯರು ಕ್ರೀಡಾ ಧ್ವಜಾರೋಹಣ ನೆರವೇರಿಸಿದರು.

ನಗರಸಭೆ ಅಧ್ಯಕ್ಷರಾದ ಸಿ.ಎಂ. ಆಶಾ. ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಪೌರಾಯುಕ್ತರಾದ ರಾಮದಾಸ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಆರ್. ಅನಿತಾ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಹಾಗೂ ತಾಲೂಕು ಶಾಖೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

ಚಿಕ್ಕಲೂರು ಜಾತ್ರೆ: ಪ್ರಾಣಿ ಬಲಿ ನಿಷೇಧ

ಚಾಮರಾಜನಗರ, ಜ.4– ಕೊಳ್ಳೇಗಾಲ ತಾಲೂಕಿನ ಶ್ರೀ ಕ್ಷೇತ್ರ ಚಿಕ್ಕಲೂರು ಹೊಸ ಮಠದಲ್ಲಿ ಜ.6 ರಿಂದ 10ರವರೆಗೆ ನಡೆಯಲಿರುವ ಶ್ರೀ ಘನಲೀಲ ಸಿದ್ದಪ್ಪಾಜಿಯವರ ಜಾತ್ರೆಯಲ್ಲಿ ದೇವಸ್ಥಾನದ ಆವರಣದಲ್ಲಿ ಅಥವಾ ಗ್ರಾಮದ ವ್ಯಾಪ್ತಿಯಲ್ಲಿ ಹಾಗೂ ದೇವಸ್ಥಾನದ ಸುತ್ತಮುತ್ತ ಭಕ್ತಾದಿಗಳು, ಸಾರ್ವಜನಿಕರು ದೇವರ ಹೆಸರಿನಲ್ಲಿ ಯಾವುದೇ ರೀತಿಯ ಪ್ರಾಣಿ, ಪಕ್ಷಿ ಬಲಿ ನೀಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಇಂದು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಪ್ರಾಣಿಬಲಿ ನಿಷೇಧ ಕಾಯ್ದೆ 1959 ಮತ್ತು ನಿಯಮಗಳು 1963 ರನ್ವಯ ದೇವಸ್ಥಾನಗಳಲ್ಲಿ ದೇವರ ಹೆಸರಿನಲ್ಲಿ ಪ್ರಾಣಿಗಳ ಬಲಿ ನೀಡುವುದು ಕಾನೂನಿಗೆ ವಿರೋಧವಾಗಿರುವುದರಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ 1973 ರ ಸಿ.ಆರ್.ಪಿ.ಸಿ.111(1)(3) ರಡಿಯಲ್ಲಿ ಕೊಳ್ಳೇಗಾಲ ತಾಲೂಕಿನ ಶ್ರೀ ಕ್ಷೇತ್ರ ಚಿಕ್ಕಲೂರು ಹೊಸ ಮಠದಲ್ಲಿ ಜ.6 ರಿಂದ 10 ರವರೆಗೆ ನಡೆಯಲಿರುವ ಶ್ರೀ ಘನಲೀಲ ಸಿದ್ದಪ್ಪಾಜಿಯವರ ಜಾತ್ರೆಯಲ್ಲಿ ದೇವಸ್ಥಾನದ ಆವರಣದಲ್ಲಿ ಅಥವಾ ಗ್ರಾಮದ ವ್ಯಾಪ್ತಿಯಲ್ಲಿ ಹಾಗೂ ದೇವಸ್ಥಾನದ ಸುತ್ತಮುತ್ತ ಭಕ್ತಾದಿಗಳು, ಸಾರ್ವಜನಿಕರು ದೇವರ ಹೆಸರಿನಲ್ಲಿ ಯಾವುದೇ ರೀತಿಯ ಪ್ರಾಣಿ, ಪಕ್ಷಿ ಬಲಿ ನೀಡುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ಆದೇಶದಲ್ಲಿ ತಿಳಿಸಿದ್ದಾರೆ.

ಚಾ.ನಗರದಲ್ಲಿ ಬಾಲಕ ನಾಪತ್ತೆ



ಚಾಮರಾಜನಗರ, ಜ.4– ಚಾಮರಾಜನಗರದ ನಿವಾಸಿ ರಿಯಾನ್ ಎಂಬಾತ ಕಾಣೆಯಾಗಿರುವ ಬಗ್ಗೆ ದೂರು ದಾಖಲಾಗಿದೆ.

12 ವರ್ಷದ ರಿಯಾನ್ 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣ, ಕೋಲು ಮುಖ, ತೆಳ್ಳನೆಯ ಶರೀರ ಹೊಂದಿದ್ದು, ಕಾಣೆಯಾದಾಗ ನೇರಳೆ ಬಣ್ಣದ ತುಂಬು ತೋಳಿನ ಶರ್ಟ್, ಬೂದು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಕತ್ತಿನಲ್ಲಿ ಕಬ್ಬಿಣದಂತಿರುವ ಒಂದು ಸರ ಇರುತ್ತದೆ. ಇವನ ಸುಳಿವು ದೊರೆತಲ್ಲಿ ಚಾಮರಾಜನಗರ ಎಸ್.ಪಿ ಕಚೇರಿ ದೂ.ಸಂ. 08226–222383, ಡಿವೈಎಸ್‌ಪಿ ಉಪವಿಭಾಗ ಕಚೇರಿ ದೂ.ಸಂ 08226–222090, ಗ್ರಾಮಾಂತರ ಪೊಲೀಸ್ ಠಾಣೆ ದೂ.ಸಂ. 08226–222092 ಸಂಪರ್ಕಿಸುವಂತೆ ಗ್ರಾಮಾಂತರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿದ್ದಯ್ಯನಪುರದಲ್ಲಿ ಕುಡಿಯುವ ನೀರಿನ ಘಟಕಕ್ಕೆ ಭೂಮಿಪೂಜೆ



ಚಾಮರಾಜನಗರ, ಜ.4– ತಾಲೂಕಿನ ಸಿದ್ದಯ್ಯನಪುರ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್ ಗುದ್ದಲಿಪೂಜೆ ನೆರವೇರಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕೆಆರ್‌ಐಡಿಎಲ್‌ನ ಸಿಎಸ್‌ಆರ್ ಯೋಜನೆಯಡಿಯಲ್ಲಿ ಹಳ್ಳಿಗಳಿಗೆ ಅಗತ್ಯವಿರುವುದನ್ನು ಮಾಡಿಕೊಡಿ ಎಂದು ಹೇಳಿದ್ದರು. ಅದರಂತೆ ನಮ್ಮ ಇಲಾಖೆಯ ವತಿಯಿಂದ ಚಾಮರಾಜನಗರ ತಾಲೂಕಿನ ಸಿದ್ದಯ್ಯಪುರ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ 5 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಸಿಎಸ್‌ಆರ್ ಅನುದಾನದಿಂದ ರಾಜ್ಯದ ಯಾವುದೇ ಮೂಲೆಯಲ್ಲಿ ಅಭಿವೃದ್ಧಿ ಕಾಮಗಾರಿ ಮಾಡಬಹುದು. ಗ್ರಾಮಸ್ಥರು ಉತ್ತಮ ರೀತಿಯಲ್ಲಿ ಶುದ್ಧ ಕುಡಿಯುವ ಘಟಕ ನಿರ್ಮಾಣ ಮಾಡಿಕೊಂಡು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಕುಡಿಯುವ ನೀರಿನ ಘಟಕವನ್ನು ವಿಜಯೇಂದ್ರ ಯಡಿಯೂರಪ್ಪ ಅವರಿಂದ ಉದ್ಘಾಟನೆ ಮಾಡಿಸಲಾಗುವುದು ಎಂದು ಅವರು ಇದೇ ವೇಳೆ ತಿಳಿಸಿದರು.

ಮುಖಂಡ ಶಿವರಾಜ್ ಸಿದ್ದಯ್ಯನಪುರ ಗ್ರಾಮದಲ್ಲಿ ವೇದಿಕೆ ನಿರ್ಮಾಣ ಮಾಡಿಕೊಡಬೇಕು ಎಂದು ಮನವಿ ಮಾಡಿದಾಗ ಮುಂದೆ ನನಗೆ ಸಹಕಾರ ಮಾಡಿ ಆಯ್ಕೆ ಮಾಡಿದರೆ ಒಂದು ವೇದಿಕೆಯಲ್ಲ 4 ವೇದಿಕೆ ಮಾಡಿಕೊಡುತ್ತೇನೆ ಎಂದರು.

ಮುಖಂಡರಾದ ಮೂಡ್ಲುಪುರ ನಂದೀಶ್, ಬಸವಣ್ಣ, ಶಿವರಾಜ್ ಸಿದ್ದಯ್ಯನಪುರ, ಮಹೇಶ್ ಮಾಯಿ. ಯಜಮಾನರಾದ ಮಹದೇವಯ್ಯ, ಪುಟ್ಟಸ್ವಾಮಿ, ಬಸವಣ್ಣ, ಗ್ರಾಪಂ. ಮಂಜು, ರೇಖಾ ಮಹದೇವಸ್ವಾಮಿ, ಸೋಮಣ್ಣ, ಬಸವಣ್ಣ, ಮುಖಂಡ ಗೋವಿಂದರಾಜು, ಪರ್ವತ್ ರಾಜ್, ಶಿವರಾಜ್ ಸಿದ್ದಯ್ಯನಪುರ, ಸಿದ್ದರಾಜು ಇತರರು ಹಾಜರಿದ್ದರು.

ವಿದ್ಯುತ್ ತಗುಲಿ 3 ಎಕರೆ ಕಬ್ಬು ನಾಶ



ಯಳಂದೂರು, ಜ.4– ಚಾಮರಾಜನಗರ ತಾಲೂಕಿನ ಯಲಕ್ಕೂರು ಗ್ರಾಮದ ಗೌರಮ್ಮ ಮಹದೇವಮೂರ್ತಿ ರೈತ ದಂಪತಿ ಮೂರು ಎಕರೆ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿಗೆ ವಿದ್ಯುತ್ ತಂತಿ ತಗುಲಿದ ಪರಿಣಾಮ ಕಬ್ಬು ಸುಟ್ಟು ಸಂಪೂರ್ಣವಾಗಿ ನಾಶವಾಗಿದೆ.

ಈ ಬಗ್ಗೆ ರೈತ ದಂಪತಿ ಗೌರಮ್ಮ ಮಹದೇವಮೂರ್ತಿ ತಮ್ಮ ಮೂರು ಎಕರೆ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿಗೆ ವಿದ್ಯುತ್ ಪ್ರವಹಿಸಿ ಕಬ್ಬು ಸುಟ್ಟು ನಾಶವಾಗಿದ್ದು, ಸರಿಸುಮಾರು ಐದು ಲಕ್ಷಕ್ಕೂ ಅಧಿಕ ಮೊತ್ತದ ನಷ್ಟ ಉಂಟಾಗಿದೆ.

ಈ ಬಗ್ಗೆ ಇಲಾಖೆಯ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ, ತನಿಖೆ ನಡೆಸಿ ತಮಗೆ ಉಂಟಾಗಿರುವ ನಷ್ಟವನ್ನು ಬರಿಸಿ ಕೊಡಬೇಕೆಂದು ಮನವಿ ಮಾಡಿದ್ದಾರೆ.

ಗಂಟೆಗಟ್ಟಲೆ ಕಾದರೂ ಬಾರದ ಬಸ್ಸು: ಪ್ರಯಾಣಿಕರ ಪ್ರತಿಭಟನೆ

ಸಾರಿಗೆ ಅಧಿಕಾರಿಗಳ ವಿರುದ್ಧ ಭಾರೀ ಆಕ್ರೋಶ



ಚಾಮರಾಜನಗರ, ಜ.4– ಪಟ್ಟಣದ ಕೇಂದ್ರ ಸಾರಿಗೆ ಬಸ್ ನಿಲ್ದಾಣದಿಂದ ಕೊಳ್ಳೇಗಾಲ ಮಾರ್ಗವಾಗಿ ಸಂಚರಿಸುವ ಬಸ್ಸಿಗಾಗಿ ಗಂಟೆಗಟ್ಟಲೆ ಕಾದು ಬಸವಳಿದ ಪ್ರಯಾಣಿಕರು ಸಾರಿಗೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದರು.

ನಗರದ ಕೆಎಸ್‌ಆರ್‌ಟಿಎಸ್ ಬಸ್ ನಿಲ್ದಾಣದಲ್ಲಿ ನೂರಾರು ಮಂದಿ ಪ್ರಯಾಣಿಕರು ಸಂತೇಮರಹಳ್ಳಿ, ಯಳಂದೂರು ಮಾರ್ಗದ ಮಧ್ಯದಲ್ಲಿರುವ ಗ್ರಾಮಗಳಿಗೆ ತೆರಳಲು ಬಸ್ಸಿಗಾಗಿ ಕಾದು ಕುಳಿತ್ತಿದ್ದರು. ಸುಮಾರು 5.30ರಿಂದಲೂ ಈ ಮಾರ್ಗಕ್ಕೆ ಒಂದು ಬಸ್ ಬರಲಿಲ್ಲ. 7.30 ರವರೆಗೆ ಕಾದ ಪ್ರಯಾಣಿಕರು ಬೇಸತ್ತು ಸಂಚಾರಿ ನಿಯಂತ್ರಕರನ್ನು ವಿಚಾರಿಸಿದಾಗ ಬೇಜವಾಬ್ದಾರಿ ಉತ್ತರ ನೀಡಿದ್ದಾರೆ. ಇದರಿಂದ ಕೆರಳಿದ ಪ್ರಯಾಣಿಕರು ಸಾರಿಗೆ ಬಸ್ ನಿಲ್ದಾಣದಲ್ಲಿಯೇ ಪ್ರತಿಭಟನೆಗೆ ಇಳಿದರು.

ಕೊಳ್ಳೇಗಾಲ ಮಾರ್ಗದಿಂದ ನಿಯಮಿತವಾಗಿ 15 ನಿಮಿಷಕ್ಕೆ ಒಂದು ಬಸ್ ಬಿಡಬೇಕಾಗುತ್ತೆ. ಆದರೆ, 2 ಗಂಟೆ ಕಾದರೂ ಬಸ್ ಸೌಲಭ್ಯವಿಲ್ಲ. ಮಹಿಳೆಯರು, ಮಕ್ಕಳು ಮತ್ತು ವೃದ್ದರಿಗೆ ಭಾರಿ ತೊಂದರೆಯಾಗಿದೆ. ಸಂಜೆ ಬಸ್ ಇಲ್ಲದೇ ಮನೆಗಳಿಗೆ ತಲುಪುವುದು ಕಷ್ಟವಾಗಿದೆ. ವಿಶೇಷವಾಗಿ ಸರ್ಕಾರಿ ನೌಕರರು, ಕೂಲಿ ಕಾರ್ಮಿಕರು, ವ್ಯಾಪಾರಸ್ಥರು ಹಾಗೂ ರೈತರಿಗೆ ಬಹಳ ತೊಂದರೆಯಾಗುತ್ತದೆ ಎಂದು ಸರ್ಕಾರಿ ನೌಕರರಾದ ಯಮುನಾ, ಶಿವನಾಗಣ್ಣ ದೂರಿದರು.

ಮಾತಿನ ಚಕಮಕಿ: ಸ್ಥಳದಲ್ಲಿದ್ದ ಸಂಚಾರಿ ನಿಯಂತ್ರಕರು ಪ್ರತಿಭಟನಾ ಸ್ಥಳಕ್ಕೆ ಬಂದು ಮಾಂಬಳ್ಳಿಯಲ್ಲಿ ಟ್ರಾಫಿಕ್ ಜಾಮ್ ಆಗಿದೆ. ಕೊಳ್ಳೇಗಾಲದಿಂದ ಬರಬೇಕಾಗಿದ್ದ ಎರಡು ಬಸ್‌ಗಳು ನಿಂತಿವೆ. ಅಲ್ಲಿಂದ ಬಸ್ ಬರುವವರೆಗೆ ನಿಮಗೆ ಇಲ್ಲಿಂದ ಯಾವುದೇ ಬಸ್ ಇಲ್ಲ ಆ ಬಸ್‌ಗಳು ಬರುವವರೆಗೆ ಕಾಯಬೇಕು ಎಂಬ ಬೇಜವಾಬ್ದಾರಿ ಉತ್ತರ ನೀಡಿದಾಗ, ಪ್ರಯಾಣಿಕರು ಹಾಗೂ ಅಧಿಕಾರಿಯ ನಡುವೆ ಮಾತಿನ ಚಕಮಕಿ ನಡೆಯಿತು.

ಇದು ದಿನನಿತ್ಯದ ಸಮಸ್ಯೆಯಾಗುತ್ತಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳು 5 ಗಂಟೆಯ ನಂತರ ಸರಿಯಾದ ಸಮಯಕ್ಕೆ ಬರುತ್ತಿಲ್ಲ. ಇದರಿಂದ ಸರ್ಕಾರಿ ಕೆಲಸ ಮುಗಿಸಿ ಬರುವವರೆಗೆ ತುಂಬ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಹೆಚ್ಚಿನ ಬಸ್ ಸೌಲಭ್ಯವನ್ನು ಕೂಡಲೇ ಕಲ್ಪಿಸಬೇಕು ಎಂದು ಪ್ರಯಾಣಿಕರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಶ್ರೀಧರ್, ಬಸವರಾಜು, ಚರಣ್, ನಿರಂಜನ್, ಸವಿತಾ, ಕವಿತಾ, ನವೀನ್ ಸೇರಿದಂತೆ ನೂರಾರು ಪ್ರಯಾಣಿಕರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಹಲವು ಸಚಿವರ ಸಖ್ಯ

ಜೆ.ಪಿ.ನಗರ, ತಿಲಕ್‌ನಗರ ಸೇರಿದಂತೆ ಹಲವು ಠಾಣೆಗಳಲ್ಲಿ ಇವನ ಮೇಲೆ ಗಂಭೀರ ಪ್ರಕರಣಗಳು ದಾಖಲಾಗಿವೆ. ಇಂತಹ ವ್ಯಕ್ತಿ ಪೊಲೀಸರಿಗೆ ಧಮ್ಕಿ ಹಾಕುತ್ತಾನೆ. ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡುವ ದಂಧೆ ನಡೆಸುತ್ತಾನೆ ಎಂದ ಅವರು, ಡಿವೈಎಸ್‌ಪಿ ಅವರಿಗೆ ತನ್ನನ್ನು 'ಸಾರ್' ಎಂದು ಕರೆಯಬೇಕು ಎಂದು ದಬಾಯಿಸುತ್ತಾನೆ. ಮುಖ್ಯಮಂತ್ರಿಗಳೇ ನನ್ನನ್ನು ಸಾರ್ ಎಂದು ಕರೆಯುತ್ತಾರೆ. ಆಫ್ಟಾಲ್ ಡಿಎಸ್‌ಪಿ ನೀನು ನನ್ನನ್ನು 'ಸಾರ್' ಎಂದು ಕರೆಯುವುದಿಲ್ಲವೇ ಎಂದು ದಬಾಯಿಸುತ್ತಾನೆ. ಯಾರೋ ಇನ್ಸ್‌ಪೆಕ್ಟರ್‌ಗೆ 50 ಲಕ್ಷ ರೂ. ಮಾತನಾಡಿಕೊಂಡು ಕುಂಬಳಗೋಡು ಠಾಣೆಗೆ ವರ್ಗಾವಣೆ ಮಾಡಿಸಿದ್ದಾನಂತೆ. ಅವರು 25 ಲಕ್ಷ ರೂ. ಕೊಟ್ಟು, ಉಳಿದ 25 ಲಕ್ಷ ರೂ. ಕೊಡಬೇಕಾಗಿದೆಯಂತೆ. ಇನ್ಸ್‌ಪೆಕ್ಟರ್‌ಬ್ಬರಿಗೆ ನೆಲಮಂಗಲ ಸಂಚಾರ ಅಥವಾ ದೊಡ್ಡಬಳ್ಳಾಪುರಕ್ಕೆ ಡಿಸೆಂಬರ್‌ನಲ್ಲಿ ಟ್ರಾನ್ಸ್‌ಫರ್ ಮಾಡಿಸುತ್ತೇನೆ ಎಂದು ಹೇಳುತ್ತಾನೆ. ಕುಮಾರ ಕೃಪಾದಲ್ಲಿ ಇದ್ದೀನಿ, ಬಾ ಎಂದು ಡಿವೈಎಸ್‌ಪಿಯನ್ನು ಕರೆಯುತ್ತಾನೆ. ಇದೆಲ್ಲಾ ಆಡಿಯೋ ರೆಕಾರ್ಡ್ ಇದೆ. ಇಂತಹ ವ್ಯಕ್ತಿ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸುತ್ತಾನೆ. ಅವರನ್ನೇ ದಬಾಯಿಸುತ್ತಾನೆ ಎಂದಾದರೆ, ರಾಜ್ಯದಲ್ಲಿ ಪೊಲೀಸರು ಹ್ಯಾಗೆ ಕೆಲಸ ಮಾಡಲು ಸಾಧ್ಯ ಎಂದು ಪ್ರಶ್ನಿಸಿದರು. ನನಗಿರುವ ಮಾಹಿತಿ ಪ್ರಕಾರ ಸ್ಯಾಂಟ್ರೊ ರವಿಯೊಂದಿಗೆ ಕೋಟ್ಯಾಂತರ ರೂ. ವ್ಯವಹಾರ ನಡೆದಿದೆ ಎಂದು ಕುಮಾರಸ್ವಾಮಿ ಹೇಳಿದರು.

ನಾನು ಮಾಹಿತಿ ತರಿಸಿಕೊಂಡಿದ್ದೇನೆ. ಒಂದು ತಿಂಗಳ ಹಿಂದಿನವರೆಗೂ ಸ್ಯಾಂಟ್ರೊ ರವಿ ಕುಮಾರ ಕೃಪಾದಲ್ಲಿ ಇದ್ದುಕೊಂಡು ವ್ಯವಹಾರ ನಡೆಸುತ್ತಿದ್ದ. ಇವನಿಗೆ ಕುಮಾರ ಕೃಪಾದಲ್ಲಿ ಕೊಠಡಿ ಕೊಟ್ಟವರು ಯಾರು? ಕೊಠಡಿ ಕೊಡುವಂತೆ ಶಿಫಾರಸು ಮಾಡಿದವರು ಯಾರು? ಎಂಬುದನ್ನು ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಜನತೆಗೆ ತಿಳಿಸಬೇಕು ಎಂದು ಆಗ್ರಹಿಸಿದರು. ಪೊಲೀಸರಿಂದ ಬಂಧಿಸಲ್ಪಡಬೇಕಾದ ವ್ಯಕ್ತಿ ಸಚಿವರುಗಳ ಜೊತೆ ಫೋಟೋ ತೆಗೆಸಿಕೊಂಡಿದ್ದಾನೆ. ಹಾಗಾದರೆ ಈ ಸಚಿವರಿಗೂ ಅವನಿಗೂ ಏನು ಸಂಬಂಧ ಎಂದು ಪ್ರಶ್ನಿಸಿದ ಅವರು, ಶಿಕ್ಷಣ ಮಂತ್ರಿ ನಾಗೇಶ್ ಅವರೊಂದಿಗೆ ಅದ್ಯಾಗೆ ಫೋಟೋ ತೆಗೆಸಿಕೊಂಡನೋ ಗೊತ್ತಿಲ್ಲ ಎಂದು ಅಚ್ಚರಿ ವ್ಯಕ್ತಪಡಿಸಿದರು.

ದಲಿತ ಕುಟುಂಬದ ಹೆಣ್ಣು ಮಗಳು ಇವನ ಮೇಲೆ ಮೈಸೂರಿನಲ್ಲಿ ಕಂಪ್ಲೇಂಟ್ ಕೊಟ್ಟಿದ್ದಾಳೆ. ಅದು ಎಫ್‌ಐಆರ್ ಆಗಿದೆ. ಒಡನಾಡಿಯವರು ನಿಂತು ಎಫ್‌ಐಆರ್ ಮಾಡಿಸಿದ್ದಾರೆ ಎಂದ ಕುಮಾರಸ್ವಾಮಿ, ಇಂತಹ ನೀಚನ ಹೆಗಲ ಮೇಲೆ ಕೇಸರಿ ಟವಲ್ ಹಾಕಿ ಪಕ್ಷಕ್ಕೆ ಸೇರಿಸಿಕೊಳ್ಳಲೂ ಕೂಡ ಬಿಜೆಪಿಯವರು ನಾಚಿಕೆ ಪಡುವುದಿಲ್ಲ ಎಂದರಲ್ಲದೇ, ನಮ್ಮನ್ನು ಟ್ರೋಲ್ ಮಾಡ್ತಾರಲ್ಲಾ, ಬಿಜೆಪಿ ಸೋಷಿಯಲ್ ಮೀಡಿಯಾದವರು ದಮ್ಮು, ತಾಕತ್ತು ಇದ್ದರೆ ಈ ವಿಷಯವನ್ನು ಟ್ರೋಲ್ ಮಾಡಲಿ ಎಂದು ಸವಾಲು ಹಾಕಿದರು.

ಸ್ಯಾಂಟ್ರೊ ರವಿ ವಿರುದ್ಧ ಕೇಸ್ ದಾಖಲು

ಆದೇ ವರ್ಷ ಮಾರ್ಚ್ 7ರಂದು ಕೆಲಸಕ್ಕೆ ಹಾಜರಾಗಿದ್ದಾಳೆ. ಅಂದು ಮಧ್ಯಾಹ್ನ 12.30ರ ಸುಮಾರಿನಲ್ಲಿ ಆಫೀಸ್ ಬಾಯ್ ಮಧುಸೂದನ್, ಆಕೆಗೆ ಜ್ಯೂಸ್ ನೀಡಿದ್ದಾನೆ. ಅದನ್ನು ಕುಡಿದ ಕೆಲವೇ ನಿಮಿಷಗಳಲ್ಲಿ ಯುವತಿ ಪ್ರಜ್ಞಾಹೀನಳಾಗಿದ್ದು, ಮಧ್ಯಾಹ್ನ 3.30ರ ಸುಮಾರಿನಲ್ಲಿ ಪ್ರಜ್ಞೆ ಬಂದಾಗ ಆಕೆ ನಗ್ನ ಸ್ಥಿತಿಯಲ್ಲಿ ಕಚೇರಿಯ ರೂಂ ಮಂಚದ ಮೇಲೆ ಮಲಗಿದ್ದು, ಪಕ್ಕದಲೇ ಸ್ಯಾಂಟ್ರೊ ರವಿ ಕುಳಿತಿದ್ದ. ಆಕೆಯ ನಗ್ನ ಫೋಟೋಗಳನ್ನು ತೋರಿಸಿದ್ದಲ್ಲದೇ, ಪೊಲೀಸರಿಗೆ ದೂರು ನೀಡಿದರೆ ಕಚೇರಿಯಲ್ಲಿ 10 ಲಕ್ಷ ರೂ. ಕದ್ದಿರುವುದಾಗಿ ಕೇಸ್ ದಾಖಲಿಸುತ್ತೇನೆ ಎಂದು ಬೆದರಿಸಿದ್ದಾನೆ ಎಂದು ಯುವತಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾಳೆ. 2019ರ ಏಪ್ರಿಲ್ ತಿಂಗಳಿನಲ್ಲಿ ಸ್ಯಾಂಟ್ರೊ ರವಿ, ತನ್ನ ಅಣ್ಣ ಎಂದು ಶಶಿಭೂಷಣ್ ಎಂಬ ವಕೀಲರನ್ನು ಪರಿಚಯಿಸಿದ್ದಲ್ಲದೇ, ಶ್ರೀರಾಂಪುರದಲ್ಲಿರುವ ಅವರ ಮನೆಯಲ್ಲೇ ಮೇ 8ರಂದು ಅವರ ಕುಟುಂಬಸ್ಥರ ಸಮ್ಮುಖದಲ್ಲಿ ಯುವತಿಯನ್ನು ಮದುವೆಯಾಗಿದ್ದಾನೆ. ಆದರೆ, ಆಗ ಈ ವಿಚಾರ ತನ್ನ ತಂದೆಗೆ ತಿಳಿದಿರುವುದಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆಕೆ ತಿಳಿಸಿದ್ದಾಳೆ. 2019ರ ಜೂನ್ ತಿಂಗಳ ಒಂದು ದಿನ ತಾನು ಸ್ಯಾಂಟ್ರೊ ರವಿಯ ಮನೆಗೆ ಹೋಗದಿದ್ದಾಗ ಆತ ತಮ್ಮ ತಂದೆ ಮನೆಗೆ ಬಂದು ಅವಾಚ್ಯ ಶಬ್ಧಗಳಿಂದ ಬೈದು, ಜಾತಿ ನಿಂದನೆ ಮಾಡಿದ್ದಾನೆ. ಜುಲೈ ತಿಂಗಳಿನಲ್ಲಿ ತನಗೆ ಲೈಂಗಿಕ ಸೋಂಕು ತಗುಲಿರುವುದು ಸ್ತ್ರೀರೋಗ ತಜ್ಞರಿಂದ ಖಚಿತವಾಗಿದ್ದು, ಸ್ಯಾಂಟ್ರೊ ರವಿಗೆ ಸೋಂಕು ಇರುವ ಮಾಹಿತಿ ಇದ್ದರೂ ಕೂಡ ಅದನ್ನು ಮುಚ್ಚಿಟ್ಟು ಮುನ್ನೆಚ್ಚರಿಕೆ ಕ್ರಮ ವಹಿಸದೇ ಬಲವಂತವಾಗಿ ಲೈಂಗಿಕ ಕ್ರಿಯೆ ನಡೆಸಿದ್ದಾನೆ ಎಂದು ಆರೋಪಿಸಲಾಗಿದೆ.

ಅದೇ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಆತ ತನ್ನನ್ನು ವಿಜಯನಗರದ ಮನೆಯಿಂದ ಓಡಿಸಿದ್ದು, ತವರು ಮನೆಯಲ್ಲಿದ್ದಾಗ ಸ್ಯಾಂಟ್ರೊ ರವಿ ಖಾಸಗಿ ಹೋಟೆಲ್‌ನಲ್ಲಿ ರೂಂ ಬುಕ್ ಮಾಡಿ, ಅಲ್ಲಿಗೆ ಕರೆಸಿಕೊಂಡು ಬಲವಂತವಾಗಿ ಲೈಂಗಿಕ ಕ್ರಿಯೆ ನಡೆಸಿದ್ದಾನೆ. 2020ರ ಮಾರ್ಚ್‌ನಲ್ಲಿ ನಾವಿಬ್ಬರೂ ಕುವೆಂಪುನಗರದ ಅಪಾರ್ಟ್‌ಮೆಂಟ್‌ವೊಂದರಲ್ಲಿ ಒಟ್ಟಿಗೆ ವಾಸಿಸುತ್ತಿದ್ದೆವು. ಆ ವೇಳೆ 10 ಲಕ್ಷ ರೂ. ವರದಕ್ಷಿಣೆ ತರಬೇಕೆಂದು ಒತ್ತಾಯಿಸಿದ್ದಾನೆ. ಅಲ್ಲದೇ, ನಮ್ಮ ತಂದೆಯ ಹೆಸರಿನಲ್ಲಿರುವ ಮನೆಯನ್ನು ತನ್ನ ಹೆಸರಿಗೆ ಸೇಲ್ ಡೀಡ್ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಲ್ಲದೇ, ಮನೆ ಬರೆದು ಕೊಡದೇ ಹೋದರೆ ನಿಮ್ಮ ಮನೆಯಲ್ಲೇ ಡ್ರಗ್ಸ್ ಇಟ್ಟು ಕೇಸ್ ದಾಖಲಿಸುತ್ತೇನೆ. ಕಳ್ಳತನದ ಆರೋಪದಲ್ಲಿ ಜೈಲಿಗೆ ಕಳುಹಿಸುತ್ತೇನೆ ಎಂದು ಬೆದರಿಕೆ ಹಾಕಿದ್ದ ಎಂದು ದೂರಿನಲ್ಲಿ ಹೇಳಲಾಗಿದೆ. 2021ರ ಏಪ್ರಿಲ್, ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ತನ್ನ ಹೆಸರಿನಲ್ಲಿ ಮೈಸೂರಿನ ವಿವಿಧ ಹೋಟೆಲ್‌ಗಳಲ್ಲಿ ರೂಂ ಬುಕ್ ಮಾಡಿದ್ದ ಆತ, ಅಲ್ಲಿ ತನ್ನನ್ನು ಇರಿಸಿಕೊಂಡಿದ್ದ. 2021ರ ನವೆಂಬರ್ 22ರಲ್ಲಿ ನಾವಿಬ್ಬರು ಬೆಂಗಳೂರಿನ ಶೇಷಾದ್ರಿಪುರಂನ ಹೋಟೆಲ್‌ವೊಂದರ ಬಳಿ ಮನೆ ಬಾಡಿಗೆಗೆ ವಾಸವಿದ್ದೆವು ಎಂದು ತಿಳಿಸಿರುವ ಯುವತಿ, ತಾನು ಗರ್ಭಿಣಿಯಾದಾಗ ಆತ ಬಲವಂತವಾಗಿ ಗರ್ಭಪಾತ ಮಾಡಿಸಿದ್ದಾನೆ. ಲೈಂಗಿಕ ಕ್ರಿಯೆ ನಡೆಸುವಾಗ ವಿಕೃತವಾಗಿ ವರ್ತಿಸುತ್ತಿದ್ದ. ನಂತರ ತನ್ನ ಹಾಗೂ ತಂಗಿಯ ಮೇಲೆ ಬೆಂಗಳೂರಿನ ಕಾಟನ್‌ಪೇಟೆ ಠಾಣೆಯಲ್ಲಿ ಸುಳ್ಳು ಕೇಸು ಹಾಕಿಸಿ ಜೈಲಿಗೆ ಕಳುಹಿಸಿದ್ದ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ವಿವಾಹಿತನಾಗಿದ್ದು, ಈ ವಿಚಾರವನ್ನು ಮುಚ್ಚಿಟ್ಟು ನನ್ನನ್ನು ಬಲಾತ್ಕಾರ ಹಾಗೂ ಬ್ಲಾಕ್‌ಮೇಲ್ ಮಾಡಿ 2ನೇ ವಿವಾಹವಾಗಿದ್ದಾನೆ. ಅವರಿಗಿರುವ ಸೋಂಕು ಮುಚ್ಚಿಟ್ಟು ಆ ಸೋಂಕನ್ನು ನನಗೆ ತಗುಲಿಸಿದ್ದಾನೆ. ಜಾತಿ ನಿಂದನೆ ಹಾಗೂ ದೈಹಿಕ ಹಲ್ಲೆ ನಡೆಸಿದ್ದಲ್ಲದೇ, ಮತ್ತೋರ್ವ ವ್ಯಕ್ತಿಯೊಂದಿಗೆ ಲೈಂಗಿಕ ಸಂಪರ್ಕ ಮಾಡುವಂತೆ ಒತ್ತಾಯಿಸಿದ್ದಾನೆ ಎಂದು ಯುವತಿ ನೀಡಿದ ದೂರಿನ ಮೇರೆಗೆ ವರದಕ್ಷಿಣೆ ಕಿರುಕುಳ, ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯಿದೆ, ಐಪಿಸಿ 506, 498ಎ, 504, 376, 270, 313, 323ರಡಿ ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಸಮಗ್ರ ತನಿಖೆಗೆ ದಸಂಸ ಆಗ್ರಹ

ವರ್ತಿಸಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ನ್ಯಾಯಾಲಯದಲ್ಲಿ ನ್ಯಾಯದ ಪರ ವಾದಿಸಿ, ಇಂತಹ ವ್ಯಕ್ತಿಗೆ ಶಿಕ್ಷೆ ಕೊಡಿಸಬೇಕಿದ್ದ ವಕೀಲ ಶಶಿಭೂಷಣ್ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಲಕ್ಷ್ಮೀನಾರಾಯಣ್ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಯಾಂಟ್ರೋ ರವಿಗೆ ಬೆಂಬಲ ನೀಡಿರುವುದು ದಾಖಲೆಗಳು ಹಾಗೂ ಸಂತ್ರಸ್ತೆಯ ಮೂಲಕ ಬಹಿರಂಗಗೊಂಡಿವೆ. ಆದ್ದರಿಂದ ಈ ಪ್ರಕರಣವನ್ನು ಮುಖ್ಯಮಂತ್ರಿ ಗಂಭೀರವಾಗಿ ಪರಿಗಣಿಸಿ ಸಂತ್ರಸ್ತೆಗೆ ನ್ಯಾಯ ಒದಗಿಸಬೇಕು. ಅಪರಾಧಿಗೆ ಶಿಕ್ಷೆಯಾಗುವಂತೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಹಾಗೂ ಈತನಿಗೆ ನೆರವಾಗಿರುವ ಸಚಿವರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.


ಮುಂದೆ ನಾಯಿಮರಿ ತರ ಕೂರುತ್ತೀರಿ...!

ತೋರಿಸುತ್ತವೆ. ಪ್ರತಿಯಾಗಿ ನಾನು ಏನೂ ಹೇಳುವುದಿಲ್ಲ. ನಾಯಿ ಬಹಳ ನಿಯತ್ತಿನ ಪ್ರಾಣಿ, ಜನರಿಗೆ ಬಹಳ ನಿಯತ್ತಿನಿಂದ ಕೆಲಸ ಮಾಡುವ ವ್ಯಕ್ತಿ ನಾನು. ನಾಯಿಯಲ್ಲಿರುವ ನಿಯತ್ತನ್ನು ನನ್ನ ಜೀವನದಲ್ಲಿಯೂ ಅಳವಡಿಸಿಕೊಂಡು ಹೋಗುತ್ತೇನೆ. ಜನರಿಗೆ ಸುಳ್ಳು ಹೇಳುವುದು, ವಂಚನೆ ಮಾಡುವುದು, ಸುಳ್ಳು ಸೌಭಾಗ್ಯಗಳ ಭರವಸೆ ನೀಡುವುದು ಸಿದ್ದರಾಮಯ್ಯನವರು ಸಿಎಂ ಆಗಿದ್ದಾಗ ಮಾಡಿದ ಕೆಲಸಗಳು. ಬಿಜೆಪಿ ಜನರಿಗೆ ಏನು ಮಾಡಿದೆ ಎಂದು ರಾಜ್ಯದ ಜನತೆಗೆ ಗೊತ್ತಿದೆ, ಇದೆಲ್ಲದಕ್ಕೂ ರಾಜ್ಯದ ಜನತೆ ಉತ್ತರಿಸುತ್ತಾರೆ, ಪ್ರಧಾನಿ ಮೋದಿಯವರು ಕಾಮಧೇನುವಿನಂತೆ ಎಂದರು.

ಸಚಿವ ಶ್ರೀರಾಮುಲು ಟೀಕೆ: ಸಿದ್ದರಾಮಯ್ಯ ಹೇಳಿಕೆಗೆ ಸಚಿವ ಶ್ರೀರಾಮುಲು ತಿರುಗೇಟು ಕೊಟ್ಟಿದ್ದಾರೆ. ಸೋನಿಯಾ ಗಾಂಧಿ ಮನೆಯಲ್ಲಿ ಸಿದ್ದರಾಮಯ್ಯ ಇಲಿ, ಬೆಕ್ಕು, ಜಿರಳೆ ಆಗಿರುತ್ತಾರೆ ಎಂದು ನಾನು ಎಂದು ತಿರುಗೇಟು ನೀಡಿದರು.

ಸಿದ್ದರಾಮಯ್ಯ ಸಿಎಂ ಆಗಿದ್ದರು, ಇದೀಗ ವಿಪಕ್ಷ ಪಕ್ಷ ನಾಯಕ ಆಗಿದ್ದಾರೆ. ಇಂತಹ ಉನ್ನತ ಸ್ಥಾನದಲ್ಲಿದ್ದು, ಸಿಎಂ ಸ್ಥಾನದ ವ್ಯಕ್ತಿಯನ್ನು ನಾಯಿ ಹೋಲಿಕೆ ಮಾಡುವುದು ಅವರ ಸಂಸ್ಕೃತಿಯನ್ನು ತೋರಿಸುತ್ತದೆ. ಸಿಎಂಗೆ ಹೀಗೆ ಮಾತನಾಡುವುದು ಎಷ್ಟು ಸರಿ? ಲಘುವಾಗಿ ಮಾತಾಡೋದು ಕಾಂಗ್ರೆಸ್ ಸಂಸ್ಕೃತಿಯನ್ನು ತೋರಿಸುತ್ತದೆ ಎಂದು ಕಿಡಿಕಾರಿದರು. ಸೋನಿಯಾ ಗಾಂಧಿ ಮನೆಯಲ್ಲಿ ಇಲಿ, ಬೆಕ್ಕು ಜಿರಳೆ ಸಿದ್ದರಾಮಯ್ಯ ಇರುತ್ತಾರೆ ಎಂದು ನಾವು ಹೇಳಬಹುದು. ಆದರೆ ನಾವು ಆ ರೀತಿ ಹೇಳುವುದಿಲ್ಲ. ಅದು ನಮ್ಮ ಸಂಸ್ಕೃತಿಯಲ್ಲ. ಸಿಎಂ ಬಗ್ಗೆ ಲಘುವಾಗಿ ಮಾತಾಡೋದು ಸರಿಯಲ್ಲ ಎಂದು ವಾಗ್ದಾಳಿ ನಡೆಸಿದರು.ಸಿಎಂ ಸ್ಥಾನಕ್ಕೆ ಅಗೌರವ ತೋರಿದ ಸಿದ್ದರಾಮಯ್ಯ ಅವರು ಕ್ಷಮೆ ಕೇಳಬೇಕು. ಸಿದ್ದರಾಮಯ್ಯ ಹೇಳಿಕೆ ಬಿಜೆಪಿಯಿಂದ ತೀವ್ರವಾಗಿ ಖಂಡನೆಗೆ ಆಗ್ರಹ ಮಾಡುತ್ತೇನೆ. ಸೋನಿಯಾ ಮುಂದೆ ಸಿದ್ದರಾಮಯ್ಯ ತುಟಿ ಬಿಚ್ಚಲ್ಲ. ನಮ್ಮ ಸಿಎಂ ಪ್ರಧಾನಿ ಮುಂದೆ ಎಲ್ಲವೂ ಮಾತನಾಡುತ್ತಾರೆ ಎಂದರು.

ಎನ್.ಆರ್.ಕ್ಷೇತ್ರದ ಬೂತ್ ವಿಜಯ ಅಭಿಯಾನಕ್ಕೆ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ



ಮೈಸೂರು, ಜ.4(ಎಂಟಿವೈ)– ಮೈಸೂರಿನ ಎನ್.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 'ಬೂತ್ ವಿಜಯ ಅಭಿಯಾನ'ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಚಾಲನೆ ನೀಡಿದರು.

ಮೈಸೂರಿನ ಕ್ಯಾತಮಾರನಹಳ್ಳಿಯಲ್ಲಿ ಆಯೋಜಿಸಿದ್ದ ಬೂತ್ ವಿಜಯ ಅಭಿಯಾನಕ್ಕೆ ನಿಗದಿಗಿಂತ ನಾಲ್ಕು ಗಂಟೆ ಮುನ್ನವೇ ಚಾಲನೆ ನೀಡಿದರು. ವಾಸ್ತವವಾಗಿ ಮಧ್ಯಾಹ್ನ 3 ಗಂಟೆಗೆ ಈ ಕಾರ್ಯಕ್ರಮವಿತ್ತು. ಆದರೆ ಮಧ್ಯಾಹ್ನ 12 ಗಂಟೆ ವೇಳೆಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ಮೈಸೂರಿನ ನರಸಿಂಹರಾಜ ಕ್ಷೇತ್ರದ ವಾರ್ಡ್ ನಂ 30 ರಿಂದ ವಿಜಯ ಸಂಕಲ್ಪ ಆರಂಭವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎನ್.ಆರ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲುವುದು ಖಚಿತ. ಕ್ಷೇತ್ರದಲ್ಲಿ ಬಿಜೆಪಿಗೆ ನೂರಕ್ಕೆ ನೂರರಷ್ಟು ಬೆಂಬಲ ನೀಡಲು ಜನ ಉತ್ಸುಕರಾಗಿದ್ದಾರೆ. ಈ ಬಾರಿ ಕ್ಷೇತ್ರದಲ್ಲಿ ಬಿಜೆಪಿ ಶಾಸಕರು ಆಯ್ಕೆಯಾಗಲಿದ್ದಾರೆ. ಶಾಸಕರ ಆಯ್ಕೆ ಹಿಂದೆ ಕಾರ್ಯಕರ್ತರ ಶ್ರಮ ಅಡಗಿದೆ ಎಂದು ಹೇಳಿದರು.

ಐದು ವರ್ಷದಲ್ಲಿ ಕೇಂದ್ರ ಮತ್ತು ರಾಜ್ಯದ ಅನೇಕ ಯೋಜನೆಗಳನ್ನು ಜಾರಿ ಮಾಡಲಾಗಿದೆ. ಸರ್ಕಾರದ ಸಾಧನೆಗಳನ್ನು ಮನೆಮನೆಗೆ ತಲುಪಿಸಬೇಕು. ಬೂತ್ ಮಟ್ಟದಲ್ಲಿ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಮೈಸೂರು ನಗರ ಜಿಲ್ಲಾಧ್ಯಕ್ಷ ಶ್ರೀವತ್ಸ, ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ಭಾನು ಪ್ರಕಾಶ್, ಮಾಜಿ ಶಾಸಕ ನಂಜುಂಡಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮುಖಂಡರಾದ ಬಿ.ಪಿ.ಮಂಜನಾಥ್, ಹೆಚ್.ಪಿ.ಗಿರಿಧರ್, ಸು.ಮುರುಳಿ, ಡಾ. ಅನಿಲ್ ಥಾಮಸ್, ಮಹೇಂದ್ರ, ಪಾಲಿಕೆ ಸದಸ್ಯ ಸಾತ್ವಿಕ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಬೊಮ್ಮಾಯಿಯವರ ಬಗ್ಗೆ ಸಿದ್ದರಾಮಯ್ಯರ ಹಗುರ ಹೇಳಿಕೆ ಸಲ್ಲದು

ಮೈಸೂರು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಬೇಸರ

ಮೈಸೂರು, ಜ.4(ಎಂಟಿವೈ)– ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಬಗ್ಗೆ ಹಗುರವಾಗಿ ಹೇಳಿಕೆ ನೀಡಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶೋಭೆ ತರುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಉನ್ನತ ಹುದ್ದೆಯಾಗಿರುವ ಮುಖ್ಯಮಂತ್ರಿ ಹುದ್ದೆಗೆ ಗೌರವ ಕೊಡಬೇಕಾದದ್ದು ನಮ್ಮ ಧರ್ಮ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿ ಐದು ವರ್ಷ ಆಡಳಿತ ನಡೆಸಿದ್ದಾರೆ. ಇಂತಹ ವ್ಯಕ್ತಿ ಮತ್ತೊಬ್ಬ ಮುಖ್ಯಮಂತ್ರಿ ವಿರುದ್ಧ ಬಳಸುವ ಪದ ಸರಿಯಾಗಿಲ್ಲ. ಉನ್ನತ ಸ್ಥಾನದಲ್ಲಿರುವವರನ್ನು ಟೀಕೆ ಮಾಡುವಾಗ ಪದ ಬಳಕೆಯ ಮೇಲೆ ನಿಗಾ ಇರಬೇಕು. ಹಗುರವಾಗಿ ಹೇಳಿಕೆ ನೀಡುವುದು ಅವರ ಸ್ಥಾನಕ್ಕೆ ಶೋಭೆ ತರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಹುಲ್ ಗಾಂಧಿ ಅವರು ನಿಮಗಿಂತ ಜ್ಯೂನಿಯರಾ, ಸೀನಿಯರಾ. ರಾಹುಲ್ ಗಾಂಧಿ ಮುಂದೆ ನೀವು ಹೇಗೆ ಮಾತನಾಡುತ್ತೀರಿ, ಅವರ ಮುಂದೆ ಕಾಲ ಮೇಲೆ ಕಾಲು ಹಾಕಿಕೊಂಡು ಕೂತ್ಕೋತಿರೋ ಎಂದು ಪ್ರಶ್ನಿಸಿದರು

ನಮ್ಮ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರ್ನಾಟಕದ ಚಾಣಕ್ಯ. ಕೇಂದ್ರದಲ್ಲಿ ಇರೋದು ನಮ್ಮದೇ ಸರ್ಕಾರ. ಹೀಗಿರುವಾಗ ಹೆದರಿಕೆ ಏಕೆ. ಪ್ರಧಾನಿಗಳಿಗೆ ಏನು ಗೌರವ ಕೊಡಬೇಕು. ಪ್ರಧಾನಿ ಸ್ಥಾನಕ್ಕೆ ಏನು ಗೌರವ ಕೊಡಬೇಕೋ ಅದನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ ಎಂದು ಹೇಳಿದರು.

ಸಿದ್ದರಾಮಯ್ಯ ಈ ಹಿಂದೆ ಚೆನ್ನಾಗಿಯೇ ಇದ್ದರು. ಎರಡು ಬಾರಿ ಕೋವಿಡ್ ಸೋಂಕಿಗೆ ಒಳಗಾದ ಬಳಿಕ ಹೇಗೇಗೋ ಮಾತನಾಡಲಾರಂಭಿಸಿದ್ದಾರೆ. ಇಂಜೆಕ್ಷನ್ ತೆಗೆದುಕೊಳ್ಳಿ ಎಂದು ಹೇಳಿದ್ದೆ. ಯಾಕೋ ಇತ್ತೀಚೆಗೆ ಏನೇನೋ ಮಾತನಾಡುತ್ತೀರಿ, ಬೂಸ್ಟರ್ ಡೋಸ್ ತೆಗೆದುಕೊಳ್ಳಿ ಸಿದ್ದರಾಮಯ್ಯ ಅವರೇ ಎಂದು ಹೇಳಿದೆ. ಡಾ.ಸುಧಾಕರ್ ಅವರಿಗೆ ಹೇಳಿ ಡೋಸ್ ಮನೆಗೆ ತಲುಪಿಸುವ ಕೆಲಸ ಮಾಡಲಾಗುವುದು ಎಂದು ವ್ಯಂಗ್ಯವಾಡಿದರು.

ಮೈಗ್ರಾಪ ಮಾಸಿಕ ಸಭೆಯಲ್ಲಿ ಪಾರಂಪರಿಕ ಕಟ್ಟಡಗಳ ಪ್ರಸ್ತಾಪ

ಮೈಸೂರು, ಜ. 4–ಮೈಸೂರು ಗ್ರಾಹಕ ಪರಿಷತ್ (ಮೈಗ್ರಾಪ) ಮಾಸಿಕ ಸಭೆ ಜ. 8 (ಭಾನುವಾರ) ಸಂಜೆ 4.30ಕ್ಕೆ ಮೈಸೂರಿನ ಯಾದವಗಿರಿಯ ವಿವೇಕಾನಂದ ರಸ್ತೆ ನಂ.6/1 ಇಲ್ಲಿ ನಡೆಯಲಿದೆ. ಈ ತಿಂಗಳ ಮಾಸಿಕ ಸಭೆಯಲ್ಲಿ ಮೈಸೂರಿನ ಪಾರಂಪರಿಕ ಕಟ್ಟಡಗಳ ರಕ್ಷಣೆಯಲ್ಲಿ ನಾಗರಿಕರ ಪಾತ್ರದ ಕುರಿತು ಚರ್ಚಿಸಲಾಗುತ್ತಿದೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು, ಜ.4– ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ನಾಗನಹಳ್ಳಿ, ಸಿದ್ದಲಿಂಗಪುರ, ಲಕ್ಷ್ಮೀಪುರ, ಕೆ.ಆರ್.ಮಿಲ್, ಕಳಸ್ತವಾಡಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳ ವಿದ್ಯುತ್ ಸರಬರಾಜಿನಲ್ಲಿ ಜ.5ರ ಮಧ್ಯಾಹ್ನ 2 ರಿಂದ ಸಂಜೆ 5.30 ಗಂಟೆಯವರೆಗೆ ವ್ಯತ್ಯಯವಾಗಲಿದೆ.

'ಸಾಂಬಶಿವ ಪ್ರಹಸನ' ನಾಟಕ ತಿರುಚಿ ಪ್ರದರ್ಶನ ಆರೋಪ; ಕ್ರಮಕ್ಕೆ ಒತ್ತಾಯ

ವಾರದೊಳಗೆ ಕ್ರಮ ವಹಿಸದಿದ್ದರೆ ರಂಗಾಯಣಕ್ಕೆ ಮುತ್ತಿಗೆ; ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ

ಮೈಸೂರು,ಜ.4(ಪಿಎಂ)– ಮೈಸೂರು ರಂಗಾಯಣದಲ್ಲಿ ಇತ್ತೀಚೆಗೆ 'ಸಾಂಬಶಿವ ಪ್ರಹಸನ' ನಾಟಕದ ಕಥೆಯನ್ನು ತಿರುಚಿ ಪ್ರದರ್ಶಿಸುವ ಮೂಲಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿದ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ವಾರದೊಳಗೆ ಸದರಿ ನಾಟಕ ಪ್ರದರ್ಶನಕ್ಕೆ ಸಂಬಂಧಿಸಿದ ಎಲ್ಲರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಾರದೊಳಗೆ ಅಡ್ಡಂಡ ಸಿ.ಕಾರ್ಯಪ್ಪ ಅವರನ್ನು ರಂಗಾಯಣ ನಿರ್ದೇಶಕ ಸ್ಥಾನದಿಂದ ವಜಾಗೊಳಿಸಿ, ಸದರಿ ನಾಟಕದ ನಿರ್ದೇಶಕ ಕಾರ್ತಿಕ್ ಉಪಮನ್ಯ ಹಾಗೂ ಸಂಬಂಧಿಸಿದ ರಂಗಾಯಣದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲವಾದರೆ ಸಾವಿರಾರು ಸಂಖ್ಯೆಯಲ್ಲಿ ರಂಗಾಯಣಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ಹೋರಾಟ ಸಂಬಂಧ ಜ.7ರಂದು ಬೆಳಗ್ಗೆ 10.30ಕ್ಕೆ ಪುರಭವನದಲ್ಲಿ ಸಭೆ ಹಮ್ಮಿಕೊಳ್ಳಲಾಗಿದೆ. ಈ ಸಭೆಗೆ ಎಲ್ಲಾ ಪಕ್ಷಗಳು, ಸಂಘ–ಸಂಸ್ಥೆಗಳ ಮುಖಂಡರನ್ನು ಆಹ್ವಾನಿಸಲಾಗುವುದು. ಬಿಜೆಪಿ ಮುಖಂಡರಿಗೂ ಆಹ್ವಾನ ನೀಡಲಿದ್ದೇವೆ. ರಂಗಾಯಣ ಈಗ ಆರ್‌ಎಸ್‌ಎಸ್ ಮತ್ತು ಬಿಜೆಪಿ ತಾಣವಾಗಿ ಮಾರ್ಪಟ್ಟಿದೆ ಎಂದು ದೂರಿದರು. ಹೀಗೆ ನಾಟಕ ತಿರುಚಿರುವುದು ಆರ್‌ಎಸ್‌ಎಸ್ ಮತ್ತು ಬಿಜೆಪಿಯವರ ಕುತಂತ್ರವಾಗಿದೆ. ಚುನಾವಣಾ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾರ್ಯಗಳ ಮುಖೇನ ಜನರ ಬಳಿಗೆ ಹೋಗಲಾಗದೇ ಇಂತಹ ಕೀಳು ಮಟ್ಟಕ್ಕೆ ಇವರು ಇಳಿದಿದ್ದಾರೆ. ಸಾಂಬಶಿವ ಪ್ರಹಸನ ನಾಟಕದ ಕರ್ತೃಗಳೂ ಆದ ಜ್ಞಾನಪೀಠ ಪುರಸ್ಕೃತ ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ ಅವರೂ ತಮ್ಮ ನಾಟಕ ತಿರುಚಿ ಪ್ರದರ್ಶಿಸಿರುವ ಬಗ್ಗೆ ಕ್ರಮ ವಹಿಸಲು ನಗರ ಪೊಲೀಸ್ ಆಯುಕ್ತರಿಗೆ ಪತ್ರ ಮುಖೇನ ದೂರು ನೀಡಿದ್ದಾರೆ ಎಂದು ತಿಳಿಸಿದರು.

ಟಿಕೆಟ್‌ಗೆ ಮನವಿ: ಉಪ್ಪಾರ ಸಮುದಾಯದ ಮುಖಂಡ ಹೆಚ್.ಎನ್.ವಿಜಯ ಕುಮಾರ್ ಅವರಿಗೆ ಅರಕಲಗೂಡು ಕ್ಷೇತ್ರದಿಂದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಟಿಕೆಟ್ ನೀಡಬೇಕೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದರು. ಅಲ್ಲದೆ, ಲೋಕಸಭೆ, ವಿಧಾನ ಸಭೆಗಳಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡಬೇಕೆಂದು ಆಗ್ರಹಿಸಿದರು. ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಿಲ್ಲಾಧ್ಯಕ್ಷ ಡಿ.ನಾಗಭೂಷಣ್, ವಿವಿಧ ಹಿಂದುಳಿದ ಸಮುದಾಯಗಳ ಮುಖಂಡರಾದ ಯೋಗೇಶ್ ಉಪ್ಪಾರ್, ರವಿನಂದನ್, ಲೋಕೇಶ್‌ಕುಮಾರ್ ಮಾದಾಪುರ, ಮೈಸೂರು ಬಸವಣ್ಣ ಮತ್ತಿತರರು ಗೋಷ್ಠಿಯಲ್ಲಿದ್ದರು.

ಅಂಧ ಮಕ್ಕಳ ಶ್ರೇಯೋಭಿವೃದ್ಧಿಗೆ ಅಗತ್ಯ ಸೌಲಭ್ಯ

ಅಂಧ ಮಕ್ಕಳ ದಿನಾಚರಣೆ ಉದ್ಘಾಟಿಸಿ ಡಾ.ಕೆ.ವಿ.ರಾಜೇಂದ್ರ

ಮೈಸೂರು, ಜ.4– ಅಂಧ ಮಕ್ಕಳ ಶ್ರೇಯೋಭಿವೃದ್ಧಿಗೆ ಅಗತ್ಯ ಸೌಲಭ್ಯಗಳನ್ನು ಜಿಲ್ಲಾಡಳಿತದ ವತಿಯಿಂದ ಕಲ್ಪಿಸಲಾಗುವುದು. ಯಾವುದೇ ಕುಂದು ಕೊರತೆ ಹಾಗೂ ಸಮಸ್ಯೆಗಳಿದ್ದಲ್ಲಿ ನೇರವಾಗಿ ಜಿಲ್ಲಾಡಳಿತ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಜಿಲ್ಲಾಧಿ ಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.



ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ವತಿಯಿಂದ ನಗರದ ಅಂಧ ಮಕ್ಕಳ ಸರ್ಕಾರಿ ಪಾಠಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂಧ ಮಕ್ಕಳ ದಿನಾಚರಣೆಯನ್ನು ಉದ್ಘಾಟಿಸಿ, ಮಾತನಾಡಿದರು. ಅಂಧ ಮಕ್ಕಳು ಬ್ಯಾಂಡ್‌ಸೆಟ್ ಬಾರಿಸುವ ಮೂಲಕ ಜಿಲ್ಲಾಧಿಕಾರಿಗಳನ್ನು ಬರಮಾಡಿಕೊಂಡರು. ಲೂಯಿ ಬ್ರೈಲ್ ಅವರು ಇತರರಿಗೆ ಮಾದರಿಯಾಗಿ ಬದುಕಿದವರು. ಅವರ ಜೀವನವು ಅವಿಸ್ಮರಣೀಯವಾಗಿದೆ. ಅದೇ ರೀತಿ ನಿಮ್ಮಲ್ಲಿರುವ ಯಾವುದೇ ಕೊರತೆ ಗಳನ್ನು ಅನ್ಯಥಾ ಭಾವಿಸದೆ ಜೀವನದಲ್ಲಿ ನೀವು ಕೂಡ ಸಾಧಿಸಬೇಕು. ನೀವು ಕೂಡ ಮುಂದಿನ ಮಕ್ಕಳಿಗೆ ಆಶಾಕಿರಣವಾಗಿರಬೇಕು. ಅಂಧ ಮಕ್ಕಳಿಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳು ಅಥವಾ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಜಿಲ್ಲಾಡಳಿತ ವತಿಯಿಂದ ನಡೆಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಅಧೀಕ್ಷಕ ಸತೀಶ್, ಜಿಲ್ಲಾ ಗ್ರಾಮೀಣ, ಶಿಶು ಕಲ್ಯಾಣ ಅಧಿಕಾರಿಗಳು ಹಾಗೂ ತರಬೇತಿ ಕೇಂದ್ರದ ಉಪನಿರ್ದೇಶಕಿ ಮಂಜುಳಾ ಪಾಟೀಲ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮಾಲಿನಿ, ಜಿಲ್ಲಾ ನಿವೃತ್ತ ಅಂಗವಿಕಲ ಕಲ್ಯಾಣಾಧಿಕಾರಿ ಬಲರಾಮ್ ಮತ್ತು ಶಿಕ್ಷಕ ವರ್ಗ ಹಾಗೂ ಪೋಷಕರು ಭಾಗವಹಿಸಿದ್ದರು.

ಸಾಧಕರಿಗೆ ಪ್ರಶಸ್ತಿ, ಸನ್ಮಾನಗಳು ಸ್ಫೂರ್ತಿದಾಯಕ

ಮೈಸೂರು, ಜ. 4– ಪ್ರಶಸ್ತಿ ಮತ್ತು ಸನ್ಮಾನಗಳು ಸಾಧಕರಿಗೆ ಸ್ಫೂರ್ತಿಯಾಗಿ ಮತ್ತಷ್ಟು ಕೆಲಸ ಮಾಡಲು ಕ್ರಿಯಾಶೀಲಗೊಳಿಸುತ್ತವೆ ಎಂದು ಬೀದರ್ ವಚನ ಟ್ರೇಡಿಂಗ್ ಸಲ್ಯೂಷನ್ ವ್ಯವಸ್ಥಾಪಕ ಅಲ್ಲಮಪ್ರಭು ನಾವದಗೇರೆ ಹೇಳಿದರು.



ಶರಣು ವಿಶ್ವವಚನ ಫೌಂಡೇಷನ್ ಮೈಸೂರಿನ ಹೊಸಮಠದ ನಟರಾಜ ಸಭಾಭವನದಲ್ಲಿ ಆಯೋಜಿಸಿದ್ದ ವಚನ ಕೋಗಿಲೆ, ಕಾಯಕಯೋಗಿ ಮತ್ತು ಕಾಯಕರತ್ನ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳನ್ನು ಒಂದು ಕಡೆ ಕಲೆ ಹಾಕಿ ವಿವಿಧ ಪ್ರಶಸ್ತಿಗಳನ್ನು ನೀಡಿ ಪ್ರೋತ್ಸಾಹಿಸುತ್ತಿರುವ ಶರಣು ವಿಶ್ವವಚನ ಫೌಂಡೇಷನ್ ಕಾರ್ಯ ಸ್ತುತ್ಯಾರ್ಹವಾದುದು. ಬೆಳಗಾವಿಯಿಂದ ಚಾಮರಾಜನಗರದವರೆಗಿನ ಎಲ್ಲಾ ಜಿಲ್ಲೆಗಳ ಸಾಧಕರು ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಹೆಮ್ಮೆಯ ವಿಷಯ ಎಂದರು.

ಕುದೇರು ಮಠದ ಶ್ರೀ ಗುರುಶಾಂತಸ್ವಾಮಿಗಳು ಮಾತನಾಡಿ, ಬಸವಣ್ಣ ಎಂದರೆ ಎತ್ತು ಎಂದು ತಿಳಿದುಕೊಂಡಿದ್ದ ಜನರಿಗೆ ಬಸವಣ್ಣ ವ್ಯಕ್ತಿ ರೂಪದ ಒಂದು ದಿವ್ಯ ಶಕ್ತಿ ಎಂದು ಮನವರಿಕೆ ಮಾಡಿಕೊಟ್ಟವರು ಲಿಂಗಾನಂದಸ್ವಾಮಿಗಳು. ಅವರ ಪ್ರವಚನದಿಂದ ವಚನ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡುವ ಪ್ರವೃತ್ತಿ ಎಲ್ಲರಿಗೂ ಹೆಚ್ಚಾಯಿತು ಎಂದರು. ನಂತರ ಮೈಸೂರಿನ ಸರಸ್ವತಿ ರಾಮಣ್ಣ, ಬೆಳಗಾವಿಯ ವಿದ್ಯಾ ಸೋಮಶೇಖರ್ ಮಗದುಮ್ಮ, ಕೊಪ್ಪಳದ ವಿಜಯಲಕ್ಷ್ಮಿ ಈಶ್ವರ ಲಿಂಗಾಯತರವರಿಗೆ ವಚನ ಕೋಗಿಲೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿಶ್ರಾಂತ ಹೈಕೋರ್ಟ್ ನ್ಯಾಯಾಧೀಶ ಅರಳಿ ನಾಗರಾಜ, ಎಸ್‌ಎಂಪಿ ಫೌಂಡೇಷನ್ ಅಧ್ಯಕ್ಷ ಶಿವಪ್ರಕಾಶ್, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕರಾದ ವಚನ ಕುಮಾರಸ್ವಾಮಿ, ರೂಪ ಕುಮಾರಸ್ವಾಮಿ, ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ವಾಜಂತ್ರಿ, ಅಂತರ್ಜಾಲ ಸಂಚಾಲಕ ಪಿ.ವಿ. ರುದ್ರೇಶ್, ಹಾದಿಕೆರೆ ಮಮತ, ದಿವ್ಯ, ಜ್ಯೋತಿ ಜಗದೀಶ್, ವಚನ ಉಪಸ್ಥಿತರಿದ್ದರು.

ನಮ್ಮ ಮೈಸೂರು ಸೆಲ್ಫಿ ಸ್ಪಾಟ್ ಈಗ ಡರ್ಟಿ ಸ್ಪಾಟಾಗಿದೆ!

ನಗರ ಪಾಲಿಕೆ ಬೇಜವಬ್ದಾರಿಗೆ ಮತ್ತೊಂದು ನಿದರ್ಶನ

ಮೈಸೂರು, ಜ.4(ಜಿಎ)–ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ಸರ್ಕಲ್)ದಲ್ಲಿ ಪರಂಪರೆ ಜೊತೆಗೆ ಸ್ವಚ್ಛತೆ ಸಂದೇಶ ಸಾರಬೇಕಿದ್ದ 'ನಮ್ಮ ಮೈಸೂರು ಸೆಲ್ಫೀ ಸ್ಪಾಟ್' ಸೂಕ್ತ ನಿರ್ವಹಣೆ ಇಲ್ಲದೆ ಶೋಚನೀಯ ಸ್ಥಿತಿ ತಲುಪಿದೆ. ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಜಾಗೃತಿ ಸಾರುವ ಸಲುವಾಗಿ ಮೈಸೂರು ಮಹಾನಗರ ಪಾಲಿಕೆ ಮತ್ತು ನಮ್ಮ ಮೈಸೂರು ಫೌಂಡೇಷನ್ ಸಹಯೋಗದೊಂದಿಗೆ ನಿರ್ಮಾಣಗೊಂಡಿದ್ದ ಸೆಲ್ಫಿ ಸ್ಪಾಟ್‌ನಲ್ಲಿಯೇ ಸ್ವಚ್ಛತೆ ಇಲ್ಲದೆ ಕಸದ ತೊಟ್ಟಿ ನಿರ್ಮಾಣವಾಗಿದೆ.

ಕುಮ್ಕಿ ಆನೆಗಳ ಮಧ್ಯೆ ಅಂಬಾರಿ ಹೊತ್ತು ಮೆರವಣಿಗೆಗೆ ಸಜ್ಜಾಗಿ ನಿಂತಿರುವ ಅರ್ಜುನ. ಜುಳು ಜುಳು ಹರಿಯುತ್ತಿರುವ ಜಲಧಾರೆ ನಡುವೆ ಸ್ವಚ್ಛಂದವಾಗಿ ತೇಲುತ್ತಿರುವ ಹಂಸಪಕ್ಷಿಗಳು. ಪಕ್ಕದಲ್ಲೇ ಸ್ವಚ್ಛಂದವಾಗಿ ವಿಹರಿಸುತ್ತಿರುವ ಸುಂದರ ಜಿಂಕೆ. ಸ್ವಚ್ಛತೆ ಸಂದೇಶ ಸಾರುತ್ತಿರುವ ಮಹಾತ್ಮ ಗಾಂಧಿ ಮನೋಹರ ದೃಶ್ಯಗಳನ್ನೊಳಗೊಂಡ 'ನಮ್ಮ ಮೈಸೂರು ಸೆಲ್ಫೀ ಸ್ಪಾಟ್' ಅನ್ನು

> ನಿರ್ವಹಣೆ ಮಾಡಲು ನಾವು ಸಿದ್ಧರಿದ್ದೇವೆ. ಆದರೆ, ಅದಕ್ಕೆ ಪಾಲಿಕೆ ಅಧಿಕಾರಿಗಳು ಸಹಕಾರ ನೀಡಲಿಲ್ಲ. ಈ ಸಂಬಂಧ ಅನೇಕ ಬಾರಿ ಅವರ ಗಮನಕ್ಕೆ ತಂದರು ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಬೇಸರಗೊಂಡ ನಮ್ಮ ಟ್ರಸ್ಟಿಗಳು ಇದರ ನಿರ್ವಹಣೆಯನ್ನು ಕೈಬಿಟ್ಟಿದ್ದಾರೆ. ಭದ್ರತಾ ಸಿಬ್ಬಂದಿ ಇಲ್ಲದ ಕಾರಣ ಕೆಲ ವಿದ್ಯುತ್ ಬಲ್ಬುಗಳು ಹಾಗೂ ಝರಿಗೆ ಅಳವಡಿಸಿದ್ದ ಮೋಟಾರ್ ಅನ್ನು ಕಿಡಿಗೇಡಿಗಳು ಕದ್ದಿದ್ದಾರೆ. ನಾವು ಒಬ್ಬರೇ ನಿರ್ವಹಣೆ ಮಾಡಲು ಸಾಧ್ಯವಿಲ್ಲ. ಪಾಲಿಕೆ ಅಧಿಕಾರಿಗಳ ಸಹಕಾರ ಬಹಳ ಮುಖ್ಯ. –ದಶರಥ, ಅಧ್ಯಕ್ಷ, ನಮ್ಮ ಮೈಸೂರು ಫೌಂಡೇಶನ್



2018ರ ದಸರಾ ಮಹೋತ್ಸವದ ಸಂದರ್ಭದಲ್ಲಿ ಅಂದಿನ ಉನ್ನತ ಶಿಕ್ಷಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಜಿ.ಟಿ. ದೇವೇಗೌಡರು ಉದ್ಘಾಟಿಸಿ, ಇಲ್ಲಿನ ಸೊಬಗನ್ನು ಕಣ್ತುಂಬಿಕೊಂಡು ಒಂದು ಸೆಲ್ಫೀ ತೆಗೆದುಕೊಂಡು ಸಂಭ್ರಮಿಸಿದ್ದರು.

ಮೈಸೂರು ಸ್ವಚ್ಛ ನಗರ. ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಜಾಗೃತಿ ಸಾರುವಂತೆ ಮಹಿಳೆಯೊಬ್ಬರು ವಿಂಗಡಣೆ ಮಾಡಿ ಕಸ ನೀಡುವುದು. ಕಸ ವಿಲೇವಾರಿಗೆ ಸಜ್ಜಾಗಿ ನಿಂತಿರುವ ಆಟೋ. ರಸ್ತೆಯನ್ನು ಸ್ವಚ್ಛಗೊಳಿಸುತ್ತಿರುವುದು. ಸಾರ್ವಜನಿಕ ಶೌಚಾಲಯವನ್ನು ಬಳಸುವಂತೆ ಅರಿವು ಮೂಡಿಸುವ ಪ್ರತಿಕೃತಿಗಳಿವೆ. ಅಲ್ಲಿ ಮಹಾತ್ಮ ಗಾಂಧೀಜಿ ಅವರ ಪ್ರತಿಮೆ ಮುಂದೆ, ಪೌರ ಕಾರ್ಮಿಕನೋರ್ವ ಸ್ವಚ್ಛ ನಗರಿ ಪ್ರಶಸ್ತಿಯನ್ನು ಹಿಡಿದು ಸಂಭ್ರಮಿಸುತ್ತಿರುವುದು ಮೈಸೂರಿಗರು ಹಾಗೂ ಪ್ರವಾಸಿಗರಿಗೆ ಸೆಲ್ಫಿಗೆ ನೆಚ್ಚಿನ ತಾಣವಾಗಿತ್ತು.



ಇಂದು ಈ 'ನಮ್ಮ ಮೈಸೂರು ಸೆಲ್ಫೀ ಸ್ಪಾಟ್' ಸ್ಥಿತಿ ಹೀನಾಯವಾಗಿದೆ. ಮೈಸೂರು ಎಂದರೆ ವಿಶ್ವವಿಖ್ಯಾತ ದಸರಾ, ಜಂಬೂ ಸವಾರಿ ನೆನಪಿಗೆ ತರಲಿದ್ದು, ಇದನ್ನು ನೆನಪಿಸಲು ಇಲ್ಲಿ ನಿರ್ಮಿಸಿರುವ ಕುಮ್ಕಿ ಆನೆಗಳೊಂದಿಗೆ ಗಾಂಭೀರ್ಯದಿಂದ ಅಂಬಾರಿ ಹೊತ್ತು ಮೆರವಣಿಗೆಗೆ ಸಜ್ಜಾಗಿರುವ ಪ್ರತಿಕೃತಿಯಲ್ಲಿ ಆನೆಗಳ ಮೂಲ ಸ್ವರೂಪ ವಿರೂಪಗೊಂಡಿವೆ. ಹಾಗೇ ಅಂಬಾರಿ ಪ್ರತಿಕೃತಿಯೂ ಮುರಿದಿದ್ದು, ಜುಳು ಜುಳು ನೀರು ಹರಿಯಬೇಕಿದ್ದ ಕೃತಕ ಝರಿಯಲ್ಲಿ ಈಗ ಕಸದ ರಾಶಿ ತುಂಬಿದೆ. ಮತ್ತೊಂದೆಡೆ ಕಸದ ನಡುವೆಯೇ ಗಾಂಧೀಜಿ ಅವರ ಪ್ರತಿಮೆ ಮುಂದೆ, ಪೌರ ಕಾರ್ಮಿಕನೋರ್ವ ಸ್ವಚ್ಛ ನಗರಿ ಪ್ರಶಸ್ತಿಯನ್ನು ಹಿಡಿದು ಸಂಭ್ರಮಿಸುತ್ತಿರುವ ಪ್ರತಿಕೃತಿ ಇಲ್ಲಿನ ಪರಿಸ್ಥಿತಿಗೆ ಹಾಸ್ಯಾಸ್ಪದವಾಗಿದೆ. ಸುಮಾರು 40 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಸೆಲ್ಫೀ ಸ್ಪಾಟ್ ಪರಂಪರೆ ಜೊತೆಗೆ ಸ್ವಚ್ಛತೆ ಸಂದೇಶ ಸಾರುವ ಸಲುವಾಗಿ ನಿರ್ಮಾಣವಾಗಿದ್ದು, ಸೂಕ್ತ ನಿರ್ವಹಣೆ ಇಲ್ಲದೆ ಸೊರಗಿದೆ.

ಜೀವನ ಕೌಶಲ್ಯ ಕಲಿಸುವ ಎನ್‌ಎಸ್‌ಎಸ್ ಶಿಬಿರಗಳು

ಎನ್‌ಎಸ್‌ಎಸ್ ವಾರ್ಷಿಕ ಶಿಬಿರದ ಸಮಾರೋಪದಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್



ತಿ.ನರಸೀಪುರ.ಜ.4– ರಾಷ್ಟ್ರೀಯ ಸೇವಾ ಯೋಜನಾ ಶಿಬಿರಗಳು ಮಕ್ಕಳಲ್ಲಿ ವ್ಯಕ್ತಿತ್ವ ವಿಕಸನಗೊಳಿಸುವುದರ ಜೊತೆಗೆ ಸಹಬಾಳ್ವೆ, ಸಂಘಟನೆ, ಶ್ರಮದಾನ ಸೇರಿದಂತೆ ಮಾನವೀಯ ಮೌಲ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಸಾಮಾಜಿಕ ಕಳಕಳಿಯನ್ನು ಕಲಿಸುತ್ತವೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಹೇಳಿದರು.

ತಾಲೂಕಿನ ಸೋಮನಾಥಪುರ ಗ್ರಾಮದಲ್ಲಿ ಮೈಸೂರಿನ ಯುವರಾಜ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಗ್ರಾಮಾಭಿವೃದ್ಧಿಯ ಪರಿಕಲ್ಪನೆಯನ್ನು ರೂಢಿಸಿಕೊಂಡು ಗ್ರಾಮಗಳನ್ನು ಸ್ವಚ್ಛ ಮತ್ತು ಸುಂದರ ಗ್ರಾಮಗಳನ್ನಾಗಿ ಪರಿವರ್ತಿಸುವತ್ತ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್. ಶಿಬಿರಗಳು ಜೀವನ ಕೌಶಲ್ಯಗಳನ್ನು ಕಲಿಸುತ್ತದೆ. ಅದನ್ನು ಹಳ್ಳಿಯಲ್ಲಿ ಗಮನಿಸಬಹುದು. ಬುದ್ಧ, ಬಸವ, ಗಾಂಧೀಜಿಯವರ ಹಾದಿಯಲ್ಲಿ ನಡೆದರೆ ಕಲ್ಯಾಣ ರಾಷ್ಟ್ರ ಕಟ್ಟುವುದರಲ್ಲಿ ಸಂಶಯವಿಲ್ಲ. ಆ ದಿಶೆಯಲ್ಲಿ ನಾವೆಲ್ಲ ಮುಂದೆ ಸಾಗಬೇಕು, ವಿದ್ಯಾರ್ಥಿಗಳು ಸಾಮಾಜಿಕ ಮೌಲ್ಯಗಳನ್ನು ಶಿಬಿರದ ಮೂಲಕ ಕಲಿಯುವುದರ ಜೊತೆಗೆ ಗ್ರಾಮ ನೈರ್ಮಲ್ಯತೆ ಮತ್ತು ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವಂತೆ ತಿಳಿಸಿದರು.

ಬಿಜೆಪಿ ಮುಖಂಡ, ರಾಷ್ಟ್ರೀಯ ಸೇವಾ ಯೋಜನೆಯ ಮುಖಂಡ ದಯಾನಂದ ಪಟೇಲ್ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ನಮ್ಮ ದೇಶ ಮುಂದುವರೆಯ ಬೇಕಾದರೆ ಯುವಜನಾಂಗ ಮತ್ತು ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿ ಅರಿತು ಬದುಕಿನೆಡೆಗೆ ನೇರ ಸಂಪರ್ಕ ಇಟ್ಟುಕೊಳ್ಳಬೇಕೆಂದು ಹೇಳಿದ್ದರು. ರಾಷ್ಟ್ರೀಯ ಸೇವಾ ಕನಸು ಹೊತ್ತಂತಹ ಗಾಂಧೀಜಿಯವರ ಕನಸಿನ ದ್ಯೋತಕವಾಗಿ 1959ರಲ್ಲಿ ಸಿಡಿ ದೇಶ್ ಮುಖ್ ಸಮಿತಿ ರಚನೆ ಮಾಡಲಾಯಿತು.

1967ರಲ್ಲಿ ರಾಜ್ಯ ಶಿಕ್ಷಣ ಮಂತ್ರಿಗಳ ಸಭೆ ಹಾಗೂ ವಿದ್ಯಾರ್ಥಿಗಳ ಸಮಾವೇಶ ಮಾಡಿ ನಂತರ ರಾಷ್ಟ್ರೀಯ ಸೇವಾ ಸಮಿತಿ ರಚಿಸಲಾಯಿತು. ಈ ಯೋಜನೆ ಏಕಾಏಕಿ ಅಸ್ತಿತ್ವಕ್ಕೆ ಬಂದದ್ದಲ್ಲ ಎಂದ ಅವರು, ಸಂಸ್ಥೆಯ ಸದಸ್ಯರಾಗುವುದೇ ಒಂದು ಹೆಮ್ಮೆಯ ವಿಷಯ ಎಂದು ತಿಳಿಸಿದ ಅವರು, ಯೋಜನೆ ಹುಟ್ಟಿದ ಬಗ್ಗೆ, ಚಿನ್ಹೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು.

ಕಾರ್ಯಕ್ರಮದಲ್ಲಿ ಜಿ.ಪಂ. ಮಾಜಿ ಸದಸ್ಯ ಜಯಪಾಲ್ ಭರಣಿ ಗ್ರಾಪಂ. ಅಧ್ಯಕ್ಷೆ ಅರ್ಚನಾ ಸಂದೀಪ್, ಮಾಜಿ ಅಧ್ಯಕ್ಷ ಎಸ್.ಎಂ.ಪುಟ್ಟಸ್ವಾಮಿ, ಅಶೋಕ್,ಎನ್.ಮಹದೇವಯ್ಯ, ಮಾಜಿ ಉಪಾಧ್ಯಕ್ಷ ಸುರೇಶ್, ಮುಖಂಡರಾದ ಗಣೇಶ್ ಸ್ವಾಮಿ, ಅಬ್ದುಲ್ ವಾಜಿದ್, ಚಿಕ್ಕನಾಯಕ, ಕುಮಾರಸ್ವಾಮಿ, ರಾಮನುಜಂ, ಜಗದೀಶ್, ಬಾಬು, ಸುಲೇಮಾನ್, ದೇಶಿಲಿಂಗಯ್ಯ, ಎಸ್.ಕಾಂತರಾಜು, ಗ್ರಾ.ಪಂ. ಪಿಡಿಒ ಸಂತೋಷ್ ಕುಮಾರ್, ಕಾರ್ಯದರ್ಶಿ ಸುಧೀರ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಗಿರೀಶ್ ಚಂದ್ರ,ಎಸ್.ಮಂಜುಳಾ, ಸಹ ಕಾರ್ಯಕ್ರಮಾಧಿಕಾರಿ ಡಾ.ಅನೀಲ್ ಕುಮಾರ್, ಸಮನ್ವಿತಾ ಸೇರಿದಂತೆ ವಿದ್ಯಾರ್ಥಿಗಳು, ಗ್ರಾಮಸ್ಥರು ಹಾಜರಿದ್ದರು.

ಹುಲ್ಲಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್‌ನ B+ ಶ್ರೇಣಿ



ಹುಲ್ಲಹಳ್ಳಿ, ಜ.4–ಹುಲ್ಲಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್ ಕಮಿಟಿ ಭೇಟಿ ನೀಡಿ, ಎರಡು ದಿನಗಳ ಕಾಲ ಪರಿಶೀಲನೆ ನಡೆಸಿದ ನಂತರ ಪ್ರಥಮ ದರ್ಜೆ ಕಾಲೇಜು B+ ಶ್ರೇಣಿಯ ಪಡೆದಿದೆ ಎಂದು ಘೋಷಿಸಿ ಕಾಲೇಜಿನ ಪ್ರಾಂಶುಪಾಲರಿಗೆ ಪ್ರಮಾಣ ಪತ್ರ ನೀಡಿದ್ದಾರೆ.

ಹುಲ್ಲಹಳ್ಳಿಯು ಹೋಬಳಿ ಕೇಂದ್ರ ಸ್ಥಾನದಲ್ಲಿದ್ದು, ಸುತ್ತಮುತ್ತಲಿನ ಗ್ರಾಮಗಳು, ಹೆಚ್.ಡಿ.ಕೋಟೆ ಮತ್ತು ಮೈಸೂರು ತಾಲೂಕಿನ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉತ್ತಮ ವ್ಯಾಸಂಗ ಪಡೆಯುತ್ತಿದ್ದಾರೆ. ಬೋಧಕ, ಬೋಧಕೇತರ ಸಿಬ್ಬಂದಿಯ ಹಾಗೂ ವಿದ್ಯಾರ್ಥಿಗಳ ಪರಿಶ್ರಮದಿಂದ ಕಾಲೇಜಿಗೆ ಉತ್ತಮ ಶ್ರೇಣಿ ದೊರೆತಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಬಿ.ಎಸ್.ಜಯ ಅವರು ತಿಳಿಸಿದ್ದಾರೆ.

ನ್ಯಾಕ್ ಕಮಿಟಿಯ ಅಧ್ಯಕ್ಷ ಡಾ. ಭಾರತೀ ಹರಿಶಂಕರ್, ಸಂಚಾಲಕ ಡಾ. ಜಯಂತ್ ಕುಮಾರ್, ಪರಿಷತ್ ಸದಸ್ಯ ಡಾ. ವಿ.ಪಿ.ಪವಾರ್, ಕಾಲೇಜಿಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಕಾಲೇಜಿನ ಅಭಿವೃದ್ಧಿಯ ಸಮಿತಿಯ ಅಧ್ಯಕ್ಷರೂ ಆದ ಶಾಸಕ ಬಿ.ಹರ್ಷವರ್ಧನ್, ಅಭಿವೃದ್ಧಿ ಸಮಿತಿಯ ಸದಸ್ಯರು, ಕಾಲೇಜು ಶಿಕ್ಷಣ ಆಯುಕ್ತ ಪ್ರದೀಪ್ ಪಿ., ನಿರ್ದೇಶಕ ಡಾ. ಅಪ್ಪಾಜಿಗೌಡ, ಪ್ರಾದೇಶಿಕ ವಲಯ ಜಂಟಿ ನಿರ್ದೇಶಕ ಡಾ. ಗಿರಿಧರ್ ರಾವ್, ನೋಡಲ್ ಅಧಿಕಾರಿ ಡಾ. ವಿಕ್ರಂ, ನ್ಯಾಕ್ ವಿಶೇಷ ಅಧಿಕಾರಿಯಾದ ಡಾ. ಶಂಕರ್, ಸಂಚಾಲಕರಾದ ಗುರುದತ್ ಕಾಮತ್ ಹಾಗೂ ರವಿಕುಮಾರ್ ಎಸ್. ಮತ್ತು ವಿದ್ಯಾರ್ಥಿ ವೃಂದ ಹಾಗೂ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಯುವ ಚೈತನ್ಯ ಯಾತ್ರೆಗೆ ನಿಖಿಲ್ ಚಾಲನೆ

ರೈತರಿಗಾಗಿ ಜೀವನ ಮುಡುಪಾಗಿಟ್ಟವರು ದೇವೇಗೌಡರು



ಬೈಲಕುಪ್ಪೆ, ಜ.4– ದೇಶದಲ್ಲಿ ರೈತರಿಗಾಗಿ ಜೀವನವನ್ನು ಮುಡಿಪಾಗಿಟ್ಟ ಏಕೈಕ ಪ್ರಧಾನ ಮಂತ್ರಿ ಎಂದರೆ ಅದು ದೇವೇಗೌಡರು ಮಾತ್ರ ಎಂದು ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಹಂಬಲಾರೆ ಗ್ರಾಮದಲ್ಲಿ ಪಿರಿಯಾಪಟ್ಟಣ ತಾಲೂಕು ಜೆಡಿಎಸ್ ಯುವ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಯುವ ಚೈತನ್ಯ ಯಾತ್ರೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರೈತರು, ಜನಸಾಮಾನ್ಯರ ಬಗ್ಗೆ ಸದಾ ಚಿಂತಿಸುವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಬೆಂಬಲಿಸಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಹೇಳಿದರು. ಶಾಸಕ ಕೆ.ಮಹದೇವ್ ಮಾತನಾಡಿ, ರೈತರಿಗೆ ಏನಾದರೂ ಅನುಕೂಲವಾಗಬೇಕಾದರೆ 2023ರ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಬೇಕು, ಇಲ್ಲದಿದ್ದರೆ ರೈತರ ಉಳಿವು ಕಷ್ಟವಾಗಲಿದೆ, ರಾಷ್ಟ್ರೀಯ ಪಕ್ಷಗಳು ರೈತರು, ಜನಸಾಮಾನ್ಯರನ್ನು ಶೋಷಣೆ ಮಾಡಲಿವೆ ಎಂದು ಎಚ್ಚರಿಸಿದರು. ನನ್ನ ಐದು ವರ್ಷದ ಶಾಸಕನ ಅಧಿಕಾರವನ್ನು ತಾಲೂಕಿನ ಜನತೆ ಈಗಾಗಲೇ ನೋಡಿ ನನ್ನನ್ನು ಬೆಂಬಲಿಸಿದ್ದೀರಿ, ಅದೇ ರೀತಿ ನಾನು ಪ್ರಾಮಾಣಿಕವಾಗಿ ಮೂಲಸೌಕರ್ಯವನ್ನು ನೀಡಿದ್ದೇನೆ, ಪಿರಿಯಾಪಟ್ಟಣ ತಾಲೂಕಿನಾದ್ಯಂತ ಶಾಶ್ವತ ಯೋಜನೆಗಳನ್ನು ಕೈಗೊಳ್ಳುವ ಮೂಲಕ ಮಾದರಿ ಕ್ಷೇತ್ರವನ್ನಾಗಿಸಲು ಹಗಲಿರುಳು ಶ್ರಮಿಸಿದ್ದೇನೆ. ಮುಂದಿನ ದಿನಗಳಲ್ಲಿ ನಿಮ್ಮಗಳ ಸಹಕಾರ ಅತ್ಯಗತ್ಯ ಎಂದು ಕೋರಿದರು.

ಜಿ.ಡಿ.ಹರೀಶ ಗೌಡ ಮಾತನಾಡಿ, ಪಿರಿಯಾಪಟ್ಟಣ ತಾಲೂಕಿನಲ್ಲಿ ಶಾಸಕ ಮಹದೇವ್ ಮನುಷ್ಯನಿಗೆ ಅಗತ್ಯವಾಗಿ ಬೇಕಾಗಿರುವ ರಸ್ತೆ ಶಿಕ್ಷಣ, ನೀರಾವರಿ ಯೋಜನೆಗೆ, ಹೆಚ್ಚು ಮಹತ್ವ ನೀಡಿರುವುದನ್ನು ಮತದಾರರು ಗಮನಿಸಬೇಕು. ಯುವಕರು ಚಿಂತಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಬೆಟ್ಟದಪುರ ಟೋಲ್ ಗೇಟ್‌ನಿಂದ ಹಂಬಲಾರೆ ಗ್ರಾಮದವರೆಗೆ ಸಾವಿರಾರು ಕಾರ್ಯಕರ್ತರೊಂದಿಗೆ ಬೈಕ್ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ಜಿ.ಪಂ ಮಾಜಿ ಸದಸ್ಯ ಮಂಜುನಾಥ್, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ರಾಜ್ಯ ವಕ್ತಾರೆ ನಜ್ಮಾ ನಜೀರ್, ಗ್ರಾಪಂ ಅಧ್ಯಕ್ಷೆ ರವಿಣಾ, ಮುಖಂಡರಾದ ಸುಮಿತ್ರಾ, ಶಂಕರೇಗೌಡ, ನಾಗಯ್ಯ, ಐಲಾಪುರ ರಾಮು, ಬಿ.ಜೆ ದೇವರಾಜು, ಗೋವಿಂದೇಗೌಡ, ಗಗನ್, ಅತ್ತರ್ ಮತೀನ್, ಹೇಮಂತ್, ನಾಗರಾಜು, ಜವರಪ್ಪ, ಕುಶಾಲ್, ಸೋಮಶೇಖರ್, ವಿದ್ಯಾಶಂಕರ್, ಮಣಿ, ಪ್ರೀತಿ ಅರಸ್, ನಾಗೇಂದ್ರ, ಮೈಲಾರಪ್ಪ, ಯಶಸ್ ಗೌಡ, ಅಣ್ಣೆಗೌಡ ಸೇರಿದಂತೆ ತಾಲೂಕಿನ ವಿವಿಧೆಡೆಯಿಂದ ಆಗಮಿಸಿದ ಪಕ್ಷದ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಇದ್ದರು.

ಗದ್ದಿಗೆಯ ಶ್ರೀಕ್ಷೇತ್ರ ಪ್ರಸಿದ್ಧ ಯಾತ್ರಾಸ್ಥಳವಾಗಲಿದೆ



ಹುಣಸೂರು, ಜ.4– ಗದ್ದಿಗೆಯ ಶ್ರೀ ಕೆಂಡಗಣ್ಣೇಶ್ವರ ಸ್ವಾಮಿ ಮತ್ತು ಮಹದೇಶ್ವರ ಸ್ವಾಮಿಯ ದೇವಾಲಯ ಪ್ರಸಿದ್ಧ ಯಾತ್ರಾ ಸ್ಥಳವಾಗಿ ಅಭಿವೃದ್ಧಿ ಹೊಂದಲಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾ ಮಂಡಳಿ ಅಧ್ಯಕ್ಷೆ ಕೆ. ಲಲಿತಾ ದೇವೇಗೌಡ ತಿಳಿಸಿದ್ದಾರೆ.

ತಾಲೂಕಿನ ಶ್ರೀ ಕ್ಷೇತ್ರ ಗದ್ದಿಗೆಯ ಶ್ರೀ ಕೆಂಡಗಣ್ಣೇಶ್ವರ ಸ್ವಾಮಿ ಮತ್ತು ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಹೊಸ ವರ್ಷದ ಅಂಗವಾಗಿ ಮಾಜಿ ಸಚಿವ ಜಿ.ಟಿ.ದೇವೇಗೌಡ ಮತ್ತು ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡರ ಸಹಕಾರದೊಂದಿಗೆ ಏರ್ಪಡಿಸಿದ್ದ ವಿಶೇಷ ಪೂಜೆ ಮತ್ತು ದಾಸೋಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗದ್ದಿಗೆ ಕ್ಷೇತ್ರ ಬಹಳ ಪ್ರಸಿದ್ಧ ಯಾತ್ರಾಸ್ಥಳವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ, ಈ ಯಾತ್ರಾಸ್ಥಳಕ್ಕೆ ಗದ್ದಿಗೆ ಮತ್ತು ಸುತ್ತಮುತ್ತಲಿನ ಭಕ್ತರು ಮಾತ್ರವಲ್ಲದೆ, ರಾಜ್ಯದ ಮೂಲೆ–ಮೂಲೆಗಳಿಂದ ಭಕ್ತಾದಿಗಳು ಬರುತ್ತಾರೆ. ದೇವರ ದರ್ಶನ ಮಾಡಿ ಪುನೀತರಾಗುತ್ತಿದ್ದಾರೆ.

ಮುಂದಿನ ದಿನದಲ್ಲಿ ಧರ್ಮಸ್ಥಳದ ರೀತಿಯಲ್ಲಿ ಗದ್ದಿಗೆ ಕ್ಷೇತ್ರವು ಆಗಬೇಕೆಂಬ ಆಸೆ ಇದೆ. ಸನ್ನಿಧಿಗೆ ಬರುವ ಭಕ್ತಾದಿಗಳು ಮತ್ತು ದಾನಿಗಳ ನೆರವಿನಿಂದ ಬಹಳಷ್ಟು ಅಭಿವೃದ್ಧಿ ಹೊಂದಿದೆ, ಈ ಕ್ಷೇತ್ರದ ಬಗ್ಗೆ ಜನರಿಗೆ ಅಪಾರ ನಂಬಿಕೆ, ವಿಶ್ವಾಸ ಬಂದಿದೆ. ತಮಗೆ ಎದುರಾಗುವ ಸಂಕಷ್ಟ ಮತ್ತು ಮನೆಯಲ್ಲಿ ಯಾವುದೇ ಶುಭ ಕಾರ್ಯ ಮಾಡುವಾಗ ಮತ್ತು ಯಾವುದೇ ಅಭಿವೃದ್ಧಿ ಕೆಲಸಕ್ಕೂ ಕೈ ಹಾಕುವ ಮುನ್ನ ಈ ದೇವಾಲಯಕ್ಕೆ ಬಂದು ದೇವರಲ್ಲಿ ವರ ಕೇಳುವ ಪದ್ಧತಿ ಇಂದಿಗೂ ಇದೆ. ಆ ಮೂಲಕ ದೇವರ ಮೇಲೆ ಅಪಾರ ನಂಬಿಕೆ ಉಳಿದುಕೊಂಡಿದೆ ಎಂದರು.

ಹೊಸ ವರ್ಷದ ಆಚರಣೆಯ ಅಂಗವಾಗಿ ಸನ್ನಿಧಿಯಲ್ಲಿ ವಿಶೇಷ ಪೂಜೆ ಕೈಂಕರ್ಯಗಳ ಜೊತೆಗೆ ಬರುವ ಎಲ್ಲ ಭಕ್ತಾದಿಗಳಿಗೂ ದಾಸೋಹ ವ್ಯವಸ್ಥೆಯನ್ನು ಜಿ.ಟಿ.ಡಿ ಮತ್ತು ಜಿ.ಡಿ.ಹರೀಶ್ ಗೌಡರು ಏರ್ಪಡಿಸಿದ್ದರು. ಕೆ.ಲಲಿತಾ ದೇವೇಗೌಡರು ದೇವಾಲಯಕ್ಕೆ ಪೂಜೆ ಸಲ್ಲಿಸಿದ ಬಳಿಕ ದಾಸೋಹದಲ್ಲಿ ಪೂಜೆ ಸಲ್ಲಿಸಿ ಬಂದ ಭಕ್ತಾದಿಗಳಿಗೆ ಸ್ವತಃ ಅವರೇ ಪ್ರಸಾದ ಬಡಿಸುವ ಮೂಲಕ ಚಾಲನೆ ನೀಡಿದರು. ನಂತರ ದೇವಾಲಯದ ವತಿಯಿಂದ ಅವರಿಗೆ ಗೌರವ ಸಮರ್ಪಣೆ ಮಾಡಲಾಯಿತು.

ಸುಮಾರು 30 ಸಾವಿರಕ್ಕೂ ಹೆಚ್ಚು ಭಕ್ತರು ದೇವಾಲಯಕ್ಕೆ ಪೂಜೆ ಸಲ್ಲಿಸಿ ದಾಸೋಹದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ದೇವಾಲಯದ ಅರ್ಚಕರು, ಧರ್ಮದರ್ಶಿ ಪುಣ್ಯಶೀಲ, ಜಿಪಂ ಮಾಜಿ ಸದಸ್ಯ ಎಂ.ಬಿ.ಸುರೇಂದ್ರ ಮುಖಂಡರಾದ ಸುರೇಶ್ ಗದ್ದಿಗೆ, ರವೀಂದ್ರ, ರಾಜು, ಮಂಜು ಮಹದೇವಪುರ, ಗುರುಸ್ವಾಮಿ ಸೇರಿದಂತೆ ನೂರಾರು ಮುಖಂಡರು ಹಾಜರಿದ್ದರು.

ಭೈರಾಪುರದಲ್ಲಿ ಅಪರಿಚಿತ ಶವ ಪತ್ತೆ


ತಿ.ನರಸೀಪುರ, ಜ.4– ಪಟ್ಟಣ



ಪುರಸಭಾ ವ್ಯಾಪ್ತಿಯ ಭೈರಾಪುರ ಗ್ರಾಮದ ಸಿಲ್ಕ್ ಫ್ಯಾಕ್ಟರಿ ಮುಂಭಾಗದಲ್ಲಿ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದೆ. ಸುಮಾರು 30 ರಿಂದ 35 ವರ್ಷ ವಯಸ್ಸಿನ ಗಂಡಸಿನ ಶವದ ಮೇಲೆ ಸೆಕ್ಯುರಿಟಿ ಗಾರ್ಡ್‌ಗಳು ಧರಿಸುವ ಬಟ್ಟೆ ಇದ್ದು, ಬಲಗಾಲಿನ ಮಂಡಿ ಕೆಳಗೆ ಚುಚ್ಚಿದಂತಹ ರಕ್ತ ಗಾಯಗಳು ಕಂಡು ಬಂದಿವೆ. ಬಲಗಾಲಿನ ಮೂಳೆ ಮುರಿದಿದ್ದು, ಹಲ್ಲಿನಿಂದ ರಕ್ತಸ್ರಾವವಾಗಿರುವುದು ಕಂಡು ಬಂದಿದೆ. ಈ ಸಂಬಂಧ ಅನಾಥ ಶವಗಳ ಮುಕ್ತಿದಾತರಾದ ಡಾ. ಎಂ.ಮಾದೇಶ್ ಪಟ್ಟಣ ಪೊಲೀಸರಿಗೆ ದೂರು ನೀಡಿದ್ದು, ಈ ಸಂಬಂಧ ಸಬ್‌ಇನ್‌ಸ್ಪೆಕ್ಟರ್ ತಿರುಮಲ್ಲೇಶ್ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಂಡಿದ್ದಾರೆ.

ಮಲ್ಕುಂಡಿ ಬಳಿ ಪುಂಡಾನೆ ಸೆರೆ

ಮಲ್ಕುಂಡಿ, ಜ.4– ಸಮೀಪದ ದೇವರಾಯಶೆಟ್ಟಿಪುರ ಗ್ರಾಮದಲ್ಲಿ ಮಂಗಳವಾರ ಮುಂಜಾನೆ ಕಾಣಿಸಿಕೊಂಡ ಪುಂಡಾನೆಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳು



ಸೆರೆ ಹಿಡಿದು ಓಂಕಾರ ಅರಣ್ಯ ವಲಯಕ್ಕೆ ಬಿಟ್ಟಿದ್ದಾರೆ. ರೈತರ ಜಮೀನಿನಲ್ಲಿ ಕಾಡಾನೆಗಳು ಲಗ್ಗೆ ಇಟ್ಟಿದ್ದವು. ಇದರ ಜೊತೆಯಲ್ಲಿ ಪುಂಡಾನೆಯು ದಾರಿ ತಪ್ಪಿ ರೈತರ ಜಮೀನಿನಲ್ಲೇ ಬೀಡು ಬಿಟ್ಟಿತ್ತು. ಇದನ್ನು ಕಂಡ ರೈತರು ಭಯಭೀತರಾಗಿ ಅರಣ್ಯ ಇಲಾಖೆಗೆ ವಿಷಯ ಮುಟ್ಟಿಸಿದ್ದಾರೆ. ತಕ್ಷಣ ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ದಸರಾ ಆನೆಗಳ ಮೂಲಕ ಧಾವಿಸಿ ಪುಂಡಾನೆಯನ್ನು ಸೆರೆ ಹಿಡಿದು ಕಾಡಿಗೆ ಬಿಡುವಲ್ಲಿ ಯಶಸ್ವಿಯಾಗಿದ್ದಾರೆ.

ರಾಜ್ಯಮಟ್ಟದ ಕಲೋತ್ಸವಕ್ಕೆ ಮೂವರು ವಿದ್ಯಾರ್ಥಿಗಳು ಆಯ್ಕೆ



ಸಂಜನಾ



ನಿಶ್ಚಿತ



ಕೀರ್ತಿಕುಮಾರ್

ಕಂಪಲಾಪುರ, ಜ. 4– ನವೆಂಬರ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಆಯೋಜಿಸಿದ್ದ ಕಲೋತ್ಸವ ಹೆಸರಿನ ಆನ್‌ಲೈನ್ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯ ಮೂವರು ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಹೆಣ್ಣುಮಕ್ಕಳ ಜಾನಪದಗೀತೆ ಗಾಯನ ಸ್ಪರ್ಧೆಯಲ್ಲಿ 9ನೇ ತರಗತಿ ವಿದ್ಯಾರ್ಥಿನಿ ಸಂಜನಾ (ಪ್ರಥಮ), ವಾದ್ಯಸಂಗೀತ ಸ್ಪರ್ಧೆಯಲ್ಲಿ 9 ನೇತರಗತಿ ವಿದ್ಯಾರ್ಥಿನಿ ನಿಶ್ಚಿತ (ಪ್ರಥಮ), ಗಂಡು ಮಕ್ಕಳ ವಾದ್ಯ ಸಂಗೀತ ಸ್ಪರ್ಧೆಯಲ್ಲಿ ಕೀರ್ತಿಕುಮಾರ್ (ಪ್ರಥಮ). ಈ ವರ್ಷದಲ್ಲಿ ಏಕಕಾಲಕ್ಕೆ ಒಂದೇ ಶಾಲೆಯ ಮೂವರು ವಿದ್ಯಾರ್ಥಿಗಳು ಆಯ್ಕೆಯಾಗಿರುವುದು ಹೆಮ್ಮೆಯ ವಿಚಾರವೆಂದು ಶಾಲೆಯ ಸಂಗೀತ ಶಿಕ್ಷಕ ಯಶ್ವಂತ್ ಕುಮಾರ್ ಸಂತಸ ವ್ಯಕ್ತಪಡಿಸಿದ್ದಾರೆ.

ಕೆ.ಆರ್.ನಗರ ಪುರಸಭೆಗೆ ಸೈಯದ್ ಸಿದ್ದಿಕ್ ಅಧ್ಯಕ್ಷ



ಕೆ.ಆರ್.ನಗರ, ಜ.4– ಪುರಸಭೆ ಅಧ್ಯಕ್ಷರಾಗಿ ಕಾಂಗ್ರೆಸ್ಸಿನ ಸೈಯದ್ ಸಿದ್ದಿಕ್ ಅವಿರೋಧ ವಾಗಿ ಆಯ್ಕೆಯಾಗಿದ್ದಾರೆ. ಈವರೆಗೆ ಅಧ್ಯಕ್ಷರಾಗಿದ್ದ ಕೋಳಿಪ್ರಕಾಶ್ ಅವರ ರಾಜೀನಾಮೆ ಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು.

ಪುರಸಭೆಯ ಸಭಾಂಗಣದಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸೈಯದ್‌ಸಿದ್ದಿಕ್ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದಿದ್ದರಿಂದ ಚುನಾವಣಾಧಿಕಾರಿಯಾಗಿದ್ದ ತಹಶೀಲ್ದಾರ್ ಎಸ್.ಸಂತೋಷ್ ಇವರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ಸೌಮ್ಯ ಲೋಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರ್ ಸ್ವಾಮಿ, ಸದಸ್ಯರಾದ ನಟರಾಜು, ಕೆ.ಜಿ.ಸುಬ್ರಮಣ್ಯ, ಜಾವಿದ್‌ಪಾಷ, ಶಿವಕುಮಾರ್, ಶಂಕರ್, ವಸಂತಮ್ಮ, ಪಲ್ಲವಿ ಆನಂದ್, ಅಶ್ವಿನಿ ಪುಟ್ಟರಾಜು, ಕೆ.ಬಿ.ವೀಣಾ, ಮಂಜುಳ ಚಿಕ್ಕವೀರು, ಸರೋಜ ಮಹದೇವ್, ಅಫ್ರೋಜ್ ಉನ್ನೀಸಾ, ಕೆ.ಎಲ್.ಜಗದೀಶ್, ಉಮೇಶ್, ಸಂತೋಷ್‌ಗೌಡ, ಶಾರದ ನಾಗೇಶ್, ಮುಖ್ಯಾಧಿಕಾರಿ ಡಾ.ಜಯಣ್ಣ ಹಾಜರಿದ್ದರು.

ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್, ವಕ್ತಾರ ಸೈಯದ್‌ಜಾಬೀರ್, ಮುಖಂಡರಾದ ನರಸಿಂಹರಾಜು, ಎಂ.ಆರ್.ನಾಗೇಶ್, ಹೆಬ್ಬಾಳುನಾಗೇಂದ್ರ, ಕೆ.ಪಿ.ಜಗದೀಶ್, ಕೆ.ಎನ್. ಪ್ರಸನ್ನಕುಮಾರ್, ಗಡ್ಡಮಹೇಶ್, ನವೀದ್, ಕೆ.ವಿನಯ್, ಬಂಕ್‌ಮಂಜು, ಭೈರನಾಯಕ, ಸೈಯದ್‌ಶಾಕೀರ್ ಸೇರಿದಂತೆ ಇತರ ಮುಖಂಡರು ಹಾಜರಿದ್ದು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು. ಆನಂತರ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ, ವಿಜಯೋತ್ಸವ ಆಚರಿಸಿದರು.

ಮನೆ ಮೇಲೆ ಬಿಜೆಪಿ ಬಾವುಟ ಹಾರಾಡಲಿ



ತಿ.ನರಸೀಪುರ, ಜ.4– ಬಿಜೆಪಿ ಕಾರ್ಯಕರ್ತರು ತಮ್ಮ ಮನೆ ಮೇಲೆ ಕಡ್ಡಾಯವಾಗಿ ಬಿಜೆಪಿ ಬಾವುಟ ಹಾರಿಸಬೇಕು ಎಂದು ಬಿಜೆಪಿ ಮುಖಂಡ ಶರತ್ ಪುಷ್ಟಬುದ್ದಿ ಸಲಹೆ ನೀಡಿದರು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೆಲ್ಲಹಳ್ಳಿ ಗ್ರಾಮದ 2ನೇ ಬೂತ್‌ನಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಕುಮಾರ್ ಅವರ ಮನೆ ಮೇಲೆ ಬಿಜೆಪಿ ಬಾವುಟ ಹಾರಿಸಿ ಮಾತನಾಡಿದರು.

ರಾಜ್ಯದಲ್ಲಿ 58,185 ಬೂತ್‌ಗಳಿದ್ದು, ಪ್ರತಿ ಬೂತ್‌ನಲ್ಲಿ ಮನೆ ಮನೆ ಸಂಪರ್ಕ ಮಾಡಿ ನಂತರ ಬೂತ್ ಸಮಿತಿ ಪರಿಶೀಲನೆ ಮಾಡಬೇಕು. ಮತದಾರರ ಪಟ್ಟಿಯಲ್ಲಿ ಪ್ರತಿ ಪುಟಕ್ಕೆ ಒಬ್ಬರನ್ನು ನಿಯುಕ್ತಿ ಮಾಡುವ ಮೂಲಕ ಪೇಜ್ ಪ್ರಮುಖ್ ನೇಮಿಸಬೇಕು. ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿ ಜನರ ಸಮಸ್ಯೆ ಆಲಿಸಲು ವಾಟ್ಸಾಪ್ ಗ್ರೂಪ್ ರಚಿಸಬೇಕು ಎಂದರು.

ತಿಂಗಳ ಕಡೆಯ ಭಾನುವಾರ ಕಡ್ಡಾಯವಾಗಿ ಬೂತ್‌ನ ಎಲ್ಲ ಸದಸ್ಯರು ಒಟ್ಟಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮನದಾಳದ ಮಾತಾದ ಮನ್ ಕೀ ಬಾತ್ ಕೇಳಬೇಕು ಎಂದರು. ಕೇಂದ್ರ ಬಿಜೆಪಿ ನಾಯಕರ ಕರ್ನಾಟಕ ಮಿಷನ್–150 ಗುರಿಯಂತೆ ಅಷ್ಟೂ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ, ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಲು ವರಿಷ್ಠರ ಸೂಚನೆಯಂತೆ ಬೂತ್ ವಿಜಯ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆ ಬಲಿಷ್ಠವಾಗಿರುವುದರಿಂದ ರಾಜ್ಯದಲ್ಲಷ್ಟೇಯಲ್ಲ, ವರುಣ ಕ್ಷೇತ್ರದಲ್ಲೂ ಬಿಜೆಪಿ ಗೆಲ್ಲಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಯಾವಾಗ ಘೋಷಣೆಯಾದರೂ ವರುಣಾದಲ್ಲಿ ಪಕ್ಷದ ಗೆಲುವಿಗೆ ದುಡಿಯಲು ಕಾರ್ಯಕರ್ತರಾದಿಯಾಗಿ ನಾವು ಸಿದ್ಧರಾಗಿದ್ದೇವೆ. ಕ್ಷೇತ್ರಕ್ಕೆ ಇನ್ನೂ ಅಧಿಕೃತ ಅಭ್ಯರ್ಥಿಯನ್ನು ವರಿಷ್ಠರು ಘೋಷಣೆ ಮಾಡಿಲ್ಲ. ಅಭ್ಯರ್ಥಿಯ ಆಯ್ಕೆ ವರಿಷ್ಠರ ವಿವೇಚನೆಗೆ ಬಿಟ್ಟಿದ್ದು. ಅಲ್ಲಿಯವರೆಗೂ ಪಕ್ಷ ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ಎಂದರು.

ಮೆಲ್ಲಹಳ್ಳಿ–ಹಾರೋಹಳ್ಳಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸ್ವಾಮಿ, ಶಕ್ತಿ ಕೇಂದ್ರದ ಅಧ್ಯಕ್ಷ ಸಂತೋಷ್, ಗ್ರಾಪಂ ಸದಸ್ಯ ಸಿದ್ದರಾಜು, ಬೂತ್ ಅಧ್ಯಕ್ಷ ಮಹೇಶ್, ಹಾರೋಹಳ್ಳಿ ಲೋಕೇಶ್ ಮತ್ತು ಕಾರ್ಯಕರ್ತರು ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.35ಕ್ಕೆ, ವೇದ (ಕ): ಮ.1ಕ್ಕೆ, ಸಂ.6.55ಕ್ಕೆ, ರಾ.9.55ಕ್ಕೆ, ಕಾಂತಾರ (ಕ): ಸಂ.4ಕ್ಕೆ.

ಸ್ಕ್ರೀನ್ 2 ಮೇಡ್ ಇನ್ ಬೆಂಗಳೂರು (ಕ): ಬೆ.10.40ಕ್ಕೆ, ಡ್ರೈವರ್ ಜಮುನಾ (ತ): ಮ.2.05ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಇಮಾಲಿಗುಡ್ಡ (ಕ): ಸಂ.4.30ಕ್ಕೆ, ಲಕ್ಕಿ ಲಕ್ಷ್ಮಣ್ (ತೆ): ರಾ.7ಕ್ಕೆ, ಓ ಮೈ ಗೋಸ್ಟ್ (ತ): ರಾ.9.55ಕ್ಕೆ.

ಸ್ಕ್ರೀನ್ 3 ಸರ್ಕಸ್ (ಹಿಂ): ಬೆ.11.05ಕ್ಕೆ, ಪದವಿ ಪೂರ್ವ (ಕ): ಮ.1.55ಕ್ಕೆ, ನಾನು ಅದು ಮತ್ತು ಸರೋಜ (ಕ): ಸಂ.4.30ಕ್ಕೆ, ರಾಂಗಿ (ತ): ರಾ.7.10ಕ್ಕೆ, ಟಾಪ್ ಗೇರ್ (ತೆ): ರಾ.10.15ಕ್ಕೆ.

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.50ಕ್ಕೆ, ಮ.2.30ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಒನ್ಸ್ ಅಪಾನ್ ಟೈಂ ಇನ್ ಇಮಾಲಿಗುಡ್ಡ (ಕ): ಬೆ.10.05ಕ್ಕೆ, ವೇದ (ಕ): ಮ.12.40ಕ್ಕೆ, ಮ.3.50ಕ್ಕೆ, ರಾ.7ಕ್ಕೆ, ರಾ.10.10ಕ್ಕೆ,

ಸ್ಕ್ರೀನ್ 2 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.11ಕ್ಕೆ, ಮ.2.50ಕ್ಕೆ, ಸಂ.6.40ಕ್ಕೆ, ರಾ.10.30ಕ್ಕೆ,

ಸ್ಕ್ರೀನ್ 3 ವೇದ (ಕ): ಬೆ.9.50ಕ್ಕೆ, ಆಲ್ಫಾ (ಕ): ಮ.3.05ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.40ಕ್ಕೆ, ರಾ.9.30ಕ್ಕೆ,

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10ಕ್ಕೆ, ನಾನು ಅದು ಮತ್ತು ಸರೋಜ (ಕ): ಮ.1.40ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.4.20ಕ್ಕೆ, ಲವ್ ಸ್ಟೋರಿ 1998 (ಕ): ರಾ.7.55ಕ್ಕೆ, ಸೆಂಬಿ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.9ಕ್ಕೆ, ಮ.3.30ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಸರ್ಕಸ್ (ಹಿಂ): ಬೆ.9.55ಕ್ಕೆ, ಮ.12.20ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ, ಧಮಾಕ (ತೆ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, 18 ಪೇಜಸ್ (ತೆ): ಮ.1ಕ್ಕೆ, ರಾ.7ಕ್ಕೆ, ವಿಶಾಲ್ ಇನ್ ಲಾಠಿಚಾರ್ಜ್ (ತ): ಬೆ.10.22ಕ್ಕೆ, ಸಂ.4.20ಕ್ಕೆ, ರಾ.9.45ಕ್ಕೆ, ಕನೆಕ್ಟ್ (ತ): ರಾ.7.25ಕ್ಕೆ, ಕಾಪ (ಮ): ಮ.1.25ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೇದ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಂಗ್‌ಡಂ ಆಫ್ ದಿ ಡೈನೋಸರಸ್ (ಇಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೇದ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟೆಂಪರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಲವ್ ಸ್ಟೋರಿ 1998 (ಕ)	4 ಪ್ರದರ್ಶನಗಳು
ಸಂಗಂ	
ಜಮಾಲಿಗುಡ್ಡ (ಕ)	4 ಪ್ರದರ್ಶನಗಳು
ಲಿಡೋ	
ನಾನು ಅದು ಮತ್ತು ಸರೋಜ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇದ (ಕ)	4 ಪ್ರದರ್ಶನಗಳು
ಪ್ರಭಾ	
ಕಾಂತಾರ (ಕ)	4 ಪ್ರದರ್ಶನಗಳು



ಪಿರಿಯಾಪಟ್ಟಣ ತಾಲೂಕಿನ ಮುತ್ತಿನ ಮುಳ್ಳಸೋಗೆ ಹಲಗನಹಳ್ಳಿ ಮಹದೇಶ್ವರ ಮಠದ ಕೊಪ್ಪಲು ಗ್ರಾಮಗಳಲ್ಲಿ ಸುಮಾರು ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಸಿಸಿ ರಸ್ತೆಗೆ ಅಭಿವೃದ್ಧಿಗೆ ಶಾಸಕ ಕೆ. ಮಹದೇವ್ ಚಾಲನೆ ನೀಡಿದರು. ಈ ವೇಳೆ ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಕಾರ್ಯದರ್ಶಿ ವಿದ್ಯಾಶಂಕರ್ ವಿಎಸ್‌ಎಸ್‌ಎನ್ ಅಧ್ಯಕ್ಷ ಜೆಡಿಎಸ್ ಮುಖಂಡ ಗಗನ್, ರೈತ ಮುಖಂಡ ದೇವರಾಜು, ಸಿರಿಯಾಳ ಶೆಟ್ಟಿ, ರಾಜೇಶ್ ಗ್ರಾಮ ಪಂಚಾಯತ್ ಸದಸ್ಯ ಸ್ವಾಮಿ ಸೇರಿದಂತೆ ಇನ್ನು ಹಲವರು ಹಾಜರಿದ್ದರು

ಕಾರ್ಖಾನೆ ನಾರಾಯಣಪ್ಪ ನಿಧನ



ಹುಣಸೂರು, 4– ಕಾರ್ಖಾನೆ ನಾರಾಯಣಪ್ಪ (98) ಅರಣ್ಯ ಇಲಾಖೆ ಕಚೇರಿ ಹಿಂಭಾಗದಲ್ಲಿರುವ ಮನೆಯಲ್ಲಿ ಸೋಮವಾರ ರಾತ್ರಿ ಅನಾರೋಗ್ಯದಿಂದ ನಿಧನರಾದರು. ಅಂತ್ಯಕ್ರಿಯೆ ಮನೆಯ ಹಿಂಭಾಗದಲ್ಲಿರುವ ತೋಟದಲ್ಲಿ ಗುರುವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು, ಮೊಮ್ಮಕ್ಕಳನ್ನು ಅಗಲಿದ್ದಾರೆ.

ಎ.ಎಸ್.ಪ್ರಕಾಶ್



ಕೆ.ಆರ್.ನಗರ, ಜ.4– ಕನಕನಗರ ಬಡಾವಣೆಯ ಎ.ಎಸ್. ಪ್ರಕಾಶ್(68) ಬುಧವಾರ ಬೆಳಗ್ಗೆ ನಿಧನರಾದರು. ಇವರು ಚುಂಚನಕಟ್ಟೆ ಶ್ರೀ ರಾಮ ಸಹಕಾರ ಸಕ್ಕರೆ ಕಾರ್ಖಾನೆಯ ನಿವೃತ್ತ ನೌಕರರಾಗಿದ್ದು ಪತ್ನಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲೀಷ್ ಪ್ರಾಧ್ಯಾಪಕ ಪಿ.ಪ್ರಶಾಂತ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ಮೃತರ ಸ್ವಗ್ರಾಮ ಅಡಗೂರಿನಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು. ಶಾಸಕ ಸಾ.ರಾ. ಮಹೇಶ್, ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್, ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್, ನಿವೃತ್ತ ಡಿಹೆಚ್‌ಒ ಡಾ.ಎಸ್.ಎಂ. ಮಾಲೇಗೌಡ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಪುರಸಭೆ ಸದಸ್ಯರಾದ ಕೋಳಿಪ್ರಕಾಶ್, ನಟರಾಜು ಸೇರಿದಂತೆ ಹಲವು ಗಣ್ಯರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.

OBITUARY



Sri. Dhanakoti. B

Paduvarahalli, Mysore

DOB : 13.02.1947 - DOD : 04.01.2023

Last rites will be held on 05.01.2023, 11.00am at Gokulam Crematorium, Mysore

Deeply Mourned by : Family Members, Relatives & Friends
Mob : 93426 44292

CHANGE OF NAME

Be it Known to all That, I "SUBHA H P" & "SHUBHA HOMMA PASHUPATHI " have assumed the name from "SUBHA H P" & SHUBHA HOMMA PASHUPATHI to that of "SHUBHA HOMMA PASHUPATHI" out of my own free will. henceforth I shall be called recognized Know Shall set & Subscribe my Signature as " SHUBHA HOMMA PASHUPATHI vide my Affidavit on 04.01.2023 Sworn to this effect before the Notary B S PRASHANTH -Tel: 9019090940(M) at Mysuru

SD/- SHUBHA HOMMA PASHUPATHI

INDUSTRIAL SHED AVAILABLE FOR RENT/SALE

At Bannimantap, Opp. Railway Goods Shed, Mandi Mohalla, Mysore, with shed measuring 6500 sq.ft.in land measuring 14,500 sq.ft. with compound wall, electricity power and bore-well water.

Contact: Krishna: 9342879564



FLAT FOR SALE

NEWLY BUILT 3 BHK LUXURY FLAT FOR SALE @ YADAVGIRI NEAR DASAPRAKASH PARADISE

Contact : 99722 75566

TEACHER TRAINING PROGRAMS

IMKTA INDIA MYSORE

IMKTA Since 2003

WWW.IMKTA.IN

CELEBRATION 20 YEARS ANNIVERSARY

20 years of success in PreSchool Teacher Training and Placements



DIPLOMA MONTESSORI/ PRIMARY TEACHER TRAINING

- FOR SSLC, PUC OR ANY GRADUATES
- REGULAR / SATURDAY WITH PRACTICAL TRAINING
- NEW NEP BASED CURRICULUM FOLLOWED

- 30,000+ ALUMNI
- 22 BRANCHES IN INDIA
- 800+ SCHOOL PARTNERSHIP

Online course available

SRIRAMPURA BRANCH : ALPHA INTERNATIONAL SCHOOL, NEAR RING ROAD JUNCTION

DOWNLOAD IMKTA APP Google play

782 993 7469

ಬೇಕಾಗಿದ್ದಾರೆ

ನಿಮ್ಮ ಸ್ಥಳೀಯ ಜಾಗದಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ

* **ಕಲೆಕ್ಷನ್ ಎಕ್ಸಿಕ್ಯೂಟಿವ್ಸ್ (ಪುರುಷರು) :**
ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟು (ದ್ವಿಚಕ್ರ ವಾಹನ ಕಡ್ಡಾಯ)
* **ಟೆಲಿಕಾಲರ್ / ಬ್ಯಾಕ್ ಆಫೀಸ್ ಎಂಪ್ಲಾಯೀಸ್ (ಮಹಿಳೆಯರಿಗೆ)**
ವಿದ್ಯಾರ್ಹತೆ: ಪಿಯುಸಿ ಮೇಲ್ಪಟ್ಟು (ಕನ್ನಡ ಮತ್ತು ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ). ಸ್ಥಳ: ಮೈಸೂರು ಮಾತ್ರ

ನೇರವಾಗಿ ಬಂದವರಿಗೆ ಆದ್ಯತೆ

ಸಂದರ್ಶನ ದಿನಾಂಕ: 5, 6, 7ನೇ ಜನವರಿ 2023. ಸಮಯ: ಬೆಳಿಗ್ಗೆ 10.30 ರಿಂದ ಸಂಜೆ 5.30

ವಿಳಾಸ: #328/1, ಮೊದಲನೇ ಮಹಡಿ, ಎನ್.ಎಸ್. ರಸ್ತೆ, ರಾಘವೇಂದ್ರ ಸ್ವಾಮಿ ದೇವಸ್ಥಾನದ ಎದುರು, ಶಾಂತಲಾ ಟಾಕೀಸ್ ಹತ್ತಿರ, ಕೆ.ಆರ್. ಮೊಹಲ್ಲಾ, ಮೈಸೂರು-570 024

ಸಂಪರ್ಕಿಸಿ: **9611130538, 9845206152**

JSS MAHAVIDYAPEETHA
JSS TECHNICAL EDUCATION DIVISION

JSS Technical Institutions Campus, Mysuru – 570 006

TENDER NOTIFICATION

No.: JSSSTU/Tender/2022-23 Dt: 03.01.2023

Sealed Tenders are invited from the reputed Registered Contractor / Service Provider for providing Housekeeping, Gardening and Waste / Debris Disposal at JSS Technical Institutions Campus, Mysuru.

- **For more details visit: www.jssstuniv.in**
- **Last date for submission of Tender Form is 14th January 2023 before 2 p.m.**

Sd/-
Director

16ನೇ ವರ್ಷದ ಸವಿನೆನಪು



ನಿಧನ : 05-01-2007


ಕೆ.ಎಸ್.ಆರ್.ಟಿ.ಸಿ. ಎಂ.ವಿ. ಗೋವಿಂದರಾಜು

ವಸಂತ, ಕಾವ್ಯಶ್ರೀ, ಅಶ್ವತ್‌ಗೌಡ, ಮೈದನಹಳ್ಳಿ

ನೀವು ನಮ್ಮನ್ನಗಲಿ ಹದಿನಾರು ವರ್ಷ ಕಳೆದರೂ ನಿಮ್ಮ ಸವಿನೆನಪು ಸದಾ ನಮ್ಮ ಮನದಲ್ಲಿ ಹಚ್ಚಹಸಿರಾಗಿರುತ್ತದೆ.ನಿಮ್ಮ ದಿವ್ಯ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುವ

ಅಕ್ಕ ಭಾವ ಮತ್ತು ಬಂಧು–ಮಿತ್ರರು

೫ನೇ ವರ್ಷದ ಪುಣ್ಯಸ್ಮರಣೆ



ದಿ॥ ಶ್ರೀ ಬಿ.ಎಸ್.ನಿಂಗಯ್ಯನವರು
ರಾಜ್ಯ ಬಿ.ಜೆ.ಪಿ ಹಿರಿಯ ಮುಖಂಡರು
ನೀವು ಇಂದಿಗೆ ನಮ್ಮನ್ನು ಅಗಲಿ ೫ ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ, ಗಂಡು ಮಕ್ಕಳು, ಮಗಳು / ಅಳಿಯ, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

MMCB

ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಜಗನ್ ಮೋಹನ ಅರಮನೆ ರಸ್ತೆ, ಮೈಸೂರು-24

ಸ್ಥಾಪನೆ - 1959

ಮೈಸೂರಿನ ಪ್ರಮುಖ 'ಎ' ಗ್ರೇಡ್ ಸಹಕಾರಿ ಬ್ಯಾಂಕ್

25 ವರ್ಷಗಳಿಂದ ಸತತವಾಗಿ 25% ಡಿವಿಡೆಂಟ್‌ನ್ನು ಸದಸ್ಯರುಗಳಿಗೆ ನೀಡಲಾಗುತ್ತಿದೆ ಮತ್ತು ನಿವ್ವಳ ಎನ್.ಪಿ.ಎ 0% ಇರುತ್ತದೆ.

ಮೈಸೂರು ಜನತೆಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು

ಆಕರ್ಷಕ ಠೇವಣಿಯ ಮೇಲೆ ಬಡ್ಡಿ ದರಗಳು

370 ದಿನಗಳಿಗೆ	7.5%
ಹಿರಿಯ ನಾಗರೀಕರಿಗೆ	8%

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

0821-2432938 / 2522759

ಬಂಡಿಪಾಳ್ಯ - 2489565 | ಹೆಬ್ಬಾಳ್ - 2515077

Mount Litera Zee School

A Prestigious CBSE School of Mysore

We Are Hiring!!!

Walk-in Interview on: 07.01.2023 (Saturday)
Timings: 09:30am – 03:00pm

Excellent job opportunities & Career growth await right candidates with sound subject knowledge and good communication skills.

- **Teachers - Kindergarten :**
Candidates with NTT/ Montessori Training.
- **Teachers - Grades I – X :**
Candidates with PGT/TGT for English, Mathematics, Science, Social Science, Hindi and Computer.
- **Librarian :**
Graduate/Post Graduate in Library Science preferably with experience.
- **Accountant :**
Candidates with B.Com/M.Com degree, having good communication skills, proficient in MS Office & Tally and with minimum 3 years experience in a reputed organization.

Candidates should carry their recent resume and be prepared for Demo class.

92/1-3 HD Kote Road, Rayankere Post, Mysore: 570008
Ph: 0821-2971010 / 8884300400 / 8884414356

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

KSBCL

(ಕರ್ನಾಟಕ ಸರ್ಕಾರದ ಉದ್ದಿಮೆ)

4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483641

No.KSBCL/DGMI/E-Proc/2020-21/025 Date: 02.01.2023

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯನಿರ್ವಾಹಕ ನಿರ್ದೇಶಕರು (ಹ&ಆ), ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ, ಬೆಂಗಳೂರು ಇವರು ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000ರ ಅನ್ವಯ KPWD / CPWD ಮತ್ತು MES ನಲ್ಲಿ ನೋಂದಾಯಿತ ವರ್ಗ–1 ಸಿವಿಲ್ ಗುತ್ತಿಗೆದಾರರು/ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂದರ ಟೆಂಡರ್ ಗಳನ್ನು ಆಹ್ವಾನಿಸಿದ್ದಾರೆ. ಇತರೆ ವಿವರಗಳನ್ನು ವೆಬ್‌ಸೈಟ್ ವಿಳಾಸ https://eproc.karnataka.gov.in ನಲ್ಲಿ ಪಡೆಯಬಹುದು.

ಕೆಲಸದ ಹೆಸರು: ಮೈಸೂರು, ಕೂರ್ಗಳ್ಳಿ ಡಿಪೋ ಆವರಣದಲ್ಲಿ ಹೆಚ್ಚುವರಿ ಗೋಡೌನ್ ಮತ್ತು ಹೆಚ್ಚುವರಿ ಕಛೇರಿ ಕಟ್ಟಡದ ನಿರ್ಮಾಣ ಕಾಮಗಾರಿಗಳು.

ಟೆಂಡರಿಗಿಟ್ಟ ಮೊತ್ತ: ರೂ 268.91 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). **ಇಎಂಡಿ:** ರೂ. 4,03,374/–. **ಕೆಲಸದ ಮುಕ್ತಾಯದ ಅವಧಿ:** 6 ತಿಂಗಳು (ಮಳೆಗಾಲ ಹೊರತುಪಡಿಸಿ)

1) ವಿಚಾರಣೆಯನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 18.01.2023ರ ಸಂಜೆ 4:00 ಗಂಟೆಯವರೆಗೆ. 2) ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: 20.01.2023ರ ಸಂಜೆ 4:00 ಗಂಟೆಗೆ. 3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 31.01.2023ರ ಸಂಜೆ 4:00 ಗಂಟೆಯವರೆಗೆ. 4) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 03.02.2023ರ ಸಂಜೆ 4:01 ಗಂಟೆಗೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)

ವಾಸಾಸಂಇ/ವಾಪ್ರ/ಜಿಎ/3843/2022–23

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಬೋಗಾದಿ, ಬ್ಯಾಂಕರ್ಸ್ ಬಡಾವಣೆ, 3ನೇ ಮೇನ್, 2ನೇ ಕ್ರಾಸ್, ಮನೆ ನಂ. 68ರಲ್ಲಿ ವಾಸವಾಗಿರುವ ಶ್ರೀ ಮಹದೇವ್ ರವರ ಮಗನಾದ ಶ್ರೀ ವಿವೇಕ್ ಎಂ. ಇವರ ಇರಾದೆಯಂತೆ ಸಮಸ್ತ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:

ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂಧ ಸ್ವತ್ತಿನ ಮಾಲೀಕರಾದ ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಕುವೆಂಪುನಗರ ಬಡಾವಣೆ, ವಿಶ್ವಮಾನವ ಜೋಡಿ ರಸ್ತೆ, ಮನೆ ನಂ. 438 ರಲ್ಲಿ ವಾಸವಾಗಿರುವ ಶ್ರೀ ಕಿಶನ್ ಎಸ್.ಬೇದರೆ ಬಿನ್ ಆರ್.ಎಸ್. ಬೇದರೆ ಕೋಂ ಆರ್.ಎಸ್. ಬೇದರೆ, ಇವರುಗಳೊಂದಿಗೆ ನಮ್ಮ ಕಕ್ಷಿದಾರರು ಸ್ವತ್ತುಗಳನ್ನು ಖರೀದಿಸುವ ಸಂಬಂಧ ದಿನಾಂಕ 8–9–2022 ರಂದು ಕ್ರಯದ ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಸದರಿ ಕ್ರಯದ ಕರಾರು ಪತ್ರದಂತೆ ಶುದ್ಧ ಕ್ರಯಪತ್ರವನ್ನು ಬರೆಯಿಸಿಕೊಳ್ಳಲು ಮುಂದಾಗಿರುತ್ತಾರೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾರದ್ದೇ / ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ತಕರಾರು ಇದ್ದಂತಹ ಸಂದರ್ಭದಲ್ಲಿ, ಸದರಿ ತಕರಾರನ್ನು ಸೂಕ್ತ ದಾಖಲಾತಿಗಳ ಸಹಿತ ಈ ಪ್ರಕಟಣೆಯ ದಿನಾಂಕ ದಿಂದ ಏಳು ದಿನಗಳ ಒಳಗಾಗಿ ಲಿಖಿತ ರೂಪ ದಲ್ಲಿ ನಮ್ಮ ಕಕ್ಷಿದಾರರಿಗಾಗಲೀ ಅಥವಾ ನಮ್ಮ ಕಚೇರಿಗಾಗಲೀ ನೋಂದಾಯಿತ ಅಂಚೆ ಮೂಲಕ ತಿಳಿಸತಕ್ಕದ್ದು. ಒಂದು ವೇಳೆ ಅಂತಹ ಯಾವುದೇ ತಕರಾರು ಬಾರದಿದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ನಿರ್ಭಾದಿತವಾಗಿದೆ ಎಂದು ತಿಳಿದು ಶುದ್ಧ ಕ್ರಯಪತ್ರವನ್ನು ಬರೆಸಿಕೊಳ್ಳಲು ಮುಂದಾಗುತ್ತಾರೆಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಐಟಂ ನಂಬರ್ 1:

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮುಳ್ಳೂರು ಗ್ರಾಮದ ಮೈಸೂರು ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸರ್ವೆ ನಂಬರ್ 239/3 ರಲ್ಲಿ ವಿಸ್ತೀರ್ಣ 1 ಎಕರೆ 06 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಲಾ.ಹಿ. ನಂ. 4 ; ಪಶ್ಚಿಮಕ್ಕೆ: ಲಾ.ಹಿ. ನಂ. 2 ; ಉತ್ತರಕ್ಕೆ: ಗ್ರಾಮದ ಗಡಿ ; ದಕ್ಷಿಣಕ್ಕೆ: ಲಾ.ಹಿ. ನಂ. 4.

ಐಟಂ ನಂಬರ್ 2:

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮುಳ್ಳೂರು ಗ್ರಾಮದ ಮೈಸೂರು ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸರ್ವೆ ನಂಬರ್ 239/5 ರಲ್ಲಿ ವಿಸ್ತೀರ್ಣ 0–08–08 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಲಾ.ಹಿ. ನಂ. 4 ; ಪಶ್ಚಿಮಕ್ಕೆ: ಲಾ.ಹಿ. ನಂ. 2 ; ಉತ್ತರಕ್ಕೆ: ಗ್ರಾಮದ ಗಡಿ ; ದಕ್ಷಿಣಕ್ಕೆ: ಲಾ.ಹಿ. ನಂ. 4.

ಐಟಂ ನಂಬರ್ 3:

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮುಳ್ಳೂರು ಗ್ರಾಮದ ಮೈಸೂರು ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸರ್ವೆ ನಂಬರ್ 61/1 ರಲ್ಲಿ ವಿಸ್ತೀರ್ಣ 0–16–08 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಲಾ.ಸ.ನಂ. 60 ; ಪಶ್ಚಿಮಕ್ಕೆ: ಲಾ.ಹಿ.ನಂ. 239 ; ಉತ್ತರಕ್ಕೆ: ಗ್ರಾಮದ ಗಡಿ ; ದಕ್ಷಿಣಕ್ಕೆ: ಲಾ.ಹಿ. ನಂ. 2.

ಒಟ್ಟು ಜುಮ್ಲಾ ಮೂರು ಐಟಂ ಸ್ವತ್ತುಗಳ ವಿಸ್ತೀರ್ಣ 1 ಎಕರೆ 31 ಗುಂಟೆ ಜಮೀನು.

Sd/- S. Vivek, Advocate
No. 452, 1st Floor, Room No. 5, "Shree Nanjundeshwara Complex", M.G. Road, Fort Mohalla, Mysuru-570 004.
Date: 4-1-2023

